ಪ್ರಚೋದನೆ

# ಲಂಕೇಶ್


11 ಮಾರ್ಚ್ 2015 ಪುಟ 20 ರೂ. 15/-



ಭಗವದ್ಗೀತೆ ಮತ್ತು ಬಂಜಗೆರೆ ಜಯಪ್ರಕಾಶ್



# ಇರಲೇ ಬೇಕು




# ಮನಕಲಕುವ 'ಮೈತ್ರಿ'

## ವಮೊಗ್ಗಕ್ಕೆ ಬೆಂಕಿ ಇಟ್ಟ ಕೋಮುವಾದಿಗಳು

# ಬಹಿಷ್ಕಾರದ ಬಲೆಯಲ್ಲಿ ರಾಘು






# ಪಿ.ಲಂಕೇಶ್ ಅವರ 80ನೇ ಹುಟ್ಟುಹಬ್ಬ ಮತ
# "ಗೌರಿ ಲಂಕೇಶ್" ಪತ್ರಿಕೆಯ
# 10ನೇ ವಾರ್ಷಿಕೋತ್ಸವ

**ಮಾರ್ಚ್ 8, 2015,**

**ಕುವೆಂಪು ರಂಗಮಂದಿರ, ಕಿಮ್ಸ್ ಆವರಣ, ಬೆಂಗಳೂರು**

## ಮಧ್ಯಾಹ್ನ 2.00

ಉದ್ಘಾಟನೆ
ಸ್ವಾತಂತ್ರ್ಯ ಹೋರಾಟಗಾರ
ಎಚ್.ಎಸ್.ದೊರೆಸ್ವಾಮಿ

'ಲಂಕೇಶ್ ನೆನಪು'
ಖ್ಯಾತ ಸಾಹಿತಿ
ದೇವನೂರ ಮಹಾದೇವ

'ಲಂಕೇಶ್ ಪ್ರಕಾಶನ'ದ ಪುಸ್ತಕಗಳ ಬಿಡುಗಡೆ
ಇಂದಿರಾ ಲಂಕೇಶ್

'ಪುಟಾಣಿ ಲಂಕೇಶ್ ಪುಸ್ತಕ ಮಾಲೆ' ಉದ್ಘಾಟನೆ-
ಇಶಾ ಲಂಕೇಶ್

'ರಾಜ್ಯದಲ್ಲಿ ಪತ್ರಿಕೆಯ ಪಾತ್ರ'
ಪತ್ರಕರ್ತ ಬಿ.ಎಂ.ಬಷೀರ್

'ಲಂಕೇಶ್ ದೃಷ್ಟಿಕೋನದಲ್ಲಿ ಮಹಿಳೆ'
ಚಿಂತಕಿ ಮತ್ತು ಸಾಹಿತಿ
ಡಾ.ಎಂ.ಎಸ್. ಆಶಾದೇವಿ

ಅಧ್ಯಕ್ಷತೆ
ಗೌರಿ ಲಂಕೇಶ್

ಸ್ವಾಗತ ಮತ್ತು ನಿರ್ವಹಣೆ
ಶಶಿಧರ್ ಹೆಮ್ಮಾಡಿ

## ಮಧ್ಯಾಹ್ನ 4.30ಕ್ಕೆ

ಚಿಂತನಗೋಷ್ಠಿ
ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ
ಸಂಕ್ರಮಣ ಸ್ಥಿತಿ ಮತ್ತು ಕಾಲದ ಕರೆ
ನೂರ್ ಶ್ರೀಧರ್
ದಿನೇಶ್ ಅಮೀನ್ ಮಟ್ಟು
ದು.ಸರಸ್ವತಿ

ನಿರ್ವಹಣೆ
ಡಾ. ವಾಸು

**ಎಲ್ಲರಿಗೂ ಆದರದ ಸ್ವಾಗತ**

## ಸಂಜೆ 6.00 ಗಂಟೆಗೆ

ಸಮಾರೋಪ ಸಮಾವೇಶ

ಮುಖ್ಯ ಅತಿಥಿ
ಮುಖ್ಯಮಂತ್ರಿ ಸಿದ್ದರಾಮಯ್ಯ

ವಿಶೇಷ ಅತಿಥಿ:
ಹಿರಿಯ ಹೋರಾಟಗಾರ
ಎ.ಕೆ.ಸುಬ್ಬಯ್ಯ

ಉಪಸ್ಥಿತಿ
ಎಚ್.ಎಲ್.ಕೇಶವಮೂರ್ತಿ
ಬಿ.ಚಂದ್ರೇಗೌಡ
ಕೆ. ಫಣಿರಾಜ್
ಸುರೇಶ್ ಭಟ್ ಬಾಕ್ರಬೈಲ್

ನಿರ್ವಹಣೆ
ದೊಡ್ಡಿಪಾಳ್ಯ ನರಸಿಂಹಮೂರ್ತಿ

## ಬಿಡುಗಡೆ ಆಗುತ್ತಿರುವ ಪುಸ್ತಕಗಳು

'ಬಿಟ್ಟು ಹೋದ ಪುಟಗಳು-ಸಂಗ್ರಹ 2'
ಪಿ.ಲಂಕೇಶ್


'ಅನಂತಮೂರ್ತಿ ಅನಂತರೀತಿ'
ಯು.ಆರ್.ಅನಂತಮೂರ್ತಿಯವರನ್ನು
ಕುರಿತ ಲೇಖನಗಳು

'ಬರ್ಟೋಲ್ಟ್ ಬ್ರೆಕ್ಟ್‌ನ ಆಯ್ದ ಪದ್ಯಗಳು'
ಅನುವಾದ ಕೆ.ಫಣಿರಾಜ್

'ಬರಡು ನೆಲದಲ್ಲೊಬ್ಬ ಮಾಲಿ'
ಜೋತಿಬಾ ಫುಲೆ ಕುರಿತ ಮಕ್ಕಳ ಪುಸ್ತಕ
ಅನುವಾದ ಸುರೇಶ್ ಭಟ್ ಬಾಕ್ರಬೈಲ್

'ಮಕ್ಕಳಿಗಾಗಿ ಕಾಡಿನ ಕತೆಗಳು'
ಕೆನ್ನೆತ್ ಆಂಡರ್ಸನ್
(ಅನುವಾದ: ನಡಹಳ್ಳಿ ವಸಂತ್)

# ದ್ದರಾಮಯ್ಯ ಯಾಕೆ ಮುಖ್ಯವಾಗುತ್ತಾರೆಂದರೆ...



ತೆವತ್ತು ಕಾಂಗ್ರೆಸ್ ಪಕ್ಷ ದೇಶದಾದ್ಯಂತ ತನ್ನ ಗ್ಗಿ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಮಯದಲ್ಲಿ ಭಾರೀ ಪ್ರಮಾಣದ ಗೆಲುವಿನ ಅಮಲ ಹೊಂದಿರುವ ಬಿಜೆಪಿ ಸರ್ವಾಧಿಕಾರಿ ಧೋರಣೆಯನ್ನು ಸುತ್ತಿದೆ. ಇವತ್ತು ದೆಹಲಿಯಲ್ಲಿ ಭೂಸ್ವಾಧೀನ ವೆ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರ ಅಣ್ಣಾ ಧರಣಿ ಕೂತಿದ್ದಾರೆ. ಆ ಮಸೂದೆ ವಿರುದ್ಧ ಸ್ವತಃ ಮಿತ್ರ ಪಕ್ಷಗಳಾದ ಶಿವಸೇನೆ, ಅಕಾಲಿ ದಳ, ನೇತೃತ್ವದ ಪಕ್ಷ, ಇತ್ಯಾದಿಗಳೂ ತಿರುಗಿಬಿದ್ದಿವೆ. ಅವಕಾಶವನ್ನು ಬಳಸಿಕೊಂಡು ನರೇಂದ್ರ ಮೋದಿ ವನ್ನು ತರಾಟೆಗೆ ತೆಗೆದುಕೊಳ್ಳಬೇಕಿದ್ದ ಕಾಂಗ್ರೆಸ್ ರಾಹುಲ್ ಗಾಂಧಿ ಸಂಸತ್ತಿನಿಂದಲೇ ಪಲಾಯನ ರೆ.

ಗ್ರೆಸ್ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವಾಗ ಒಂದಷ್ಟು ವರ್ಚಸ್ಸನ್ನು ತಂದಿರುವವರು ಮತ್ತು ನ್ನು ಉಳಿಸಿರುವವರು ಇಬ್ಬರು ಮಾತ್ರ. ಅವರಿಬ್ಬರೂ ಟಕದವರೇ. ಒಬ್ಬರು ಸಂಸತ್ತಿನಲ್ಲಿ ಕಾಂಗ್ರೆಸ್ ರಾಗಿರುವ ಮಲ್ಲಿಕಾರ್ಜುನ ಖರ್ಗೆ, ಇನ್ನೊಬ್ಬರು ಮುಖ್ಯಮಂತ್ರಿ ಆಗಿರುವ ಸಿದ್ದರಾಮಯ್ಯ.

ರ್ಗೆ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ನ್ನು ಕೊಡಲು ಮೋದಿ ಸರ್ಕಾರ ನಿರಾಕರಿಸಿರು ದ ಅವರ ಕೈಕಾಲುಗಳನ್ನು ಕಟ್ಟಿ ಹಾಕಿದಂತಾಗಿದೆ. ದರೆ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕನಿಗೆ ದ ವಿವಿಧ ಇಲಾಖೆಗಳಿಂದ ಮಾಹಿತಿಯನ್ನು ಕೇಳಿ ವ ಹಕ್ಕಿರುತ್ತದೆ. ಹಾಗೆ ಪಡೆದ ಮಾಹಿತಿಯನ್ನು ನ ಅಭ್ಯಸಿಸಿ ಸರ್ಕಾರವನ್ನು ತರಾಟೆಗೆ ತೆಗೆದು ವುದು ಸುಲಭವಾಗುತ್ತದೆ. ಆದರೆ ಖರ್ಗೆಯವರಿಗೆ ತ್ತನ್ನು ನಿರಾಕರಿಸುವ ಮೂಲಕ ಸಂಸತ್ತಿನಲ್ಲಿ ಅವರ ವನ್ನು ಕಡಿತ ಮಾಡುವ ಹುನ್ನಾರ ಮೋದಿ ದ್ದು. ಆದರೂ ಖರ್ಗೆಯವರು ಈ ಎಲ್ಲ ಗಳ ನಡುವೆಯೂ ಅವಕಾಶ ಸಿಕ್ಕಾಗಲೆಲ್ಲ ಮೋದಿ ಕ್ಕೆ ಮಂಗಳಾರತಿ ಮಾಡುತ್ತಾ ಕಾಂಗ್ರೆಸ್‌ನ ಮಾನ ದೆಯನ್ನು ಉಳಿಸಿದ್ದಾರೆ. ಆದಕ್ಕೇ ಈ ಪತ್ರಿಕೆ ಅವರನ್ನು ಕಾಂಗ್ರೆಸ್ ಪಕ್ಷದ 'ಗುಲಾಬಿ' ಎಂದು ದ್ದು.

ಷ್ಟಿ ಸಿದ್ದರಾಮಯ್ಯನವರಿಗೆ ಬಂದರೆ ಸುಮಾರು ದಶಕದ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ಘನತೆಯನ್ನು ತಂದಿರುವವರು ಅವರು. ಇಂತಹ ಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ಕೊಂಡ ಕ್ಷಣದಿಂದ ಅವರಿಗೆ ಕಿರುಕುಳ ದುವವರು ವಿರೋಧ ಪಕ್ಷಗಳಲ್ಲ, ಬದಲಾಗಿ ಕಾಂಗ್ರೆಸ್ ಪಕ್ಷದವರು ಎಂಬುದೇ ವಿಪರ್ಯಾಸ.

ರಾಮಯ್ಯನವರು ನನಗೆ ಇಷ್ಟವಾಗಲು ಹಲವು ಳಿವೆ. ಅದರಲ್ಲಿ ಒಂದು ಅವರು ಎಂದೂ ಕಾರಣ ಮಾಡಿದವರಲ್ಲ ಎಂಬುದು. ಅದಕ್ಕೊಂದು ರಣೆಯನ್ನು ಕೊಡಬಲ್ಲೆ. ಉಡುಪಿಯಲ್ಲಿದ್ದ ಕನಕ ವನ್ನು ಅಷ್ಟಮಠಗಳ ಪೀಠಾಧಿಪತಿಗಳು ಧ್ವಂಸ ಗ ಅವರ ವಿರುದ್ಧ ಮೊದಲು ಪ್ರತಿಭಟಿಸಿದ್ದು ಕೋಮು ಸೌಹಾರ್ದ ವೇದಿಕೆ. ಅನಂತರ ಆ ದೊಂದಿಗೆ ಕುರುಬ ಸಂಘಟನೆಗಳೂ ಸೇರಿದಂತೆ ಂಪುಗಳು ಕೈಜೋಡಿಸಿದವು. ಆಗಲೂ ತಾವು ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ಮಯ್ಯನವರು ಆ ಹೋರಾಟದೊಂದಿಗೆ ಕೊಂಡಿರಲಿಲ್ಲ. ಆದರೆ ಅದು ಯಾವಾಗ ಎಲ್ಲ ದಮನಿತ ಸಮುದಾಯಗಳ ಆಂದೋಲನವಾಯಿತೋ ಆಗ ಸಿದ್ದರಾಮಯ್ಯನವರೂ ತಮ್ಮ ದನಿಗೂಡಿಸಿದರು. ಆ ಹೋರಾಟದ ಭಾಗವಾಗಿ ಬೆಂಗಳೂರಿನ ಪ್ಯಾಲೆಸ್ ಮೈದಾನದಲ್ಲಿ ಬೃಹತ್ ಸಭೆಯನ್ನು ಆಯೋಜಿಸಲಾಗಿತ್ತು. ಆ ಸಭೆಯಲ್ಲೂ ಸಿದ್ದರಾಮಯ್ಯ ಎಲ್ಲಾ ದಮನಿತ ಸಮುದಾಯಗಳ ಪರವಹಿಸಿ ಮಾತಾಡಿದ್ದರು.

ಕಳೆದ ಒಂದು ದಶಕದಿಂದ ಭ್ರಷ್ಟರು, ಜಾತಿವಾದಿಗಳು, ಕೋಮುವಾದಿಗಳು, ಸೈದ್ಧಾಂತಿಕ ನೈತಿಕತೆ ಇಲ್ಲದವರು, ಜನದ್ರೋಹಿಗಳು ಈ ರಾಜ್ಯದ ಚುಕ್ಕಾಣಿಯನ್ನು ಹಿಡಿದದ್ದು ಒಂದು ದೊಡ್ಡ ದುರಂತ. ಆದರೆ ಇವತ್ತು ಯಾವ ಭ್ರಷ್ಟಾಚಾರದ ಆರೋಪವನ್ನು ಹೊತ್ತಿರದ, ಜಾತಿವಾದಿ ಅಲ್ಲದ, ಕೋಮು ಸೌಹಾರ್ದ ಬಯಸುವ, ಸೈದ್ಧಾಂತಿಕ ಸ್ಪಷ್ಟತೆ ಇರುವ, ಜನಪರ ಕಾಳಜಿ ಹೊಂದಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದರಿಂದಲೇ ಅವರು ಆ ಸ್ಥಾನಕ್ಕೆ ಘನತೆ ತಂದುಕೊಟ್ಟಿದ್ದಾರೆ ಅಂದದ್ದು.

ಇಲ್ಲಿ ಕಾಂಗ್ರೆಸ್‌ನವರು ಒಂದು ಅಂಶವನ್ನು ನೆನಪಿಟ್ಟುಕೊಳ್ಳಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದಕ್ಕೆ ಎರಡು ಪ್ರಮುಖ ಕಾರಣಗಳಿದ್ದವು. ಮೊದಲನೆಯದು ಬಿಜೆಪಿ ತನ್ನ ಭ್ರಷ್ಟ ಆಡಳಿತದಿಂದಾಗಿ ಕನ್ನಡಿಗರಲ್ಲಿ ಅಸಹ್ಯ ಹುಟ್ಟಿಸಿದ್ದು ಮತ್ತು ಕಾಂಗ್ರೆಸ್ ಗೆದ್ದರೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗುತ್ತಾರೆಂಬ ಭರವಸೆ ಇದ್ದದ್ದು. ಸಿದ್ದರಾಮಯ್ಯನವರಿಗೆ ತಮ್ಮ ಜಾತಿ ಮುಖ್ಯವಾಗಿಲ್ಲದಿದ್ದರೂ ಈ ರಾಜ್ಯದ ಕುರುಬ ಸಮುದಾಯಕ್ಕೆ ಅವರೇ ನಾಯಕ. ಜೊತೆಗೆ ಅಹಿಂದ ಸಮುದಾಯಗಳ ಬಗೆಗಿನ ಅವರ ಕಾಳಜಿಯಿಂದಾಗಿಯೇ ಈ ರಾಜ್ಯದ ಹಲವಾರು ಹಿಂದುಳಿದ ವರ್ಗಗಳು, ಜಾತಿಗಳು, ದಲಿತರು, ಅಲ್ಪಸಂಖ್ಯಾತರು ಮತ್ತು ಪ್ರಗತಿಪರರು ಅವರನ್ನು ಬೆಂಬಲಿಸಿದ್ದು. ಕಾಂಗ್ರೆಸ್ ಪಕ್ಷವನ್ನು ವಿರೋಧಿಸುವ ನಮ್ಮಂತಹವರೂ ಕಾಂಗ್ರೆಸ್ ಬೆಂಬಲಕ್ಕೆ ನಿಂತದ್ದಕ್ಕೂ ಕಾರಣ ಸಿದ್ದರಾಮಯ್ಯ. ಅವರ ಬದಲಿಗೆ ಬೇರೆ ಯಾರೋ ಪರಮೇಶಿಯೋ, ಕಾಕೇಶಿಯೋ ಮುಖ್ಯಮಂತ್ರಿ ಆಗುತ್ತಾರೆ ಎಂದಿದ್ದರೆ ಕಾಂಗ್ರೆಸ್‌ಗೆ ಸಿಕ್ಕಷ್ಟು ಜನ ಬೆಂಬಲ ಖಂಡಿತವಾಗಿಯೂ ಸಿಗುತ್ತಿರಲಿಲ್ಲ.

ನೆನಪಿದೆಯೇ ಬಿಜೆಪಿ ಆಡಳಿತಾವಧಿಯಲ್ಲಿ ರಾಜ್ಯವನ್ನು ಕೊಳ್ಳೆಹೊಡೆಯುತ್ತಿದ್ದ ಬಳ್ಳಾರಿ ರೆಡ್ಡಿಗಳ ಅಟ್ಟಹಾಸದ ಎದುರು ಇತರೆ ಕಾಂಗ್ರೆಸ್ ನಾಯಕರು ತೆಪ್ಪಗಿದ್ದಾಗ ಸಿದ್ದರಾಮಯ್ಯನವರೇ ವಿಧಾನಸಭೆಯಲ್ಲಿ ತೊಡೆತಟ್ಟಿ ಆ ಲೂಟಿಕೋರರ ವಿರುದ್ಧ ಯುದ್ಧಕ್ಕೆ ಇಳಿದದ್ದು. ಅವತ್ತು ಬಳ್ಳಾರಿತನಕ ಕಾಂಗ್ರೆಸ್ಸಿಗರು ಮಾಡಿದ ಯಶಸ್ವೀ ಪಾದಯಾತ್ರೆಗೆ ಈ ರಾಜ್ಯದ ಚಿಂತಕರು, ಜನಪರ ಹೋರಾಟಗಾರರು, ಖ್ಯಾತ ಲೇಖಕರು, ವಿವಿಧ ಸಂಘಟನೆಗಳು ಮಾತ್ರವಲ್ಲದೆ ಅಪಾರ ಸಂಖ್ಯೆಯಲ್ಲಿ ಜನಸಾಮಾನ್ಯರೂ ಸ್ಪಂದಿಸಿದ್ದು ಕಾಂಗ್ರೆಸ್‌ನಲ್ಲಿ ಯಾರೋ ಪಾಂಡೆಯೋ, ಕುಮಾರನೋ ಇದ್ದಾರೆ ಎಂಬ ಕಾರಣಕ್ಕಲ್ಲ, ಬದಲಾಗಿ ಸಿದ್ದರಾಮಯ್ಯ ಆ ಪಾದಯಾತ್ರೆಯ ನೈತಿಕಪ್ರಜ್ಞೆ ಆಗಿದ್ದರು ಎಂಬ ಕಾರಣಕ್ಕೆ. ಸಿದ್ದರಾಮಯ್ಯನವರ ವರ್ಚಸ್ಸು ಅಂತಹದ್ದು. ಅವರಿಗೆ ಸಾಟಿಯಾಗಬಲ್ಲ ಇನ್ನೊಬ್ಬ ವರ್ಚಸ್ವೀ ಜನಪರ ನಾಯಕ ರಾಜ್ಯ ಕಾಂಗ್ರೆಸ್‌ನಲ್ಲಲ್ಲ, ಈ ರಾಜ್ಯದಲ್ಲೇ ಇಲ್ಲ.

ಸಿದ್ದರಾಮಯ್ಯ ಈ ರಾಜ್ಯದ ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಖಚಿತವಾಗುತ್ತಿದ್ದಂತೆ ಅದನ್ನು ತಪ್ಪಿಸಲು ಕಾಂಗ್ರೆಸ್‌ನ ಹಲವು ನಾಯಕರೇ ಮುಂದಾದರು. ಮೊದಲು 'ಸಿದ್ದರಾಮಯ್ಯ ಹೊರಗಿನವರು' ಎಂಬ ಪಿತೂರಿ ಶುರುಹಚ್ಚಿಕೊಂಡರು. ಅದಕ್ಕೆ ಕಾಂಗ್ರೆಸ್ ಹೈಕಮಾಂಡ್ ಕಿವಿಗೊಡಲಿಲ್ಲ. ಆಮೇಲೆ 'ದಲಿತನೇ ಮುಖ್ಯಮಂತ್ರಿಯಾಗಲಿ' ಎಂದು ಕೂಗು ಹಾಕಿ ಖರ್ಗೆಯವರನ್ನು ಮುಂದೆ ಬಿಟ್ಟರು. ಆದರೆ ಯಾವಾಗ ಚುನಾವಣೆಯಲ್ಲಿ ಗೆದ್ದಿದ್ದ ಕಾಂಗ್ರೆಸ್ ಶಾಸಕರಲ್ಲಿ ಹೆಚ್ಚಿನವರು - ದಲಿತ ಶಾಸಕರೂ ಸೇರಿದಂತೆ - ಸಿದ್ದರಾಮಯ್ಯನವರ ಪರ ನಿಂತರೋ ಆಗ ಸ್ವತಃ ಅಖಾಡಕ್ಕಿಳಿದಿದ್ದ ಖರ್ಗೆಯವರೂ ಸುಮ್ಮನಾಗಬೇಕಾಯಿತು.

ಅವತ್ತಿನಿಂದ ಪ್ರಾರಂಭವಾದ 'ಅಸಹಕಾರ' ನಿಲುವನ್ನು ಹಲವು ಕಾಂಗ್ರೆಸ್ ನಾಯಕರು ಇವತ್ತಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಎಷ್ಟರ ಮಟ್ಟಿಗೆಂದರೆ ಅವರ ಸರ್ಕಾರ ಜಾರಿಗೆ ತರಲು ಬಯಸಿದ್ದ ಮೌಢ್ಯ ವಿರೋಧಿ ಮಸೂದೆ ಬಗ್ಗೆ ಹಿಂದೂ ಮೂಲಭೂತವಾದಿಗಳು ದೊಡ್ಡ ರಗಳೆ ತೆಗೆದಾಗ ಸಿದ್ದು ಪರ ಯಾವ ಕಾಂಗ್ರೆಸ್ ನಾಯಕನೂ ನಿಲ್ಲಲಿಲ್ಲ. ಇಂತಹದ್ದು ಹಲವು ಬಾರಿ ನಡೆದಿದೆ. ಇದೆಲ್ಲ ಒಂದು ರೀತಿಯಲ್ಲಿ ಸಿದ್ದರಾಮಯ್ಯನವರ ಕೈಕಾಲುಗಳನ್ನು ಕಟ್ಟಿಹಾಕಿದೆ.


ಇಷ್ಟೆಲ್ಲದರ ನಡುವೆಯೂ ಸಿದ್ದರಾಮಯ್ಯನವರನ್ನು ಕೆಳಗಿಳಿಸುವಂತಹ ಜರೂರತ್ತೇನು ಕಾಂಗ್ರೆಸ್ ಪಕ್ಷಕ್ಕೆ ಬಂದಿಲ್ಲ. ಅವರ ಅವಧಿಯಲ್ಲಿ ಒಂದೇ ಒಂದು ಹಗರಣ ತಲೆ ಎತ್ತಿಲ್ಲ. ಯಾವ ಕಾಂಗ್ರೆಸ್ ಪಕ್ಷದ ಶಾಸಕ ಅಥವಾ ಮಂತ್ರಿ ಅನೈತಿಕ (ಬ್ಲೂ ಫಿಲಂ ವೀಕ್ಷಣೆ, ಅತ್ಯಾಚಾರ, ಅಕ್ರಮ ಸಂಬಂಧ, ಇತ್ಯಾದಿ) ಅವ್ಯವಹಾರಗಳಲ್ಲಿ ಸಿಕ್ಕಿಹಾಕಿಕೊಂಡಿಲ್ಲ. ಬಳ್ಳಾರಿ ರೆಡ್ಡಿ ತರಹದ ಲೂಟಿ ಗ್ಯಾಂಗ್ ಈಗ ರಾಜ್ಯದಲ್ಲಿ ಸಕ್ರಿಯವಾಗಿಲ್ಲ. ಯಾವ ನಾಯಕನೂ ಜೈಲಿನ ಕಂಬಿ ಎಣಿಸಿಲ್ಲ.

ಅದೆಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯನವರ ಸರ್ಕಾರ ನಿಜಕ್ಕೂ ಬಡವರ, ದಮನಿತ ಸಮುದಾಯಗಳ ಪರವಾಗಿ ಕೆಲಸ ಮಾಡುತ್ತಿದೆ. ಅವರು ಹಿಂದುಳಿದ ವರ್ಗಗಳ, ದಲಿತ, ಅಲ್ಪಸಂಖ್ಯಾತ ಸಮುದಾಯಗಳ ಏಳಿಗೆಗೆ ಹತ್ತಾರು ಯೋಜನೆಗಳನ್ನು ಕೊಟ್ಟಿದ್ದಾರೆ, ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ. ಚೆಡ್ಡಿಗಳು ಇವತ್ತಿಗೂ ಕರಾವಳಿ ಮತ್ತು ಶಿವಮೊಗ್ಗೆ ತರಹದ ಜಾಗೆಗಳಲ್ಲಿ ಕೋಮು ಗಲಭೆಗಳನ್ನು ಹುಟ್ಟುಹಾಕುವುದರಲ್ಲಿ ನಿರತರಾಗಿದ್ದರೂ ಬಹಳಷ್ಟು ಕಡೆ ಜನ ಒಂದಿಷ್ಟು ನೆಮ್ಮದಿಯಿಂದ ಬದುಕುವಂತಹ ವಾತಾವರಣ ಸಿದ್ದು ಅವಧಿಯಲ್ಲಿ ನಿರ್ಮಾಣವಾಗಿದೆ.

ಆದರೂ ಇವತ್ತು ಸಿದ್ದರಾಮಯ್ಯನವರನ್ನು ಕೆಳಗಿಳಿಸಿ ಮುಖ್ಯಮಂತ್ರಿ ಸ್ಥಾನದಲ್ಲಿ ದಲಿತನನ್ನು ಕೂರಿಸಬೇಕು ಎಂಬ ಪಿತೂರಿ ಕಾಂಗ್ರೆಸ್ ವಲಯದಲ್ಲೇ ನಡೆಯುತ್ತಿದೆ. ಆ ಪಿತೂರಿಯ ಹಿಂದೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಪರಮೇಶ್ವರ್ ಇರುವುದು ಎಲ್ಲರಿಗೂ ಗೊತ್ತಿದೆ.

ಇಲ್ಲಿ ಸಿದ್ದರಾಮಯ್ಯನವರ ಜೊತೆ ಒಂದು ನಿಮಿಷ ಪರಮೇಶ್ವರ್ ಅವರನ್ನು ಹೋಲಿಸಿ ನೋಡಿ. ಸಿದ್ದು ಹುಟ್ಟಿದ್ದು ಬಡ ಕುರುಬ ಕುಟುಂಬದಲ್ಲಿ; ಪರಮೇಶ್ವರ್ ಹುಟ್ಟಿದ್ದು ಬಲಿತ ದಲಿತ ಕುಟುಂಬದಲ್ಲಿ. ಸಿದ್ದು ಓದಿದ್ದು ತಮ್ಮ ಹಳ್ಳಿಯಲ್ಲಿ ಆಮೇಲೆ ಮೈಸೂರಿನಲ್ಲಿ; ಪರಮೇಶ್ವರ್ ಓದಿದ್ದು ಆಸ್ಟ್ರೇಲಿಯಾದಲ್ಲಿ. ಸಿದ್ದು ಮುಂದೆ ಬಂದಿದ್ದು ಜನಪರ, ರೈತಪರ ಹೋರಾಟಗಳ ಮೂಲಕ; ಪರಮೇಶ್ವರ್ ರಾಜಕೀಯದಲ್ಲಿ ಮೇಲೆದ್ದದ್ದು ತನ್ನ ಹಣಬಲದ ಮೂಲಕ. ಇಲ್ಲಿ ಯಾರು ದಲಿತ? ಯಾರು ಬಲಿತ?

ಜೊತೆಗೆ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಮರುಜೀವ ಕೊಟ್ಟಿದ್ದು ಸಿದ್ದು; ಈ ಹಿಂದೆ ಕಾಂಗ್ರೆಸ್ ರಾಜ್ಯದಲ್ಲಿ ಸೋತು ಸುಣ್ಣವಾಗುವಂತೆ ಮಾಡಿದ್ದು ಕೃಷ್ಣ-ಪರಮೇಶಿ



ತರಹದ ಪಟಾಲಂ. ಸಿದ್ದು ಕಾಂಗ್ರೆಸ್ ಅನ್ನು ಗೆಲ್ಲಿಸಿದ್ದು ಅವರಿಗೆ ಬಹುಸಮುದಾಯಗಳ ಬೆಂಬಲವಿದ್ದಿದ್ದರಿಂದ; ಪರಮೇಶ್ವರ್ ಸ್ವತಃ ಸೋತಿದ್ದು ತಮ್ಮ ದಲಿತ ಸಮುದಾಯದ ಬೆಂಬಲವನ್ನು ಪಡೆಯುವಲ್ಲೂ ವಿಫಲರಾದ್ದರಿಂದ. ಇಂತಹ ಪರಮೇಶ್ವರ್ ಇವತ್ತು ಸಿದ್ದು ಇಳಿಸಿ ತಾನೇ ಮುಖ್ಯಮಂತ್ರಿ ಆಗಬೇಕೆಂದು ಹರಸಾಹಸ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ.

ದಲಿತರಿಗೆ ಸಿದ್ದು ಅನ್ಯಾಯ ಮಾಡಿದ್ದಾರೆ ಎಂಬುದು ನಿಜವಾಗಿದ್ದರೆ ಅವರನ್ನು ಕೆಳಗಿಳಿಸಬಹುದಿತ್ತು. ಆದರೆ ಸಿದ್ದರಾಮಯ್ಯ ಹಾಗೇನೂ ಮಾಡಿಲ್ಲ. ಬದಲಾಗಿ ಅವರ ಸಂಪುಟದಲ್ಲಿ ದಲಿತರಿಗೆ ಹೆಚ್ಚು ಪ್ರಾಮುಖ್ಯತೆ ಸಿಕ್ಕಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುವ ಮೂಲಕ ಅದೆಷ್ಟೋ ಬಡ ದಲಿತರು ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ. ದಲಿತರ ಉದ್ಧಾರಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಸಿದ್ದು ಎತ್ತಿಟ್ಟಿದ್ದಾರೆ. ವಾಸ್ತವವಾಗಿ ಮುಖ್ಯಮಂತ್ರಿ ಆಗಿದ್ದ ದಲಿತ ನಾಯಕಿ ಮಾಯಾವತಿಗಿಂತಲೂ ಸಿದ್ದರಾಮಯ್ಯ ದಲಿತರ ಪರವಾಗಿ ಕೆಲಸ ಮಾಡಿದ್ದಾರೆ. ಇಷ್ಟೆಲ್ಲ ಮಾಡಿದ್ದರೂ ಅವರನ್ನು ಅಧಿಕಾರದಿಂದ ಇಳಿಸಿ ಎಂದು ಬೊಬ್ಬೆ ಹೊಡೆಯುತ್ತಿರುವ ಸ್ವಘೋಷಿತ ದಲಿತ ನಾಯಕರಿಗೆ ಏನನ್ನಬೇಕೋ ಗೊತ್ತಿಲ್ಲ.

ಈ ರಾಜ್ಯಕ್ಕೆ ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು,

## ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಹಿಂದುಳಿದ ವರ್ಗದವರು ಮುಖ್ಯಮಂತ್ರಿಗಳಾಗಿ 'ಸೇವೆ' ಸಲ್ಲಿಸಿದ್ದು ಸಾಕು; ಈಗಲಾದರೂ ದಲಿತನೊಬ್ಬ ಮುಖ್ಯಮಂತ್ರಿ ಆಗಲಿ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಕೆಳಗಿಳಿಯಬೇಕು ಎನ್ನುವುದಾದರೆ ಆಗ ಆ ಹುದ್ದೆಗೆ ಖರ್ಗೆ ಮತ್ತು ಶ್ರೀನಿವಾಸ್ ಪ್ರಸಾದ್ ತರಹದವರು ಅರ್ಹರೇ ಹೊರತು ಖಂಡಿತವಾಗಿಯೂ ಪರಮೇಶ್ವರ್ ಅಲ್ಲವೇ ಅಲ್ಲ.

'ಧಣಿ' ಪರಮೇಶ್ವರ್ ಕೊಟ್ಟ 'ಭಕ್ಷೀಸನ್ನು' ಪಡೆದು ಇವತ್ತು "ಸಿದ್ದರಾಮಯ್ಯ ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ದಲಿತನಿಗೆ ಬಿಟ್ಟುಕೊಡಬೇಕು" ಎಂದು ಬೊಂಬಡಬಜಾಯಿಸುತ್ತಿರುವವರ ವಾದ ತಮಾಷೆಯಾಗಿದೆ. ಮುಖ್ಯಮಂತ್ರಿ ಸ್ಥಾನ ಸಿದ್ದರಾಮಯ್ಯನವರ ಮನೆ ಆಸ್ತಿಯೂ ಅಲ್ಲ; 'ಸಿದ್ಧಾರ್ಥ' ಎಂಬ ಖಾಸಗಿ ಸಂಸ್ಥೆಯ ಕುರ್ಚಿಯೂ ಅಲ್ಲ ಅದನ್ನು ಹಾಗೆ ಅವರು 'ಬಿಟ್ಟುಕೊಡುವುದಕ್ಕೆ'! ಅದು ಪ್ರಜಾಸತ್ತಾತ್ಮಕವಾಗಿ ಜನರು ಅವರಿಗೆ ಕೊಟ್ಟಿರುವ ಮತ್ತು ಅವರು ತಮ್ಮ ವರ್ಚಸ್ಸಿನಿಂದ ಗಳಿಸಿರುವ ಹುದ್ದೆ ಅದು; ಕಾಂಗ್ರೆಸ್ ಪಕ್ಷದ ಶಾಸಕರೂ ಮತ್ತು ನಾಯಕರೂ ಸಿದ್ದು ಅವರನ್ನು ಆಯ್ಕೆ ಮಾಡಿರುವ ಸ್ಥಾನಮಾನವದು.

ಹಲವಾರು ಅಡಚಣೆಗಳ ನಡುವೆಯೂ ಸಿದ್ದರಾಮಯ್ಯ ಸಮರ್ಥವಾಗಿ ಸರ್ಕಾರವನ್ನು ನಡೆಸುತ್ತಿದ್ದಾರೆ. ಪರಮೇಶ್ವರ್ ತರಹದವರ ಸ್ವಾರ್ಥ ಮತ್ತು ದುರಾಶೆಯನ್ನು ಅರ್ಥಮಾಡಿಕೊಳ್ಳದೆ ಸಿದ್ದರಾಮಯ್ಯನವರನ್ನು ಇಳಿಸಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದರೆ ಅದಕ್ಕಿಂತ ಘೋರ ತಪ್ಪು ಇನ್ನೊಂದಿರಲಾರದು. ಅಂತಹ ತಪ್ಪು ನಿರ್ಧಾರವನ್ನು ಕಾಂಗ್ರೆಸ್ ತೆಗೆದುಕೊಂಡರೆ ಚೆಡ್ಡಿಗಳು ಬಯಸಿರುವಂತೆ ಕರ್ನಾಟಕ ನಿಜವಾಗಲೂ 'ಕಾಂಗ್ರೆಸ್ ಮುಕ್ತ ರಾಜ್ಯ'ವಾಗುತ್ತದೆ.

ಕೊನೆಗೆ ನನ್ನ ಒಂದು ಆತಂಕವನ್ನೂ ಹಂಚಿಕೊಳ್ಳಬೇಕಿದೆ. ಮುಖ್ಯಮಂತ್ರಿ ಸ್ಥಾನದಿಂದ ಯಾವತ್ತು ಸಿದ್ದರಾಮಯ್ಯ ಇಳಿಯುತ್ತಾರೋ ಅನಂತರ ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳ, ದಲಿತರ, ಅಲ್ಪಸಂಖ್ಯಾತರ ಪರವಾಗಿ ಚಿಂತಿಸುವ, ಆ ನಿಟ್ಟಿನಲ್ಲಿ ಕೆಲಸ ಮಾಡುವ ಕೊನೆಯ ಮುಖ್ಯಮಂತ್ರಿ ಅವರು ಆಗಿರುತ್ತಾರೆನ್ನುವ ಆತಂಕ ನನ್ನದು. ಯಾಕೆಂದರೆ ಅವರ ನಂತರ ಬಹುಸಂಖ್ಯಾತ ಅಹಿಂದಗಳ ಬಗ್ಗೆ ಚಿಂತಿಸುವ ನಾಯಕನನ್ನು ಈ ರಾಜ್ಯ ಪಡೆಯುವ ಸಾಧ್ಯತೆಗಳು ಇಲ್ಲವೇ ಇಲ್ಲ ಎನ್ನಬಹುದು.

ಸುಮ್ಮನೆ ಯೋಚಿಸಿ... ಕಾಂಗ್ರೆಸ್‌ನಲ್ಲಾಗಲಿ, ಬಿಜೆಪಿಯಲ್ಲಾಗಲಿ, ಜೆಡಿಎಸ್ ಪಕ್ಷದಲ್ಲಾಗಲಿ ಅಹಿಂದ ವರ್ಗಗಳ ಬಗ್ಗೆ ಯೋಚಿಸುವ ಒಬ್ಬನಾದರೂ ನಾಯಕ ಕಾಣಿಸುತ್ತಾನಾ ನಮ್ಮ ಕಣ್ಣುಗಳಿಗೆ? ಚುನಾವಣಾ ಪೈಪೋಟಿಯಲ್ಲಿ ನಮ್ಮ ರಾಜ್ಯದಲ್ಲಿ ಗೋಪಾಲಗೌಡರೊಂದಿಗೆ ಪ್ರಾರಂಭವಾದ ಸಮಾಜವಾದಿ ಯುಗ ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿಯುವ ಗಳಿಗೆಯಲ್ಲಿ ಅಂತ್ಯಗೊಳ್ಳಲಿದೆ. ಆಮೇಲೆ ಯಾರೇ ಯಾವ ಪಕ್ಷದಿಂದ ಮುಖ್ಯಮಂತ್ರಿ ಆದರೂ ಅವರು ಜಾತಿವಾದಿಗಳೋ, ಕೋಮುವಾದಿಗಳೋ, ಬಂಡವಾಳಶಾಹಿಗಳ ಗುಲಾಮರೋ ಆಗಿರುತ್ತಾರಷ್ಟೇ.

ಸಿದ್ದರಾಮಯ್ಯ ಈ ರಾಜ್ಯ ಕಾಣಲಿರುವ ಕೊನೆಯ ಜನಪರ, ಪ್ರಗತಿಪರ ಮುಖ್ಯಮಂತ್ರಿ ಎಂಬುದು ನನ್ನ ನಂಬಿಕೆ. ಆ ಕಾರಣಕ್ಕಾದರೂ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಿದೆ. ■

# ಕಾರ್ಪೋರೇಟ್ ದೇಶದ್ರೋಹಿಗಳು

ರಾಜಧಾನಿ ದೆಹಲಿಯಿಂದ ನಿರಂತರವಾಗಿ ಒಳ್ಳೇ ಸುದ್ದಿಗಳು ಹರಿದು ಬರುತ್ತಿವೆ. ರಾಜಕೀಯದಲ್ಲಿ 'ಸ್ವಚ್ಛ ಭಾರತ್' ಆಂದೋಲನ ಕೈಗೊಂಡಿರುವ ಆಮ್‌ಆದ್ಮಿ ಪಾರ್ಟಿ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣ ಗುಡಿಸಿ ಹಾಕಿದೆ. ಮೋದಿ ಮೇನಿಯಾಗೆ ಒಳಗಾಗಿದ್ದ ಬಿಜೆಪಿಗೆ ಮಾರಣಾಂತಿಕ ಪೆಟ್ಟು ಬಿದ್ದಿದೆ. ಇದರ ಜೊತೆಜೊತೆಗೆ, ತನಗೆ ಇನ್ನೂ ಹೇಳೋರು ಕೇಳೋರು ಯಾರೂ ಇಲ್ಲ ಎಂಬ ಅಧಿಕಾರ ಮದ ನೆತ್ತಿಗೇರಿ, ಒಂದೇ ದಿನದಲ್ಲಿ 10 ಲಕ್ಷ ಬೆಲೆಯ ನಾಲ್ಕು ಸೂಟುಗಳನ್ನು ಬದಲಿಸಿದ ಮೋದಿಯ ನಿಜ ಸಂಸ್ಕೃತಿ ಬಡ ಭಾರತೀಯರೆದುರು ಬಯಲಾಗಿದೆ. ದೇಶ ವಿದೇಶಗಳಿಂದ ಛೀಮಾರಿ ಹಾಕಿಸಿಕೊಂಡ ನಂತರ ಆ ಸೂಟುಗಳನ್ನು ಹರಾಜಿಗಿಟ್ಟು ತನ್ನ ಮರ್ಯಾದೆ ಉಳಿಸಿಕೊಳ್ಳಲು ಶ್ರೀಯುತರು ಪ್ರಯತ್ನಿಸುತ್ತಿದ್ದಾರೆ.

ಪಾರ್ಲಿಮೆಂಟಿನಲ್ಲಿ ಮುಖಭಂಗ ಎದುರಿಸುತ್ತಿರುವ ಮೋದಿ ಸರ್ಕಾರ ತಂದಿದ್ದ ರೈತ ವಿರೋಧಿ ಭೂಸ್ವಾಧೀನ ಸುಗ್ರೀವಾಜ್ಞೆಯ ಬಗ್ಗೆ ಕೊನೆಗೂ ಚರ್ಚೆಗೆ ಸಿದ್ಧ ಎಂದಿದೆ. ಈ ಸುದ್ದಿ ಇನ್ನೂ ಬಿಸಿಬಿಸಿಯಾಗಿರುವಾಗಲೇ ಭ್ರಷ್ಟಾಚಾರ ವಿರೋಧಿ ಆಂದೋಲನದ ಖ್ಯಾತಿಯ ಅಣ್ಣಾ ಹಜಾರೆ ಪ್ರಧಾನಿ ಮೋದಿಯ ಜನದ್ರೋಹದ ಬಗ್ಗೆ ಬಹಿರಂಗವಾಗಿ ಹರಿಹಾಯ್ದಿದ್ದಾರೆ. ರೈತ ವಿರೋಧಿ ಸುಗ್ರೀವಾಜ್ಞೆಯನ್ನು ವಿರೋಧಿಸಿ ಮತ್ತೆ ಚಳವಳಿಗೆ ಮುಂದಾಗಿದ್ದಾರೆ.

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಅವರ ವಿರುದ್ಧ ಸೇಡಿನ ಕ್ರಮ ಕೈಗೊಂಡಿದ್ದ ಗುಜರಾತ್ ಪೊಲೀಸರಿಗೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿ, ತೀಸ್ತಾ ಅವರಿಗೆ ಜಾಮೀನು ಮಂಜೂರು ಮಾಡಿದೆ. ದೇಶದಲ್ಲಿ ಕೋಮು ವಿದ್ವೇಷವನ್ನು ಹರಡುತ್ತಿರುವ ಸಂಘಿಗಳ ವಿರುದ್ಧದ ದನಿ ದಿನೇದಿನೇ ಹೆಚ್ಚಾಗುತ್ತಿದೆ.

ಬಿಹಾರದಲ್ಲಿ ಜೆಡಿಯು ಸರ್ಕಾರವನ್ನು ಹೈಜಾಕ್ ಮಾಡಲು ಹೋಗಿ, ಶಾಸಕರ ಖರೀದಿಗೂ ಮುಂದಾಗಿದ್ದ ಅಮಿತ್ ಶಾನ ಆಟ ಮತ್ತೊಮ್ಮೆ ಮಕಾಡೆ ಬಿದ್ದಿದೆ. ನಿತೀಶ್ ಮತ್ತೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ.

ದೇಶದ ರಾಜಕೀಯದಲ್ಲಿ ಇಷ್ಟೆಲ್ಲಾ ಸಕಾರಾತ್ಮಕ ಬೆಳವಣಿಗೆಗಳು ಕ್ಷಿಪ್ರ ರೀತಿಯಲ್ಲಿ ನಡೆದಿವೆ. ಕೇವಲ 2-3 ವಾರಗಳ ಅವಧಿಯಲ್ಲಿ ಇಂಥಾ ನಾಟಕೀಯ ಬೆಳವಣಿಗೆಗಳಿಂದಾಗಿ ಮೋದಿ - ಅಮಿತ್‌ಶಾ ಕೂಟದ ತಂತ್ರ ಪದೇಪದೇ ಬೂಮರಾಂಗ್ ಆಗಿ ಪರಿಣಮಿಸುತ್ತಿದೆ.


ಈ ನಡುವೆ ರಾಜಧಾನಿಯಲ್ಲಿ ಮೇಲಿನ ಎಲ್ಲ ಸುದ್ದಿಗಳನ್ನು ಬದಿಗೊತ್ತುವಂಥಾ ನಾಟಕೀಯ ಬೆಳವಣಿಗೆಯೊಂದು ಸಂಭವಿಸಿದೆ. ಅದು ಇಡೀ ಮಾಧ್ಯಮಗಳನ್ನು ಆವರಿಸಿಕೊಂಡುಬಿಟ್ಟಿದೆ. ಪೆಟ್ರೋಲಿಯಂ ಸಚಿವಾಲಯದಿಂದ ರಹಸ್ಯ ದಾಖಲೆಗಳನ್ನು ಕದ್ದು ಸಾಗಿಸುತ್ತಿದ್ದ ಕೆಲ ನೌಕರರನ್ನು ದೆಹಲಿ ಪೊಲೀಸರು ಬಂಧಿಸಿದ ಸುದ್ದಿ ಅದು. ಈ ರಹಸ್ಯ ದಾಖಲೆಗಳನ್ನು ಪೆಟ್ರೋಲಿಯಂ ವ್ಯವಹಾರದಲ್ಲಿ ತೊಡಗಿರುವ ರಿಲಯನ್ಸ್, ಎಸ್ಸಾರ್ ಮುಂತಾದ ಕಂಪನಿಗಳಿಗೆ ಸಾಗಿಸಲಾಗುತ್ತಿತ್ತು ಎಂಬ ಸುದ್ದಿಯೂ ಹೊರಬಿದ್ದು ಈಗ ಜನಜನಿತವಾಗಿದೆ.

ಈ ಪ್ರಕರಣದ ಪೊಲೀಸ್ ಅರೆಸ್ಟ್‌ಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಾ ಹೋಗಿ ಈಗ 14ಕ್ಕೇರಿದೆ. ಇದು 25ಕ್ಕೆ ಏರಬಹುದು ಎಂದು ಉನ್ನತ ಅಧಿಕಾರಿಯೊಬ್ಬರು ಸುಳಿವು ಕೊಟ್ಟಿದ್ದಾರೆ. ಬಂಧಿತರಲ್ಲಿ ಕೆಳ ಹಂತದ ಕೆಲವು ಸರ್ಕಾರಿ ನೌಕರರು, ರಿಲಯನ್ಸ್, ಎಸ್ಸಾರ್, ಜುಬಿಲೆಂಟ್, ಕೈರ್ನ್ಸ್, ಅಡಾಗ್ ಕಂಪನಿಗಳ ಅಧಿಕಾರಿಗಳೂ ಇದ್ದಾರೆ. ಮೂರು ಮಂದಿ ಖಾಸಗಿ 'ಕನ್ಸಲ್ಟೆಂಟ್'ಗಳೂ ಇದ್ದಾರೆ.

ಇದೇನಾಶ್ಚರ್ಯ?! ತಮಗೆ ಪರಮ ಆಪ್ತರಾದ ರಿಲಯನ್ಸ್ ಮತ್ತು ಎಸ್ಸಾರ್ ಕಂಪನಿಗಳ ವಿರುದ್ಧವಾಗಿ ಪ್ರಧಾನಿ ಮೋದಿಯವರು ಯುದ್ಧ ಸಾರಿದ್ದಾರೆಯೇ? ಈ ದೇಶದ ಸಾರ್ವಜನಿಕ ಸಂಪತ್ತಿನ ಲೂಟಿಯನ್ನು ತಡೆಯಲು ಮುಂದಾಗಿದ್ದಾರೆಯೆ?

ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡುವುದು ಸಹಜ. ಆದರೆ ಬಡ ಭಾರತೀಯರು ಅಷ್ಟೊಂದು ಅದೃಷ್ಟಶಾಲಿಗಳಲ್ಲ, ದೇಶದ ಹಿತಾಸಕ್ತಿಯನ್ನು ಕಾಪಾಡುವಂಥ ಪ್ರಧಾನಿ ಇನ್ನೂ ನಮಗೆ ಸಿಕ್ಕಿಲ್ಲ, ಹಕೀಕತ್ತು ಬೇರೆಯೇ ಇದೆ.

ಆ ವಿಚಾರಕ್ಕೆ ಹೋಗುವ ಮುನ್ನ ಪೆಟ್ರೋಲಿಯಂ ಸಚಿವಾಲಯದಲ್ಲಿ ಹಾಲಿ ಅಧಿಕೃತ ಪ್ರಕ್ರಿಯೆಯಲ್ಲಿರುವ ಕಡತಗಳ ಬಗ್ಗೆ ಸ್ವಲ್ಪ ನೋಡೋಣ.



ದೇಶದ ಅತಿ ದೊಡ್ಡ ಖಾಸಗಿ ಕಂಪನಿಯಾದ ರಿಲಯನ್ಸ್‌ಗೂ ಸರ್ಕಾರಕ್ಕೂ ನಡುವೆ ಮೂರು ವಿವಿಧ ಪ್ರಕರಣಗಳು ಕೋರ್ಟ್‌ಗಳ ವಿಚಾರಣೆಯ ಹಂತದಲ್ಲಿವೆ. ಕೃಷ್ಣಾ - ಗೋದಾವರಿ ಬೇಸಿನ್‌ನ ನೈಸರ್ಗಿಕ ಅನಿಲ ಗುತ್ತಿಗೆ ವ್ಯವಹಾರದಲ್ಲಿ ಸರ್ಕಾರ ಮತ್ತು ರಿಲಯನ್ಸ್ ಕಂಪನಿ ಜೊತೆಗೂಡಿ ಗ್ಯಾಸ್ ದರವನ್ನು ಏರಿಕೆ ಮಾಡಲಿಕ್ಕಾಗಿ ಸಂಚು ರೂಪಿಸಿ, ಉತ್ಪಾದನೆ ಕುಂಠಿತಗೊಳಿಸಿದ್ದಾರೆ. ಆ ಮೂಲಕ ಗುತ್ತಿಗೆ ಒಪ್ಪಂದವನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಆರೋಪಿಸಿರುವ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯೊಂದು ಸುಪ್ರೀಂಕೋರ್ಟ್‌ನಲ್ಲಿದೆ.

ಸರ್ಕಾರಕ್ಕೆ ನಷ್ಟ ಉಂಟುಮಾಡಿದ್ದಕ್ಕೆ ಪ್ರತಿಯಾಗಿ ರಿಲಯನ್ಸ್ ಕಂಪನಿ ಮೇಲೆ ವಿಧಿಸಿದ್ದ 15,000 ಕೋಟಿ ದಂಡವನ್ನು ಪ್ರಶ್ನಿಸಿ ರಿಲಯನ್ಸ್ ಕಂಪನಿ ಕೋರ್ಟ್ ಮೆಟ್ಟಿಲೇರಿದ್ದು, ಆ ಪ್ರಕರಣವೂ ಬಾಕಿಯಿದೆ.

ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆಯಾಗಿರುವ ಒಎನ್‌ಜಿಸಿ (ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್) ಮತ್ತು ದೇಶದ ಅತಿ ದೊಡ್ಡ ಖಾಸಗಿ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ನಡುವೆ ಮತ್ತೊಂದು ಪ್ರಕರಣದ ವಿಚಾರಣೆ ನಡೆಯುತ್ತಿದೆ. ಒಎನ್‌ಜಿಸಿಗೆ ಸೇರಿದ ನಿಕ್ಷೇಪಗಳಿಂದ ಸುಮಾರು 30,000 ಕೋಟಿ ಮೌಲ್ಯದ ನೈಸರ್ಗಿಕ ಅನಿಲವನ್ನು ರಿಲಯನ್ಸ್ ಕಂಪನಿ ಕಳವು ಮಾಡಿದೆ ಎಂಬುದು ಈ ಪ್ರಕರಣದ ಸಾರಾಂಶ. ಭಾರೀ ಕುತೂಹಲ ಮೂಡಿಸಿರುವ ಈ ವಿವಾದ ಮುಕ್ತಾಯದ ಹಂತದಲ್ಲಿದೆ. ಇದು ಬೇಲೆಕೇರಿ ಬಂದರಿನ ಅದಿರು ನಾಪತ್ತೆ ಪ್ರಕರಣಕ್ಕಿಂತಲೂ ಭಾರೀ ದೊಡ್ಡದು.

ಈ ಕಾನೂನು ವ್ಯಾಜ್ಯಗಳಿಗೆ ಸಂಬಂಧಿಸಿದ ಕಡತಗಳಲ್ಲದೆ, ಕೆ.ಜಿ. ಬೇಸಿನ್‌ನ 'ಆಳ ಸಮುದ್ರ' ಮತ್ತು 'ಅತಿ ಆಳ ಸಮುದ್ರ'ದ ನಿಕ್ಷೇಪಗಳಿಂದ ಅನಿಲ ಹೊರತೆಗೆಯುವ ಕೆಲಸಕ್ಕೆ ರಿಲಯನ್ಸ್ ಮುಂತಾದ ಕಂಪನಿಗಳಿಗೆ ದರ ನಿಗದಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಅದಕ್ಕೆ ಸಂಬಂಧಿಸಿದ ಕಡತಗಳು ಸಚಿವಾಲಯದ ವಿವಿಧ ಟೇಬಲ್‌ಗಳ ಮೇಲಿವೆ.

ಇವುಗಳಲ್ಲದೆ, ಮೋದಿ ಸರ್ಕಾರ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ಹರಾಜು ಹಾಕುವ ಪ್ರಕ್ರಿಯೆಗೆ ಮುಂದಾಗಿದ್ದು, ಇದಕ್ಕೆ ಸಂಬಂಧಿಸಿದ ಕಡತಗಳೂ ಈಗ ಚಾಲ್ತಿಯಲ್ಲಿವೆ.

ಹೀಗೆ ಪ್ರತಿಯೊಂದು ಕಡತದಲ್ಲಿರುವ ಮಾಹಿತಿಯೂ ಸಾವಿರಾರು ಕೋಟಿ ಮೌಲ್ಯದ್ದು. ಇಂಥಾ ಮಾಹಿತಿಯನ್ನು ಕದ್ದು ವಾಮಮಾರ್ಗದ ಮೂಲಕ ಲಾಬಿ ನಡೆಸಿ, ಸಾರ್ವಜನಿಕ ಬೊಕ್ಕಸಕ್ಕೆ ಕನ್ನ ಹಾಕಿ ಸಾವಿರಾರು ಕೋಟಿಗಳನ್ನು ಲೂಟಿ ಹೊಡೆಯುವುದರಲ್ಲಿ ಹಲವು ಖದೀಮ ಕಂಪನಿಗಳು ನಿರತವಾಗಿವೆ. ಇದೇ ಈ ಪ್ರಕರಣದ ಸಾರಾಂಶ.

ಇಂಥಾ ಗುರುತರವಾದ ಪ್ರಕರಣವನ್ನು ಭೇದಿಸಲು ಹೊರಟಿರುವ ಮೋದಿ ಸರ್ಕಾರ ಮಾಡುತ್ತಿರುವುದಾದರೂ ಏನು? ಬಂಧಿಸುತ್ತಿರುವುದಾದರೂ ಯಾರನ್ನು? ಒಬ್ಬ ಛಪರಾಸಿ, ಒಬ್ಬ ಡ್ರೈವರ್, ಕೆಲವು ಗುಮಾಸ್ತರು. ಖಾಸಗಿ ಕಂಪನಿಗಳ ವಿಷಯದಲ್ಲೂ ಅಷ್ಟೆ. ಕೆಳ ಹಂತದ ಕೆಲವು ಸಿಬ್ಬಂದಿಗಳನ್ನು ಮಾತ್ರ. ಇದನ್ನೇ ದೊಡ್ಡ ಸಾಧನೆ ಎಂಬಂತೆ ಕೆಲವು ಮಾಧ್ಯಮಗಳು ಪರಾಕು ಹಾಕುತ್ತಾ ತಮ್ಮ ಬುದ್ಧಿಮಟ್ಟವನ್ನು ಪ್ರದರ್ಶನಕ್ಕಿಟ್ಟಿವೆ.

## ಪ್ರಯಾಸ್ ಜೈನ್‌ನ ಇತಿಹಾಸ

ಈಗ ದೆಹಲಿ ಮೂಲದ ವ್ಯಕ್ತಿ, ಆಸ್ಟ್ರೇಲಿಯಾದಲ್ಲಿ ಪದವಿ ಪಡೆದು ತಾಯ್ನಾಡಿನ ಸೇವೆಗಾಗಿ ಮರಳಿ ಬಂದಿದ್ದಾನೆ. ಮೆಟಸ್ ಬ್ಯುಸಿನೆಸ್ ಸಲ್ಯೂಷನ್ಸ್ ಪ್ರೈ ಲಿ ಎಂಬ ಕನ್ಸಲ್ಟೆನ್ಸಿ ಶುರು ಮಾಡಿ ವಿದ್ಯುತ್, ಕಲ್ಲಿದ್ದಲು, ತೈಲ ಮತ್ತು ಅನಿಲಗಳ ಬಗ್ಗೆ ಮಾಹಿತಿ ಸೇವೆ ಒದಗಿಸುತ್ತಿದ್ದಾನೆ. ಅಂದಹಾಗೆ ಇದರ ಪ್ರಧಾನ ಕಚೇರಿಯಿರುವುದು ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ.

2007-08ರಲ್ಲಿ ಇನ್ಸ್ಟ್ರೈನ್ ಎನರ್ಜಿ ಕಂಪನಿಯನ್ನು ಹುಟ್ಟುಹಾಕಿದ್ದಾನೆ.

ಈತನನ್ನು ಪೊಲೀಸರು ಅರೆಸ್ಟ್ ಮಾಡುತ್ತಿದ್ದಂತೆ ಮತ್ತೊಂದು ನಾಟಕ ನಡೆದುಹೋಗಿದೆ. ಈತನ ಕಚೇರಿಗೆ ಬೆಂಕಿ ಬಿದ್ದು ಇದ್ದಬಿದ್ದ ದಾಖಲೆಗಳೆಲ್ಲಾ ಸುಟ್ಟು ಕರಕಲಾಗಿವೆ. ಆದರೆ ಈ ಬಗ್ಗೆ ಯಾರೊಬ್ಬರೂ ಅಗ್ನಿಶಾಮಕ ದಳಕ್ಕಾಗಲಿ, ಪೊಲೀಸರಿಗಾಗಲಿ ಸುದ್ದಿ ಮುಟ್ಟಿಸಲಿಲ್ಲ ಎಂದರೆ ಅಲ್ಲಿದ್ದ ದಾಖಲೆಗಳು ಎಂಥವು ಎಂಬುದನ್ನು ಯಾರಾದರೂ ಅಂದಾಜಿಸಬಹುದು.

ಮೋದಿ ಶಿಷ್ಯರು ಅಧಿಕಾರದಲ್ಲಿದ್ದ ಅವಧಿಯಲ್ಲಿ ಬೆಂಗಳೂರಿನ ಬಿಬಿಎಂಪಿ ಕಚೇರಿಯ ದಾಖಲೆಗಳನ್ನು ನಾಶಪಡಿಸಲು ಬೆಂಕಿ ಹಾಕಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಅಪರಾಧದಲ್ಲಿ ಭಾಗಿಯಾಗಿರುವ ಎಲ್ಲ ಹಂತದಲ್ಲಿರುವ ವ್ಯಕ್ತಿಗಳು ಶಿಕ್ಷೆಗೆ ಅರ್ಹರು ನಿಜ. ಆದರೆ ದುರಂತವೆಂದರೆ ಮೋದಿ ಸರ್ಕಾರದ ತನಿ ಮಟ್ಟವೇ ತೀರಾ ಕೆಳ ಹಂತದಲ್ಲಿದ್ದು, ಇದು ಮೇಲುಮಟ್ಟಕ್ಕೇರುವ ಯಾವುದೇ ಸುಳಿವಿಲ್ಲ. ಯಾವುದೇ ಅಪರಾಧ ಪ್ರಕರಣದಲ್ಲಿ ಅಪರಾಧದ ಯಾರಿಗೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಟಾರ್ಗೆಟ್ ಆಗುತ್ತದೆ. ಮೋದಿ ಸರ್ಕಾರಕ್ಕೆ, ಅಥವ ಪೊಲೀಸರಿಗೆ ಇಷ್ಟೂ ಕಾಮನ್‌ಸೆನ್ಸ್ ಇಲ್ಲವೇ ಎಂ ಯಾರಾದರೂ ಕೇಳಬಹುದು. ಆದರೆ ಇದು ಕಾಮನ್‌ಸೆನ್ಸ್‌ನ ಪ್ರಶ್ನೆ ಅಲ್ಲವೇ ಅಲ್ಲ, ಇದು ಕಾಮ ಇಂಟರೆಸ್ಟ್ ಅಂದರೆ ಸಮಾನ ಹಿತಾಸಕ್ತಿಯ ಪ್ರಶ್ನೆ. ಹೌದು ನಿಜ. ಮಾನ್ಯ ಮೋದಿಯವರಿಗೂ ಇದೇ ಕಾರ್ಪೋರೇಟ್ ಕೂಟಕ್ಕೂ ಸಮಾನವಾದ ಹಿತಾಸಕ್ತಿಗಳಿವೆ. ವಾಸ್ತವದಲ್ಲಿ ಮೋದಿಯವರನ್ನು ಪ್ರಧಾನಿ ಅಭ್ಯರ್ಥಿಯಾಗಿಸಿದ್ದು, ಚುನಾವಣೆ ಗೆಲ್ಲಿಸಲ ಕೋಟಿಗಳನ್ನು ನೀರಿನಂತೆ ಹರಿಸಿದ್ದೂ ಇದೇ ಅಂಬಾನಿಗಳು, ಅದಾನಿ, ಎಸ್ಸಾರ್‌ಗಳು, ಅನಿಲ್ ಅಗರ್‌ವಾಲ್ ಮುಂತಾದವರೇ ಎಂಬುದು ಈಗ ಬಹಿರಂಗ ರಹಸ್ಯ.

### ಕಳ್ಳರ ಇತಿಹಾಸ

ಸರ್ಕಾರಿ ರಹಸ್ಯ ದಾಖಲೆ ಪತ್ರಗಳನ್ನು ಕದ್ದು ಸಿಕ್ಕಿಬಿದ್ದಿದ್ದು ರಿಲಯನ್ಸ್‌ನ ಇತಿಹಾಸದಲ್ಲಿ ಇದು ಮೊದಲ ಸಲವೇನಲ್ಲ, 1998ರಲ್ಲಿ ಬಯಲಾದ ಪ್ರಕರಣ ಮತ್ತಷ್ಟು ಸ್ವಾರಸ್ಯಕರವಾಗಿದೆ.

ಹೆಲಿಕಾಪ್ಟರ್ ಕಳ್ಳತನದ ಕೇಸಿನಲ್ಲಿ ದೆಹಲಿ ಪೊಲೀಸರು ರೊಮೇಶ್ ಶರ್ಮ ಎಂಬುವವನನ್ನು ಬಂಧಿಸಿದರು. ಬಾಲು ಎಂಬ ವ್ಯಕ್ತಿಯೊಂದಿಗೆ ಈತ ನಿಕಟ ಸಂಬಂಧವಿರುವುದು ತನಿಖೆಯ ವೇಳೆಯಲ್ಲಿ ಕಂಡುಬಂತು. ಹೀಗಾಗಿ ಬಾಲು ಎಂಬುವವನ ಕಚೇರಿಯನ್ನು ಪೊಲೀಸರು ರೈಡ್ ಮಾಡಿ ಹಲವಾ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡರು. ಅವುಗಳ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವಾಲಯಕ್ಕೆ ಸಂಬಂಧಿಸಿದ 4 ದಾಖಲೆ ಪತ್ರಗಳೂ ಸಿಕ್ಕಿಬಿದ್ದವು.

ಬಾಲು ಎಂದು ಕರೆಯಲಾಗುವ ಈ ಮನುಷ್ಯ ಸಾಧಾರಣ ಆಸಾಮಿಯಲ್ಲ, ಅವಿಭಜಿತ ರಿಲಯನ್ಸ್ ಕಂಪನಿಯ ಅಂದಿನ ಅಧ್ಯಕ್ಷ! 1970ರ ದಶಕದಿಂದಲೂ ಧೀರೂಭಾಯಿ ಅಂಬಾನಿಗೆ ಅತ್ಯಂತ ನಂಬುಗೆಯ ಬಂಟನಾಗಿದ್ದವನು. ದೆಹಲಿಯಲ್ಲೇ ಬೀಡುಬಿಟ್ಟಿದ್ದ ಈತ ರಿಲಯನ್ಸ್ ಪರವಾಗಿ ಸರ್ಕಾರ ನಾನಾ ಅಧಿಕಾರಿಗಳ ಜೊತೆ, ರಾಜಕಾರಣಿಗಳೊಂದಿಗೆ ಲಾಬಿ ಮಾಡಿ ವ್ಯವಹಾರ ಕುದುರಿಸುವುದರಲ್ಲಿ ನಿಸ್ಸೀಮನಾಗಿದ್ದ.

ಹೀಗೆ ಸಿಕ್ಕ 4 ದಾಖಲೆ ಪತ್ರಗಳಾದರೂ ಎಂಥವು?

1) ಕ್ಯಾಬಿನೆಟ್ ಸೆಕ್ರೆಟರಿಯೇಟ್ ಮೀಟಿಂಗ್‌ನ ನಡಾವಳಿಗಳು.


2) ಸಾರ್ವಜನಿಕ ಉದ್ದಿಮೆಗಳ ಶೇರು ವಿಕ್ರಯ ಸಂಬಂಧಿಸಿದ ಇಲಾಖಾ ಕಾರ್ಯದರ್ಶಿಗಳ ಸಭೆಯ ನಡಾವಳಿಗಳು

3) ತೈಲ ಉತ್ಪನ್ನಗಳ ಮೇಲೆ ಸುಂಕ, ತೆರಿಗೆ ನಿಗದಿಗೊಳಿಸುವ ವಿಷಯಕ್ಕೆ ಸಂಬಂಧಿಸಿದ ಸರ್ಕಾರಿ ಪ್ರಸ್ತಾಪಗಳು

4) ಪೆಟ್ರೋಲಿಯಂ ಇಲಾಖೆಯ ಕಾರ್ಯದರ್ಶಿಯಿಂದ ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಕಳಿಸಿದ ಅಧಿಕೃತ ಪತ್ರ.

ಇಂಥಾ ದಾಖಲೆ ಪತ್ರಗಳಿಂದ ರಿಲಯನ್ಸ್‌ಗೆ ಎಂಥಾ ಲಾಭವಾಗುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಾದ ಅಗತ್ಯವಿಲ್ಲ, ಬಾಲು ಕಚೇರಿಯಿಂದ ದಾಖಲೆ ಪತ್ರಗಳನ್ನು ಮುಂಬೈನ ಎರಡು ನಂಬರ್‌ಗಳಿಗೆ ಫ್ಯಾಕ್ಸ್ ಮೂಲಕ ಕಳಿಸಲಾಗಿತ್ತು. ಆ ನಂಬರ್‌ಗಳು ಇದೇ ಅಂಬಾನಿ ಸೋದರರಿಗೆ ಸಂಬಂಧಿಸಿದ್ದವು.

ಈ ರೈಡ್ ನಡೆಸಿದ ದೆಹಲಿಯ ಜಂಟಿ ಪೊಲೀಸ್ ಆಯುಕ್ತ ಆಮೋದ್ ಕಾಂತ್ ಕೇಸನ್ನು ಸ್ವಲ್ಪ ಸ್ಟ್ರಾಂಗ್ ಮಾಡಿದ್ದರು ಅಂತ ಕಾಣುತ್ತೆ, ಕೆಲ ವಾರಗಳ ನಂತರ ಈ ಕೇಸು ದೆಹಲಿಯ ಕ್ರೈಂಬ್ರಾಂಚ್‌ಗೆ ವರ್ಗಾವಣೆ ಮಾಡಲಾಯಿತು. ಇದಾ ಕೆಲವೇ ತಿಂಗಳುಗಳಲ್ಲಿ ಕೇಸನ್ನು ಸಿಬಿಐಗೆ ವರ್ಗಾಯಿಸುವಂತೆ ದೆಹಲಿಯ ಪೊಲೀಸ್ ಕಮಿಷ ಕೇಂದ್ರ ಗೃಹಮಂತ್ರಿಯವರನ್ನು ಕೋರಿದರು. ಗೃಹಮಂತ್ರಿಯವರು ಅಸ್ತು ಎಂದರು. ಸಿಬಿಐಗೆ ವರ್ಗಾವಣೆಯಾದ ನಂತರ ಈ ಕೇಸಿನ ತನಿಖೆ



# ಸಂತನು ಸೈಕಿಯಾಲಜಿ!

90ರ ದಶಕದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರನಾಗಿದ್ದ, ನಂತರ ಫೈನಾನ್ಷಿಯಲ್ ಎಕ್ಸ್‌ಪ್ರೆಸ್‌ಗೆ ವರ್ಗಾವಣೆಗೊಂಡ. ವಾಜಪೇಯಿ ಕಾಲದಲ್ಲಿ ಅಶೋಕ್ ಸೈಕಿಯಾ ಎಂಬ ಅಧಿಕಾರಿಯ ಮೂಲಕ ಈತ ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿ ವಲಯಕ್ಕೆ ಪ್ರವೇಶ ಪಡೆದ. 2001ರಲ್ಲಿ ಇಂಡಿಯನ್ ಪೆಟ್ರೋ ಡಾಟ್ ಕಾಮ್ ಎಂಬ ಪೋರ್ಟಲ್ ಶುರು ಮಾಡಿದ.

ಈತನ ವೆಬ್‌ಸೈಟ್ ಎಷ್ಟೊಂದು ಬೇಡಿಕೆಯದ್ದು ಎಂದರೆ ಪ್ರತಿನಿತ್ಯ 500 ಪುಟಗಳಷ್ಟು ಸರಕನ್ನು ಅಪ್‌ಲೋಡ್ ಮಾಡುತ್ತಿದ್ದರು.

ವೆಬ್‌ಸೈಟ್ ಚಂದಾ ಶುಲ್ಕ ವರ್ಷಕ್ಕೆ ಮೂರು ಲಕ್ಷ ರೂಪಾಯಿಯವರೆಗೂ ಇದೆ!

ಇಲ್ಲಿ ದೊರೆಯುವ ಸಾಮಾನ್ಯ ಮಾಹಿತಿಗಳಲ್ಲದೆ ವಿಶೇಷ ಮಾಹಿತಿಗಳು ಅಥವಾ ದಾಖಲೆಗಳು ಬೇಕೆಂದು ನೀವು ಬೇಡಿಕೆ ಸಲ್ಲಿಸಿದರೆ ಸೈಕಿಯಾನ ಪ್ರತಿನಿಧಿಯೊಬ್ಬರು ನಿಮಗೆ ಫೋನ್ ಮಾಡುತ್ತಾರೆ. ನಿಮಗೆ ಬೇಕಾದ ದಾಖಲೆಯ ರೇಟು ನಿಗದಿಪಡಿಸುತ್ತಾರೆ. ಅಂಥಾ ದಾಖಲೆಗೆ ಪ್ರತ್ಯೇಕ ಬೆಲೆ ಇರುತ್ತದೆ.

ರಿಲಯನ್ಸ್ ಇಂಡಸ್ಟ್ರೀಸ್, ಎಸ್ಸಾರ್ ಪವರ್, ಲ್ಯಾಂಕೋ, ಹಿಂಡಾಲ್ಕೊ, ಶೆಲ್ ಮುಂತಾದ ಖಾಸಗಿ ದೈತ್ಯರು ಈತನ ರೆಗ್ಯುಲರ್ ಗಿರಾಕಿಗಳು! ಅಷ್ಟು ಮಾತ್ರವಲ್ಲ, ಈ ವೆಬ್‌ಸೈಟ್ ಪ್ರಕಾರ ಸರ್ಕಾರಿ ಉದ್ಯಮಗಳಾದ ಎನ್‌ಟಿಪಿಸಿ, ಒಎನ್‌ಜಿಸಿ, ಬಿಪಿಸಿಎಲ್ ಮುಂತಾದ ಕಂಪನಿಗಳೂ ಇವೆ. ಪೆಟ್ರೋಲಿಯಂ ಮತ್ತು ಹಣಕಾಸು ಇಲಾಖೆಗಳೂ ಸಹ ಇದರ ಅಧಿಕೃತ ಚಂದಾದಾರರಾಗಿದ್ದಾರೆ ಎಂದರೆ ಆಶ್ಚರ್ಯವೆನಿಸುತ್ತದೆ.

ಈತ ನಾನಾ ಉದ್ಯಮಗಳಿಗೆ ಸಂಬಂಧಿಸಿದ ಉನ್ನತ ಮಟ್ಟದ ಸಮ್ಮೇಳನಗಳನ್ನು ನಡೆಸುತ್ತಿದ್ದ, ಪೆಟ್ರೋಲಿಯಂ ಮಂತ್ರಿಗಳು, ಉನ್ನತ ಅಧಿಕಾರಿಗಳು, ಕಾರ್ಪೊರೇಟ್ ಕಂಪನಿಯ ಪ್ರತಿನಿಧಿಗಳು ಭಾಗವಹಿಸುತ್ತಿದ್ದರು.

ಹಾಗೆ ನೋಡಿದರೆ ಈತ ಇಂಥಾ ಅಪರಾಧಗಳಲ್ಲಿ ಸಿಕ್ಕಿಹಾಕಿಕೊಂಡಿರುವುದು ಇದು ಮೊದಲ ಬಾರಿಯೇನಲ್ಲ. ಸರ್ಕಾರದ ಅಧಿಕೃತ ದಾಖಲಾತಿಗಳನ್ನು ಕದ್ದು ಕಾರ್ಪೊರೇಟ್ ಕಂಪನಿಗಳಿಗೆ ಮಾರಿಕೊಂಡ ಆರೋಪದ ಮೇಲೆ 1999ರಲ್ಲಿ ಸಿಬಿಐ ಬಂಧಿಸಿತ್ತು. ಹತ್ತು ವರ್ಷಗಳ ಕಾಲ ವಿವಿಧ ಕೋರ್ಟ್‌ಗಳಲ್ಲಿ ಕೇಸು ನಡೆಯಿತು. ಅಂತಿಮವಾಗಿ 2009ರಲ್ಲಿ ಈತ 'ನಿರ್ದೋಷಿ'ಯೆಂಬ ಆದೇಶ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ತನ್ನ ಫೇಸ್‌ಬುಕ್ ಪೇಜಿನಲ್ಲಿ 'ಸಿಬಿಐ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಹತ್ತು ವರ್ಷಗಳ ಕಾಲ ಕಾನೂನು ಹೋರಾಟ ನಡೆಸಿ ಗೆಲುವು ಸಾಧಿಸಿ'ದ್ದಾಗಿ ಕೊಚ್ಚಿಕೊಂಡಿದ್ದಾನೆ.

ತನ್ನ ಇಂಥಾ ಹೀನಾಯ ಹಿನ್ನೆಲೆಯನ್ನು ವಿಶೇಷ ಪ್ರತಿಭೆ ಎಂಬಂತೆ ಈತ ಭಾವಿಸಿದಂತಿದೆ. ಅಷ್ಟು ಮಾತ್ರವಲ್ಲದೆ, ಈ ರಹಸ್ಯ ದಾಖಲಾತಿಗಳ ಮೂಲಕ 20,000 ಕೋಟಿಗಳ ಹಗರಣವನ್ನು ಬಯಲಿಗೆಳೆಯಲು ಪ್ರಯತ್ನಿಸಿದ್ದಾಗಿ ಹೇಳಿಕೊಂಡಿದ್ದಾನೆ. ಅದನ್ನೂ ಸತ್ಯಸಂಗತಿ ಎಂಬಂತೆ ವರದಿ ಮಾಡಿದ ಮಾಧ್ಯಮಗಳಿಗೆ ಏನನ್ನಬೇಕು?


...ಟೂ ಮುಂದೆ ಹೋಗಲಿಲ್ಲ.

...ಚಾರಣೆ ನಡೆಸುತ್ತಿದ್ದ ದೆಹಲಿ ಸೆಷನ್ಸ್ ಕೋರ್ಟ್ ...ಲ್ಲಿ ಈ ರೀತಿ ವಿಶ್ಲೇಷಿಸಿತ್ತು: ...ಧಿಕಾರಿಗಳು ತಪ್ಪಿತಸ್ಥರನ್ನು ಪತ್ತೆಹಚ್ಚಲು ...ದೇ ಪ್ರಯತ್ನ ಮಾಡಿಲ್ಲ, ಅಂಬಾನಿ ...ರಿಗೆ ಫ್ಯಾಕ್ಸ್ ಮೂಲಕ ಈ ದಾಖಲೆಗಳು ...ವಾಗಿದ್ದರ ಬಗ್ಗೆ ಮಾಹಿತಿ ಸಿಕ್ಕಿದ್ದರೂ ...ರಗಳನ್ನು ಸಂಗ್ರಹಿಸಲು ಕನಿಷ್ಟ ಪ್ರಯತ್ನವನ್ನೂ ... ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ...ವಾಗಿಟ್ಟುಕೊಂಡು ನೋಡಿದರೆ ಈ ದಾಖಲಾತಿ ...ಯಿಂದ ರಿಲಯನ್ಸ್ ಕಂಪನಿಗೆ ಲಾಭವಾಗುತ್ತದೆ ... ಮೇಲುನೋಟಕ್ಕೆ ಕಂಪನಿಯ ಕೈವಾಡ ...ರುತ್ತದೆ. ಆದ್ದರಿಂದ ರಿಲಯನ್ಸ್ ಕಂಪನಿಯ ...ಕೇಸು ದಾಖಲಿಸುವುದು ಸೂಕ್ತ" ಎಂದು ...ಯ ಪಟ್ಟಿತ್ತು. ಹೀಗೆ ಬರೋಬ್ಬರಿ ನಾಲ್ಕು ... ತರುವಾಯ 2002ರಲ್ಲಿ, ಅದೂ ಕೋರ್ಟ್ ...ಯ ಮೇರೆಗೆ ರಿಲಯನ್ಸ್ ಕಂಪನಿಯ ಮೇಲೆ ... ಗೌಪ್ಯತೆ ಕಾಯಿದೆಯಡಿ ಕ್ರಿಮಿನಲ್ ...ಮೆಯೊಂದನ್ನು ದಾಖಲಿಸಲಾಯಿತು. ನಂತರ ...ತು ಎಂಬುದು 'ಅಧಿಕೃತ ಗೌಪ್ಯತೆ'ಯ ...ವಾಗಿಬಿಟ್ಟಿರುವುದು ಈ ದೇಶದ ದುರಂತ.

...ದಹಾಗೆ ಆ ಸಂದರ್ಭದಲ್ಲಿ ಈ ದೇಶದ ... ಹಾಗೂ ಗೃಹಮಂತ್ರಿಯಾಗಿದ್ದವರು ಯಾರು ... ? 'ದಕ್ಷ ಆಡಳಿತಗಾರ' ಎಂಬ ಅಪಖ್ಯಾತಿ ...ರುವ ಸನ್ಮಾನ್ಯ ಅಟಲ್ ಬಿಹಾರಿ ...ಯಿಯವರೇ ಪ್ರಧಾನ ಮಂತ್ರಿ! ಮಾನ್ಯ ...ಯವರೇ ಅಂದಿನ ಗೃಹಮಂತ್ರಿ!

...ಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ 6 ...ಕ್ಕೆ ಹೆಚ್ಚು ಕಾಲ ಆಳ್ವಿಕೆ ನಡೆಸಿತು. ನಂತರ ... ಸರ್ಕಾರ ಬರೋಬ್ಬರಿ ಹತ್ತು ವರ್ಷ ದೆಹಲಿ ... ನಡೆಸಿತು. ಇದೀಗ ಮೋದಿ ಮೋಡಿಗೆ ... ಒಂದು ವರ್ಷ ತುಂಬಲಿದೆ. ಹೀಗೆ ಒಟ್ಟು ... ಕಳೆದುಹೋಗಿವೆ. ಆದರೆ ಇದುವರೆಗೆ ...ಯಲ್ಲಿ ಕುಳಿತ ಯಾವೊಬ್ಬನೂ ಈ ...ವನ್ನು ಒಂದಿಂಚಾದರೂ ಮುಂದಕ್ಕೆ ...ಲ್ಲ, ದೇಶದ ಹಿತಾಸಕ್ತಿಗೆ ಮಾರಕವಾಗಿದ್ದ ...ಪ್ರಕರಣವನ್ನು ಹಾಗೇ ಜೀವಂತ ಸಮಾಧಿ ...ಾಗಿದೆ.

...98ರ ಈ ಪ್ರಕರಣದ ನಂತರ ಸರ್ಕಾರ ...ಳ್ಳಲಿಲ್ಲ. ಆದರೆ ಖಾಸಗಿ ಕಾರ್ಪೊರೇಟ್ ...ರು ಎಚ್ಚೆತ್ತುಕೊಂಡರು. ಇಂಥಾ ದಾಖಲೆ ...ನ್ನು ನೇರವಾಗಿ ಕದಿಯುವ ಕೆಲಸವನ್ನು ನಿಲ್ಲಿಸಿ, ...ಕ್ಕೆ 'ಕನ್ಸಲ್ಟೆಂಟ್'ಗಳನ್ನು ನೇಮಿಸಿಕೊಂಡರು. ...ಕೆಲಸದಲ್ಲಿ ತೊಡಗಿಕೊಂಡಿರುವ ಬಹುಪಾಲು ...ಟ್'ಗಳು ಹಾಲಿ ಅಥವಾ ಮಾಜಿ ...ರಾಗಿದ್ದಾರೆ ಎಂಬುದು ವಿಷಾದದ ಸಂಗತಿ. ...ಸ್ವವಾಗಿ ಈ ಮಂದಿ ನ್ಯೂಸ್ ...ಗಳನ್ನು ನಡೆಸುತ್ತಿರುತ್ತಾರೆ. ಸುದ್ದಿ ಸಂಗ್ರಹದ ... ನಾನಾ ಇಲಾಖೆಗಳನ್ನು ಸುತ್ತುತ್ತಾ, ...ಗಳು ಹಾಗೂ ನೌಕರರೊಂದಿಗೆ ಉತ್ತಮ ...ವನ್ನು ವಿರ್ವಹಿಸಿಕೊಳ್ಳುತ್ತಾರೆ. ಕಾರ್ಪೊರೇಟ್ ...ಂದ ಯಾವ ಫೈಲುಗಳಿಗೆ ಬೇಡಿಕೆ ... ಆ ಫೈಲುಗಳನ್ನು ನಕಲು ಮಾಡಿಸಿ ತಮ್ಮ ... ಒಪ್ಪಿಸಿ ಲಕ್ಷಗಳ ಲೆಕ್ಕದಲ್ಲಿ, ಕೆಲವೊಮ್ಮೆ ...ಲ್ಲಿ ದುಬಾರಿ ಶುಲ್ಕ ಪಡೆದುಕೊಳ್ಳುತ್ತಾರೆ.



ಇಂಥಾ 'ಕನ್ಸಲ್ಟೆಂಟ್'ಗಳು ಪೆಟ್ರೋಲಿಯಂ ಇಲಾಖೆಯಲ್ಲಿ ಮಾತ್ರವಲ್ಲದೆ ರಕ್ಷಣೆ, ಗಣಿ, ಹಣಕಾಸು, ವಿದ್ಯುತ್, ನಗರಾಭಿವೃದ್ಧಿ ಮುಂತಾದ ಇಲಾಖೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದು ಕಾರ್ಪೊರೇಟ್ ವ್ಯವಹಾರಗಳನ್ನು ಹತ್ತಿರದಿಂದ ಬಲ್ಲವರ ಅಂಬೋಣ.

ಈಗ ದೆಹಲಿ ಪೊಲೀಸರು ಇದ್ದಕ್ಕಿದ್ದಂತೆ ದಾಳಿ ಮಾಡಲು ಕಾರಣವೇನು?

ಈಗ ಇದ್ದಕ್ಕಿದ್ದಂತೆ ಪೊಲೀಸರಿಗೆ ಜ್ಞಾನೋದಯವಾಗಲು ಕಾರಣವನ್ನು ಕಂಡುಕೊಳ್ಳಲು ಈ ಲೇಖನದ ಮೊದಲ ಸಾಲುಗಳನ್ನು ಒಮ್ಮೆ ನೆನಪಿಸಿಕೊಳ್ಳಿ. ಮೋದಿ ಸರ್ಕಾರದ ಜನಪ್ರಿಯತೆ ತೀವ್ರವಾಗಿ ಕುಸಿಯುತ್ತಾ ಸಾಗಿದೆ. ಮೋದಿ ಪಟಾಲಂ ಕಂಗೆಟ್ಟಿದೆ. ತನ್ನ ಜನಪ್ರಿಯತೆಯನ್ನು ಮರಳಿ ಸ್ಥಾಪಿಸಲು ಮೋದಿಗೆ ಬಲವಾದ ವಿಚಾರವೊಂದರ ಅಗತ್ಯವಿತ್ತು.

ಪೆಟ್ರೋಲಿಯಂ ಸಚಿವಾಲಯಕ್ಕೆ ಸಂಬಂಧಿಸಿದ ಪ್ರಕರಣವನ್ನೇ ಕೈಗೆತ್ತಿಕೊಳ್ಳಲು ಮತ್ತೊಂದು ಬಲವಾದ ಕಾರಣವೂ ಇದೆ. ಕಳೆದ ವರ್ಷ ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನ ಅರವಿಂದ್ ಕೇಜ್ರಿವಾಲ್ ಅವರು ಮುಖೇಶ್ ಅಂಬಾನಿ, ವೀರಪ್ಪ ಮೊಯ್ಲಿ ಮುಂತಾದವರ ಮೇಲೆ ಒಂದು ಭ್ರಷ್ಟಾಚಾರ ಪ್ರಕರಣ ದಾಖಲಿಸಿದ್ದದ್ದು ನಮಗೆ ಮರೆತೇಹೋಗಿದೆ. ಅಷ್ಟು ಮಾತ್ರವಲ್ಲದೆ, ಎಡ ಪಕ್ಷಗಳು ಮತ್ತು ಆಮ್‌ಆದ್ಮಿ ಪಕ್ಷ ನರೇಂದ್ರ ಮೋದಿಯ ಕಾರ್ಪೊರೇಟ್ ಸಂಬಂಧದ ಬಗ್ಗೆ ದೇಶಾದ್ಯಂತ ಚುನಾವಣಾ ಪ್ರಚಾರದ ಉದ್ದಕ್ಕೂ ಪ್ರಚಾರ ನಡೆಸಿವೆ.

ಈಗ ಮತ್ತೆ ದೆಹಲಿ ಸಿಎಂ ಆಗಿರುವ ಕೇಜ್ರಿವಾಲ್ ಈ ಪ್ರಕರಣದ ತನಿಖೆ ಮುಂದುವರೆಸುವುದಾಗಿ ಘೋಷಿಸಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ರಿಲಯನ್ಸ್ ಮತ್ತಿತರ ಕಂಪನಿಗಳ ಪೆಟ್ರೋಲಿಯಂ ಅವ್ಯವಹಾರ ಬೀದಿಗೆ ಬರಲಿದೆ. ಮೋದಿಯ ಅಂಬಾನಿ ಎಸ್ಸಾರ್ ನಂಟು ಜನತೆಯೆದುರು ಬಟಾಬಯಲಾಗಲಿದೆ. ಕೆಲವೇ ತಿಂಗಳುಗಳಲ್ಲಿ ವಿಧಾನಸಭಾ ಚುನಾವಣೆಗಳೂ ಬರಲಿದ್ದು ಇದು ಒಟ್ಟಾರೆ ಮೋದಿ ಆಡಳಿತಕ್ಕೆ ಮಾರಕ ಪರಿಣಾಮ ಬೀರಲಿವೆ.


ತಮ್ಮ ಕಾರ್ಪೊರೇಟ್ ನಂಟು ಬಟಾಬಯಲಾಗುತ್ತಿರುವ ಇಂಥಾ ಸಂದಿಗ್ಧ ಸನ್ನಿವೇಶದಲ್ಲಿ ಮೋದಿಗೆ ಉಳಿದಿದ್ದ ಮಾರ್ಗಗಳಾದರೂ ಏನು ಹೇಳಿ? ಹೀಗಾಗಿ ಮುಂಚಿತವಾಗಿಯೇ ಕಳ್ಳರನ್ನು 'ಹಿಡಿಯುವ' ನಾಟಕ ಶುರು ಮಾಡಿಕೊಂಡಿದ್ದಾರೆ. ತಾವು ಅಂಬಾನಿ, ಅದಾನಿಗಳ ವಿರುದ್ಧವೂ ತನಿಖೆ ಮಾಡುತ್ತೇವೆ ಎಂಬ ಸಂದೇಶವನ್ನು ದೇಶದ ಜನತೆಗೆ ಮುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ.

ಕಠಿಣ ಕ್ರಮ, ಅಧಿಕೃತ ದಾಖಲೆಗಳ ರಕ್ಷಣಾ ಕಾಯ್ದೆಯನ್ವಯ ಇತ್ಯಾದಿ ಪೋಸುಗಳು ಇದೇ ಕಾರಣಕ್ಕೆ. ಆದರೆ ಮುಂಗಾರು ಮಳೆಗೆ ಸಿಲುಕಿ ಬಣ್ಣ ಕಳೆದುಕೊಂಡು ಬಯಲಾದ ನೀಲಿ ನರಿಯ ಕತೆಯಂತೆ ಈ ಕೂಟದ ದೇಶಪ್ರೇಮವೂ ಸದ್ಯದಲ್ಲೇ ಬಯಲಾಗಲಿದೆ.

**■ ದೊಡ್ಡಿಪಾಳ್ಯ ನರಸಿಂಹಮೂರ್ತಿ**

# ಬಹಿಷ್ಕಾರದ ಬಲೆಯಲ್ಲಿ ರಂಗೀಲಾ ರಾಘು


## ಜೀವವಿಮಾ ಕಂತು ಕಟ್ಟುತ್ತಿರುವ 'ಪ್ಯಾಕ್‌ವೆಲ್' ದಂಪತಿ ಯಾರು?


ರಾಘವೇಶ್ವರ ಭಾರತಿ

ಹವ್ಯಕರ ರಾಮಚಂದ್ರಾಪುರ ಮಠದ 'ಪರಕಾಯ ಪ್ರವೇಶ ಪ್ರವೀಣ' ಪೀಠಾಧಿಪತಿ ರಂಗ್‌ರಂಗೀಲಾ ರಾಘು ಮಾಣಿ ಸ್ವಸಮಾಜದ ಬಹಿಷ್ಕಾರ, ಸಿಐಡಿ ಬಂಧನ ಮತ್ತು ಪೀಠ ಭ್ರಷ್ಟನಾಗುವ ಭಯದಲ್ಲಿ ಚಡಪಡಿಸುತ್ತಿದ್ದಾನೆ! ಮತಾಂಧ ಭಕ್ತಾದಿಗಳನ್ನಷ್ಟೇ ಅಲ್ಲ, ಪೊಲೀಸರು, ನ್ಯಾಯಾಲಯವನ್ನೆಲ್ಲ ದಿಕ್ಕು ತಪ್ಪಿಸಿ ತನ್ನ ಪಾತಕ ಮುಚ್ಚಿಡಲು ಹವಣಿಸುತ್ತ ಬಂದ ರಾಘುಗೆ ಈಗ ದಾರಿಯೇ ಕಾಣುತ್ತಿಲ್ಲ, ಹವ್ಯಕರು ನಿಧಾನಕ್ಕೆ ಕಣ್ಣಿನ ಪೊರೆ ಕಳಚಿಕೊಂಡು ರಾಘುನ ಬಹಿಷ್ಕಾರದ ಬಾಣವನ್ನು ತಿರುಗಿ ಆತನೆಡೆಗೆ ಬಿಡುತ್ತಿದ್ದಾರೆ. ಇದು ಕೌಬಾಯ್ ಕಳ್ಳನಿಗೆ ಪೀಠತ್ಯಾಗ, ಜೈಲೂಟದ ಒತ್ತಡಕ್ಕೀಡು ಮಾಡಿಬಿಟ್ಟಿದೆ!!

### ಗುರುವಿಗೆ ತಿರುಮಂತ್ರ!

ಯಾವಾಗ ಹರೀಶ್ ಶರ್ಮನೆಂಬ ಗಂಡಾಗುಂಡಿ ಪುಂಡ ಪೋರ ರಾಮಚಂದ್ರಾಪುರಮಠದ ಪೀಠಕ್ಕೆ ವಕ್ಕರಿಸಿದನೋ ಆ ಗಳಿಗೆಯಲ್ಲೇ ಸಮಸ್ತ ಹವ್ಯಕ ಸಮುದಾಯವೆಂಬುದು ಒಂಥರಾ ಗೊಂದಲ-ಗಡಿಬಿಡಿಗೆ ಬಿದ್ದುಹೋಯ್ತು. ಜಾತಿಯತೆ ಕೆರಳಿಸಿ, ರಾಮಕಥಾ-ಶಿವಕಥಾ-ಗೋಕಥಾ ಎಂಬ ತ್ರಿವಿಧ ಮಾದಕ ಪ್ರವಚನ ನೀಡಿ ಹವ್ಯಕರು ಸಂಘಟಿಸಿದ್ದ ರಾಘು ಈ ಭಕ್ತಾದಿಗಳ ನಿಯಂತ್ರಿಸಲು ಎರಡು ತಂತ್ರ ಪ್ರಯೋಗಿಸಿದ್ದ. ಒಂದು ಗುರುಶಾಪ; ಮತ್ತೊಂದು ಬಹಿಷ್ಕಾರ ಭೀತಿ. ಮಠದ ಹಿರಿಯರು-ಅನುಭವಿಗಳು-ಸಜ್ಜನರನ್ನೆಲ್ಲ ಮೂಲೆಗೆ ತಳ್ಳಿದ ರಾಘುನ ಧರ್ಮಾದಾಯ ದಂಧೆಯ ತಾಲಿಬಾನಿ ತಂಡ ದಬ್ಬಾಳಿಕೆಯಿಂದ ಅಟ್ಟಹಾಸ ಹಾಕತೊಡಗಿತು. ತನ್ನ ಪೋಲಿ ಪಟಾಲಂನ ದೌರ್ಬಲ್ಯ ಅಭ್ಯಾಸ ಮಾಡಿ ಅವರವರ ಇಷ್ಟದ ಕಸುಬಿಗೆ ಇಳಿಸಿದ ರಾಘು ತಾನು ಮಾತ್ರ ದಿನಕ್ಕೊಂದರಂತೆ 'ಏಕಾಂತ ದರ್ಶನ' ನಡೆಸಿದ.


ಡಾ. ಟಿ.ಟಿ. ಹೆಗಡೆ

ತನ್ನ ಅವ್ಯವಹಾರ-ಅತ್ಯಾಚಾರ-ಅನಾಚಾರ-ದೌರ್ಜನ್ಯ-ದುರಹಂಕಾರ ಎಂಬ ಪಂಚ ಪಾತಕದ ಬಗ್ಗೆ ಯಾರೂ ಸೊಲ್ಲೆತ್ತದಂತೆ ದೊಣ್ಣೆ ನಾಯಕರ ನೇಮಿಸಿದ ರಾಘು ಮೊದಲು ಭಾವುಕ ಭಕ್ತರ ನಡುವೆ ಪ್ರಯೋಗಿಸಿದ್ದು ಗುರು ಶಾಪದ ಇಮ್ಮೋಶನಲ್ ದಾದಾಗಿರಿ. ಇದು ಕೆಲಸಕ್ಕೆ ಬರದಿದ್ದಾಗ ಬಹಿಷ್ಕಾರದ ದೌರ್ಜನ್ಯ ರಾಜಾರೋಷವಾಗೇ ಮಠದ ತಾಲಿಬಾನಿ ಪಡೆ ಮಾಡಲಾರಂಭಿಸಿತು. ಹವ್ಯಕರ ನಡುವೆ 'ಹವ್ಯಕ ಮಂಡಲ' ಎಂಬ ತಂಡ ಕಟ್ಟಿದ ರಾಘು ತನ್ನ ಪಂಚ ಘಟಿಂಗತನ ಪ್ರಶ್ನಿಸುವವರ ಮೇಲೆ ಈ ಮಂಡಲ ಛೂಬಿಡುವ ನೀತಿ ಜಾರಿಗೆ ತಂದ. ಗುರು ವಿರೋಧಿ ಎಂಬ ಸಣ್ಣ ಸಂಶಯ ಬಂದರೂ ಸಾಕು, ಬಹಿಷ್ಕಾರ ಚಿತ್ರಹಿಂಸೆ ಶಿಕ್ಷೆ ಕಳೆದೊಂದು ದಶಕದಿಂದ ಹವ್ಯಕರ ನಡುವೆ ಜಾರಿಯಾಗುತ್ತಿದೆ! ಸ್ವಾಮಿ ಬೆಂಬಲಿಗ ರೌಡಿಗಳ ಬಹಿಷ್ಕಾರಕ್ಕೆ ತುತ್ತಾಗಿ ಕಣ್ಣೀರಿಟ್ಟ ಅಸಹಾಯಕ ಹೆಂಗಸರ, ಬಡಬ್ರಾಹ್ಮಣರ ಕುಟುಂಬದ ಕತೆಗಳಿಗೆ ಲೆಕ್ಕವೇ ಇಲ್ಲ!! ಪುತ್ತೂರಿನ ಶಾಮಶಾಸ್ತ್ರಿಯ ಆಹುತಿಯಾಯ್ತಲ್ಲ, ಅದು ರಾಘುಮಠದ ಅಮಾನುಷ ಬಹಿಷ್ಕಾರಕ್ಕೊಂದು ಐತಿಹಾಸಿಕ ಸಾಕ್ಷಿಯಾಗಿ ನಿಂತಿದೆ. ಇವತ್ತಿಗೂ ಆ ಕುಟುಂಬವನ್ನು ಬಹಿಷ್ಕಾರದ ಮೂಲಕವೇ ರಾಘು ಸತಾಯಿಸಿ ಖುಷಿ ಪಡುತ್ತಿದ್ದಾನೆ.


ಈಗ ರಾಘು ತಾನೇ ನೇಯ್ದ ಬಹಿಷ್ಕಾರದ ಬಲೆಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದಾನೆ. ಎಚ್ಚೆತ್ತ ಹವ್ಯಕರು ರಾಘುನನ್ನು ತಮ್ಮ ಮನೆಯೊಳಗೆ ಬಿಟ್ಟುಕೊಳ್ಳಲಿಕ್ಕಷ್ಟೇ ಅಲ್ಲ ತಮ್ಮೂರಿಗೂ ಬರದಂತೆ ಬಹಿಷ್ಕಾರ ಹಾಕುತ್ತಿದ್ದಾರೆ. ಉತ್ತರ ಕನ್ನಡದ ಕೆಕ್ಕಾರು ಸುತ್ತಲಿನ ಪ್ರದೇಶ ಮತ್ತು ದಕ್ಷಿಣ ಕನ್ನಡದ ಪುತ್ತೂರು -ವಿಟ್ಲದ ಕಡೆ ಬಿಟ್ಟರೆ ಮತ್ತೆಲ್ಲಿಯೂ ರಾಘುಗೆ ಮೊದಲಿನಂತೆ ಹಿಂಬಾಲಿಸುವ ಅನುಯಾಯಿ ಬಳಗವಿಲ್ಲ, ಕಾವಿಯೊಳಗೇ ಆತ ಕಾಮಕಾಂಡ ನಡೆಸಿರುವುದು ಮತ್ತು ದಗಲುಬಾಜಿ ದಂಧೆಯಿಂದ ದುಡ್ಡು ದೋಚುತ್ತಿರುವುದು ಹವ್ಯಕರಿಗೆ ಖಾತ್ರಿಯಾಗಿ ಹೋಗಿದೆ! ಮಾಜಿ ಮಂತ್ರಿಯೂ, ಹವ್ಯಕ ಸಮುದಾಯದ ಮರ್ಯಾದಸ್ಥ ಹಿರಿಯರೂ ಆದ ಕೆ.ಎಚ್. ಶ್ರೀನಿವಾಸ್, ಕುಮಟಾದ ಡಾ. ಟಿ.ಟಿ. ಹೆಗಡೆ, ಶಿರಸಿಯ ಆರೆಸ್ಸೆಸ್ ಕಟ್ಟಾಳು ಸಚ್ಚಿದಾನಂದ ಹೆಗಡೆ, ಹುಬ್ಬಳ್ಳಿಯ ಸಿಬಿಎಲ್ ಹೆಗಡೆ ವಗೈರೆ ಸಜ್ಜನರು ಒಟ್ಟಾಗಿ ಸಾಗರದಲ್ಲಿ ಹವ್ಯಕರ ಸಭೆ ಕರೆದು ರಾಘುನ ಜನ್ಮ ಜಾಲಾಡಿ ಪೀಠತ್ಯಾಗಕ್ಕೆ ಆಗ್ರಹಿಸಿದರೋ ಆಗ ಹಳ್ಳಿ-ಹಳ್ಳಿಯ ಹವ್ಯಕರು ಜಾಗೃತರಾದರು. ಬೆಂಗಳೂರು-ಮಂಗಳೂರು-ಶಿವಮೊಗ್ಗ ಮುಂತಾದೆಡೆ ಪ್ರಜ್ಞಾವಂತ ಹವ್ಯಕರು ಒಂದೆಡೆ ಸೇರಿ ರಾಘುನ ರಗಳೆ ಬಗ್ಗೆ ಚರ್ಚಿಸಿದ್ದು ದೊಡ್ಡ ಪರಿಣಾಮ ಬೀರಿತು.

ಎಲ್ಲೆಲ್ಲಿ ಎಚ್ಚೆತ್ತ ಹವ್ಯಕರ ಸಭೆ ನಡೆದವೋ ಅಲ್ಲೆಲ್ಲ ರಾಘು ಪ್ರಚೋದಿತ ಮಠದ ಮಾಣಿಗಳು ದಾಂಧಲೆ ಎಬ್ಬಿಸಿದರು. ಆದರೆ ರಾಘು ಪೀಠದಿಂದ ತೊಲಗಿಸಿದರೆ ಹವ್ಯಕರ ಹ್ಯಾಪಿನೆಸ್ ಹೆಚ್ಚುತ್ತದೆ ಎಂಬ ಅಭಿಪ್ರಾಯವೇ ಮೂಡತೊಡಗಿತು. ತನ್ನ ಕಾಮಕಥೆಗಾಗಿ ಹವ್ಯಕ ಜಾತಿಯನ್ನು ವಿಘಟಿಸಿದ ರಾಘು ಪೀಠದಲ್ಲಿರಲು ನಾಲಾಯಕ್ ಎಂಬ ಮಾತು ಬಹಿರಂಗವಾಗೇ ಹವ್ಯಕರ ನಡುವೆ ಶುರುವಾಯ್ತು. ಇದರಿಂದ ಕಂಗಾಲಾದ ರಾಘು ಡ್ಯಾಮೇಜು ಕಂಟ್ರೋಲ್‌ಗೆ ಹವ್ಯಕರ ಕೇರಿ-ಕೇರಿ ಹೊಕ್ಕ ಪ್ರವಚನ ಬಿಗಿಯುವ ಕಾರ್ಯಕ್ರಮ ಹಾಕಿಕೊಂಡು ಹೊರಟ. ಆದರೆ ಸಾಗರ ಮತ್ತು ಸೊರಬದ ಹಲವು ಹಳ್ಳಿಯಲ್ಲಿ ಹವ್ಯಕರು ಈತನ ಪ್ರವೇಶಕ್ಕೆ ಒಪ್ಪಲಿಲ್ಲ, ಗೋಕರ್ಣ ಜಾತ್ರೆಯಲ್ಲಿ ಪ್ರತಿವರ್ಷ ಮಿಂಚುತ್ತಿದ್ದ ರಾಘುಗೆ ಈ ಬಾರಿ ಅಲ್ಲಿಗೆ ಹೋಗುವ ಧೈರ್ಯ ಬರಲಿಲ್ಲ, ಕೊನೇ ಗಳಿಗೆಯಲ್ಲಿ ಗೋಕರ್ಣದ ಜಾತ್ರಾ ಕಾರ್ಯಕ್ರಮದಲ್ಲಿ ಭಾಗವಹಿಸಲಾರೆನೆಂದು ಮೆಸೇಜು ಕಳಿಸುವ ದುರ್ಗತಿ ಆತನಿಗೆ ಬಂತು.


### ಉಪ್ಪಿನಂಗಡಿ-ವರದಳ್ಳಿ ಪ್ರವೇಶ ನಿಷೇಧ!

ರಾಘುಗೆ ತಾನು ಅಮಾಯಕರಿಗೆ ಕೊಡುತ್ತಿದ್ದ ಬಹಿಷ್ಕಾರದ ನೋವಿನ ಹಿಂಸೆ ಅದೆಂಥದೆಂಬ ಅರಿವೀಗ ಆಗುತ್ತಿರಬಹುದು. ಆತ ಬಹಿಷ್ಕಾರದ ಬಾಣಲೆಯಲ್ಲಿ ಬೇಯುತ್ತಿದ್ದಾನೆ. ಹಳ್ಳಿಗಳಿಗೆ ಹೊಕ್ಕಿಸಿಕೊಳ್ಳಲಿಕ್ಕೆ, ಗೃಹಿಣಿಯರಿರುವ ಮನೆಗೆ ಪಾದ ಪೂಜೆಗೆ ಕರೆಯಲು ಹವ್ಯಕರು ನಿರಾಕರಿಸುತ್ತಿರುವಾಗ ಸರ್ಕಾರದ ಮುಜರಾಯಿ ಇಲ್ಲಾಖೆಯೂ ನೈತಿಕ ಅಧಃಪತನ ಕಂಡಿರುವ ರಾಘುಗೆ ಸರ್ಕಾರಿ ದೇವಾಲಯಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಸರ ಮಲಿನಗೊಳಿಸದಂತೆ ನಿಷೇಧ ಹಾಕುತ್ತಿದೆ. ಕಳೆದ ವಾರ ಪುತ್ತೂರಿನ ಉಪ್ಪಿನಂಗಡಿಯ ಸಹಸ್ರಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ಬ್ರಹ್ಮಕಲಶೋತ್ಸವ ಸಮಾರಂಭದಲ್ಲಿ 'ಶಿವಕಥೆ' ಎಂಬ ಲೌಕಿಕ ವಿನೋದಾವಳಿ ನಡೆಸಲು ರಾಘು ಕಾರ್ಯಕ್ರಮ ಹಾಕಿಕೊಂಡಿದ್ದ. ಇದಕ್ಕೆ ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟ ಬೆಂಬಲವಾಗಿ ನಿಂತಿದ್ದ.

ಆದರೆ ಉಪ್ಪಿನಂಗಡಿಯ ಮಂದಿಗೆ ಮಾತ್ರ ಈ ಮೂರೂ ಬಿಟ್ಟ ಮಹಾನುಭಾವ ದೇವತಾಕಾರ್ಯದಲ್ಲಿ ಕಾಣಿಸಿಕೊಳ್ಳುವುದು ಅಸಹ್ಯ ಮೂಡಿಸಿತ್ತು. ತಕ್ಷಣ ಹವ್ಯಕರಾದಿಯಾಗಿ ಎಲ್ಲ ಜನರೂ ಸೇರಿ ರಾಘು ಸಹಸ್ರ ಲಿಂಗೇಶ್ವರ ದೇಗುಲದ ಕಾರ್ಯಕ್ರಮಕ್ಕೆ ಬರದಂತೆ ತಡೆಯಲು ಮಹಿಳಾ ಆಯೋಗಕ್ಕೆ ಮತ್ತು ಮುಜರಾಯಿ ಇಲಾಖೆಗೆ ಮನವಿ ಸಲ್ಲಿಸಿದರು. ನ್ಯಾಯಾಲಯದ ತನಿಖೆ, ವಿಚಾರಣೆ ಎದುರಿಸುತ್ತಿರುವ ವಿವಾದಾಸ್ಪದ ವ್ಯಕ್ತಿ ಧಾರ್ಮಿಕ ಕಾರ್ಯಕ್ರಮದಲ್ಲಿ ಅದೂ ಸರ್ಕಾರದ ಆಡಳಿತದ ದೇಗುಲದ ಫಂಕ್ಷನ್‌ಗೆ ಬರುವುದು ಸರಿಯಲ್ಲ ಎಂದು ಜನ ವಾದಿಸಿದರು. ಇದನ್ನು ಒಪ್ಪಿದ ಮುಜರಾಯಿ ಇಲಾಖೆಯ ಆಯುಕ್ತರು ನಿಷೇಧ ಜಾರಿ ಮಾಡಿದರು. ಕಂಗಾಲಾದ ರಾಘು ತಾನು ಉಪ್ಪಿನಂಗಡಿ ದೇವಸ್ಥಾನಕ್ಕೆ ಬರಲಾರನೆಂದು ಹೇಳಿ ಬಚಾವಾದ. ಆದರೆ ಆತನ ಹಿತರಕ್ಷಕ ಎಡಬಿಡಂಗಿ ಚಡ್ಡಿ ಕಲ್ಲಡ್ಕ ಮಾತ್ರ ರಾಘುನ ಸಹಸ್ರ ಲಿಂಗೇಶ್ವರ ದೇವಾಲಯಕ್ಕೆ ತರಲೇಬೇಕೆಂದು ತಿಪ್ಪರಲಾಗ ಹಾಕಿ ಮುಖಭಂಗಿತನಾದ. ಅದೊಂದು ಪ್ರತ್ಯೇಕ ಸ್ವಾರಸ್ಯಕರ ಕತೆ!


ಕೆ.ಎಚ್. ಶ್ರೀನಿವಾಸ್

ಇಂಥದ್ದೇ ಬಹಿಷ್ಕಾರ ರಾಘುಗೆ ಸಾಗರದ ಎಸಿ ಮೊನ್ನೆ ಹಾಕಿದ್ದಾರೆ. ಸಾಗರದ ವರದಳ್ಳಿಯ ಸರ್ಕಾರಿ ಆಡಳಿತದ ದೇವಸ್ಥಾನದ ಕಾರ್ಯಕ್ರಮವೊಂದರಲ್ಲಿ ರಾಘುನ ಆಶೀರ್ವಚನ ಕೊಡಿಸಲು ಮಠದ ತಾಲಿಬಾನಿಗಳು ಸಿದ್ಧತೆ ನಡೆಸಿದ್ದರು. ಆದರೆ ಸಾಗರದ ದಲಿತ ಮುಖಂಡ ದೂಗೂರು


ಶಮನ


ಅತ್ಯಾಚಾರದಂಥ ಕ್ರಿಮಿನಲ್ ಕೇಸು ಎದುರಿಸುತ್ತಿರು... ರಾಘು ಮಾಣಿ ಸರ್ಕಾರಿ ದೇವಾಲಯದ ಕಾರ್ಯಕ್ರಮ... ಬಂದರೆ ನೈತಿಕತೆಯ ಅಪಹಾಸ್ಯ ಮಾಡಿದಂತೆ ಎಂದ... ವಾದಿಸಿದರು. ಇದನ್ನು ಪುರಸ್ಕರಿಸಿದ ಸಾಗರದ ಅಸಿಸ್ಟೆಂಟ್ ಕಮೀಷನರ್ ರಾಘು ವರದಳ್ಳಿ ದೇವಸ್ಥಾನ... ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ತಡೆಯಾ... ಹೊರಡಿಸಿದರು. ರಾಘು ಪೀಠತ್ಯಾಗ ಮಾಡುವ ತನ... ಈ ಬಹಿಷ್ಕಾರ ಸರಣಿ ಹೀಗೇ ಮುಂದುವರಿಯು... ಸಂಕೇತಗಳು ಗೋಚರಿಸುತ್ತಿದೆ. ಒಟ್ಟಿನಲ್ಲಿ ಬಹಿಷ್ಕಾರ... ಭೂತ ರಾಘುನ ಹೆಗಲೇರಿ ಅಟ್ಟಾಡಿಸುತ್ತಿದೆ, ಪಾಪ... ರಾಘು ಮಾಡಿದ್ದು ಉಣ್ಣುತ್ತಿದ್ದಾನಷ್ಟೆ.

### ಕಲ್ಲಡ್ಕ ಪ್ರಲಾಪ

ಉಪ್ಪಿನಂಗಡಿಯ ಸಹಸ್ರ ಲಿಂಗೇಶ್ವರ ದೇವಸ್ಥಾನ... ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ಕೊಳಕು ಸ್ವಾಮಿ... ರಾಘುಗೆ ಸರ್ಕಾರ ಮತ್ತು ಸ್ಥಳೀಯರು ನಿರ್ದೇಶನ ನೀಡಿದಾ... ಆತನಿಗಿಂತ ಒಂದು ಗುಂಜಿ ಹೆಚ್ಚೇ ಅವಮಾನಿತನಾದವನ... ಆರೆಸ್ಸೆಸ್‌ನ ಹೈಕಮಾಂಡ್‌ನ ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕ... ಭಟ್ಟ! ಶೀಲ-ಸಂಸ್ಕೃತಿ ಬಗ್ಗೆ ಉದ್ದುದ್ದ ಭಾಷಣ ಬಿಗಿಯು... ಈ ಹಿಂದೂತ್ವದ ಚಿತಾವಣೆಗಾರನಿಗೆ ದುಡ್ಡು-ದೊಡ್ಡ... ಚಟ. ಆರೆಸ್ಸೆಸ್‌ನಲ್ಲಿ ತನ್ನದೇ ಅಂತಿಮ ವಾಣಿಯಾಗಬೇಕೆಂದ... ಹಾರಾಡುವ ಭಟ್ಟನಿಗೆ ಹಣ ಕಂಡರೆ ಹಿಂದೂತ್ವ-ದೇಶವಾ... ಯಾವುದೂ ಲೆಕ್ಕಕ್ಕೇ ಇಲ್ಲ, ಇಂಥ ಸಂಘ ಪರಿವಾರ... ಸರದಾರ ಆರಂಭದಿಂದಲೂ ರಾಘುನ ಬೆನ್ನಿಗೆ ನಿಂತ... ಲಾಬಿ ಮಾಡುತ್ತಿರುವುದು ಚಡ್ಡಿಗಳಿಗೇ ಅಸಹ... ಮೂಡಿಸಿಬಿಟ್ಟಿದೆ.

ರೇಪಿಸ್ಟ್ ರಾಘುಗೆ ಯಾಕೆ ಕಲ್ಲಡ್ಕ ಭಟ್ಟ ಬಲವಾ... ಬೆಂಬಲಿಸುತ್ತಿದ್ದಾನೆಂದು ಹುಡುಕ ಹೊರಟರೆ ಸಿಗುವುದ... ರಾಜ್ಯ ಚಡ್ಡಿ ಸಂಘದೊಳಗಿನ ಮೇಲಾಟ. ನಾಗಪುರದಿಂದಲೇ... ಆರೆಸ್ಸೆಸ್‌ನ ಮಹಾಮಹಿಮರು ಕೆಕ್ಕಾರು ಮಠಕ್ಕೆ ಬಂದ... ರಾಘುಗೆ ಪೀಠತ್ಯಾಗ ಮಾಡಿ ಬ್ರಾಹ್ಮಣರನ್ನು ಮುಜುಗರದಿಂ... ಪಾರು ಮಾಡೆಂದು ಆರ್ಡರ್ ಮಾಡಿಹೋಗಿದ್ದರು. ... ಹೊತ್ತಲ್ಲಿ ಕಲ್ಲಡ್ಕ ಭಟ್ಟ ಮಾತ್ರ ತದ್ವಿರುದ್ಧ ನಿಲುವು ತಾಳಿದ... ಇದಕ್ಕೆ ಕಾರಣ ಧರ್ಮಸ್ಥಳದ ಸೌಜನ್ಯಳ ರೇಪ್ ಮತ್ತು... ಮರ್ಡರ್ ಕೇಸ್‌ನ ಧರ್ಮಕಾರಣ! ಈ ಪ್ರಕರಣದಲ್ಲಿ... ಕಲ್ಲಡ್ಕ ಭಟ್ಟ ಧರ್ಮವ್ಯಾಪಾರಿ ವಿರುದ್ಧ ಕಾರ್ಯಾಚರಣೆ... ಇಳಿದಿದ್ದರೆ, ಇಡೀ ಚಡ್ಡಿ ಪರಿವಾರ ಆತನ ಪರವಾಗಿತ್ತು... ಸ್ಥಳೀಯ ಹಿಂದೂತ್ವದ ರಾಜಕಾರಣದಲ್ಲಿ ಭಟ್ಟ ಮತ್ತು... ಧರ್ಮಾಧಿಕಾರಿ ಹಾವು-ಮುಂಗಸಿ. ಧರ್ಮಾಧಿಕಾರಿ... ಹಣಿಯಲು ಸಿಕ್ಕ ಅವಕಾಶ ಆರೆಸ್ಸೆಸ್‌ನ ದೊಡ್ಡವರು ತನ್ನ... ಬಳಸಿಕೊಳ್ಳಲು ಬಿಡದ ಸಿಟ್ಟು ಭಟ್ಟನಲ್ಲಿತ್ತು. ಈಗ ... ಸೇಡು ತೀರಿಕೆಗೆ ಆತ ಅತ್ಯಾಚಾರ ಆರೋಪಿ ರಾಘು... ಪರ ವಹಿಸಿದ್ದಾನೆ. ಜತೆಗೆ ಒಂದಿಷ್ಟು ಕಾಸೂ ಆತನಿಗೆ... ರಾಮಚಂದ್ರಾಪುರ ಮಠದ ತಾಲಿಬಾನಿ ಗ್ಯಾಂಗ್ ಕೊಟ್ಟಿದೆ... ಎಂಬ ಸುದ್ದಿಯೂ ಇದೆ. ರಾಘುನ ಅತ್ಯಾಚಾರದ ಭಾನ್ಗಡಿಗೆ... ಬಲಿಯಾದ ಶಾಮಶಾಸ್ತ್ರಿ ಆತ್ಮಹತ್ಯೆಗೆ ಕಲ್ಲಡ್ಕನ ಬೆದರಿಕೆಯೇ... ಕಾರಣವಾಗಿತ್ತು.

ಚಡ್ಡಿ ಭಟ್ಟ ಉಪ್ಪಿನಂಗಡಿ ದೇವಸ್ಥಾನ ಕಾರ್ಯಕ್ರಮದ... ರಾಘುನ ಪಕ್ಕದಲ್ಲಿ ಕೂರಿಸಿಕೊಂಡು ಆತನ ತಾರೀಫು... ಮಾಡುತ್ತ ಮಠದ ಬಹಿಷ್ಕಾರ-ಗುರುಶಾಪದ ಅಸ್ತ್ರಕ್ಕೆ ಸಾಣೆ... ಹಿಡಿವ ಸ್ಕೆಚ್ ಹಾಕಿಕೊಂಡಿದ್ದ. ಮುಜರಾಯಿ ಇಲಾಖೆಯ... ನಿರ್ಬಂಧದಿಂದ ಹತಾಶನಾದ ಭಟ್ಟ ತಾನೊಬ್ಬನೇ... ಕಾರ್ಯಕ್ರಮದ ವೇದಿಕೆಯಲ್ಲಿ ಹುಚ್ಚನಂತೆ ಭಾಷಣ ಬಿಗಿದ...


ಎಲ್‌ಐಸಿ ಪಾಲಿಸಿ ಸ್ಟೇಟಸ್ ಮಹತಿ ಪ್ಯಾಕ್‌ವೆಲ್ ಕಂಪನಿ ಡಿಟೇಲ್ಸ್

MAHATI PACKWELL PRIVATE LIMITED
(Last updated on: 30 December, 2014)

MAHATI PACKWELL PRIVATE LIMITED is a Unlisted Private company incorporated on 20 Decem... Its registered office is at Shed No.4, Shigehalli, Opp. Rashi Layout, Behind Bairaveshwa... Magadi Main Road, Bangalore, Karnataka and paid-up capital is INR 1.0 lacs. Details of its la... general meeting are not available. The company has 2 directors/Key management personnel.

Status: (Active)
Incorporation Date: 20 December, 2013
CIN: U21022KA2013PTC072666

Entity Type
Type: Unlisted Private Company
Category: Company limited by shares
Subcategory: Indian Non-Government Company
Industry*: Manufacturing (Paper & Paper Products; Publishing, printing and reproduction of recorded media)

Contact Details
Registered Address
Shed No.4, Shigehalli, Opp. Rashi Layout
Behind Bairaveshwara Sawmill, Magadi Main Road
Bangalore - 560091
Karnataka - INDIA

Email Address

Website

| | |
|---|---|
| Date of Incorporation | 20 December 2013 |
| Email ID | |
| Address 1 | Shed No.4, Shigehalli, Opp. Rashi Layout |
| Address 2 | |
| City | Bangalore |
| State | Karnataka |
| Country | INDIA |
| PIN | 560091 |
| Whether listed or not | Unlisted |
| Date of last AGM | N/A |

LIFE INSURANCE CORPORATION OF INDIA

STATUS REPORT OF POLICY NO.

# ರಾಘು ಮತ್ತು ಕಲ್ಲಡ್ಕನ ನಕಲಿ ದಲಿತ ಪ್ರೀತಿ!!


ಪುರೋಹಿತಶಾಹಿ ತತ್ವಾದರ್ಶ, ಬ್ರಾಹ್ಮಣಿಕೆ ನಂಬಿನ ರಾಘು ಮಾಣಿ ಇದ್ದಕ್ಕಿದ್ದಂತೆ ಹಿಂದೂ ಧರ್ಮದ ಕ್ಷತ್ರಿಯ ಗುಣಧರ್ಮದ ತೋಳ್ಬಲದ ಜಾತಿಗಳಿಗೂ ತಾನೊಬ್ಬ ಧರ್ಮಗುರು ಎಂಬಂತೆ ಪೋಸು ಕೊಡಲು ಶುರು ಮಾಡಿದ್ದರ ಹಿಂದೆ ದೊಡ್ಡ ಕತೆಯೇ ಇದೆ. ಕೆಕ್ಕಾರು ಮಠದಲ್ಲಿ ಚಾತುರ್ಮಾಸ್ಯ ವ್ರತದ ಮನರಂಜನಾ ಕಾರ್ಯಕ್ರಮಕ್ಕೆ ಕುಳಿತಿದ್ದ ರಾಘು ಮಾಣಿಗೆ ತಾನು ಪ್ರೇಮಲತಾ ರೇಪ್ ಕೇಸಲ್ಲಿ ಸಿಕ್ಕಿಬೀಳೋದು ಖಾತ್ರಿಯಾಗಿ ಹೋಗಿತ್ತು. ಆಗಾತ ತನ್ನ ರಕ್ಷಣೆ ಮಾಡಿದರೆ ಶೂದ್ರರೇ ಮಾಡಬೇಕು ಹೊರತು ನಿರ್ಲಿಪ್ತ ಸ್ವಭಾವದ ಸ್ವಜಾತಿ ಹವ್ಯಕರಿಂದ ಸಾಧ್ಯವಿಲ್ಲ ಎಂಬುದೂ ಮನದಟ್ಟಾಗಿತ್ತು. ಹೀಗಾಗಿ ಆತ ಚಾತುರ್ಮಾಸ್ಯ ವ್ರತ್ತದ ಹೊತ್ತಲ್ಲಿ ಕೆಕ್ಕಾರಿನ ಸುತ್ತಲಿನ ದಲಿತ (ಮುಕ್ರಿ), ಭಂಡಾರಿ, ಸೇರೇಗಾರ, ನಾಡವ, ನಾಮಧಾರಿ, ಹಾಲಕ್ಕಿ ಒಕ್ಕಲಿಗ..... ಹೀಗೆ ಬೇರೇಬೇರೆ ಶೂದ್ರ ಪಂಗಡದವರನ್ನು ದಿನಕ್ಕೊಂದರಂತೆ ಕರೆದು ಮಂತ್ರಾಕ್ಷತೆ ಕೊಟ್ಟು ಪೂಸಿ ಹೊಡೆದು ಕಳಿಸತೊಡಗಿದ್ದ.

ಹೀಗೆ ಶೂದ್ರಾದಿಗಳ ಗುರುವಾಗುವ ಕಿತಾಪತಿಯಲ್ಲಿ ಆತ ಹರಿಜನರನ್ನು "ಗುರುಜನ"ವೆಂದು ಬಣ್ಣಿಸಿ ತನಗೆ ರಕ್ಷಣೆ ಕೊಡುವಂತೆ ನೋಡಿಕೊಂಡಿದ್ದ. ಈ ಮುಕ್ರಿ ಮತ್ತು ಹಾಲಕ್ಕಿ ಒಕ್ಕಲಿಗರೇ ರಾಘುನ ಅರೆಸ್ಟ್‌ಗೆಂದು ಪೊಲೀಸರು ಬಂದಾಗ ಕೆಕ್ಕಾರು ಮಠಕ್ಕೆ ಏಳು ಸುತ್ತಿನ ಕೋಟೆಯಾಗಿ ನಿಂತಿದ್ದರು. ಇಂಥ ಹರಿಜನರಲ್ಲಿ ಒಬ್ಬ ಗುರು ಮಾತು ನಂಬಿ ಮಂತ್ರಾಕ್ಷತೆ ಪಡೆವಾಗ ಆಗುಬಗೆಯಲ್ಲಿ ಆತನ ಕೊರಳಿಗೆ ಹೂಮಾಲೆ ಹಾಕೇಬಿಟ್ಟ!.... ಅಕಟಕಟಾ.... ಮುಕ್ರಿಯೊಬ್ಬ ಹವ್ಯಕರ ಗುರುವನ್ನು ಮುಟ್ಟುವುದೇ? ಮಠದಲ್ಲಿ ಮರ್ಮರ ಶುರುವಾಯ್ತು, ರಾಘು ಓಡೋಡಿ ಹೋಗಿ ಸ್ನಾನ ಮಾಡಿ ಜನಿವಾರ ಬದಲಿಸಿ ಪಂಚಗವ್ಯ ಸೇವಿಸಿ ಪೀಠಕ್ಕೆ ಬಂದ. ಇದು ರಾಘುನ ಅಸಲಿ ದಲಿತ ಪ್ರೇಮ ಆದ ರಾಘುಗೆ ಗೆಳೆಯರೇ ಗೇಲಿಗೆ ಇಟ್ಟ ಹೆಸರು ಮುಕ್ರೇಶ್ವರ ಸ್ವಾಮಿ.

ಹಾಗೆಯೇ ಮೊನ್ನೆ ಉಪ್ಪಿನಂಗಡಿಯಲ್ಲಿ ರಾಘುನ ಕಟ್ಟಾ ಬೆಂಬಲಿಗ, ಆ ಕಾರಣಕ್ಕೇ ಆರೆಸ್ಸೆಸ್‌ಗೆ ಅಸ್ಪೃಶ್ಯನಾಗಿರುವ ಕಲ್ಲಡ್ಕ ಪ್ರಭಾಕರ ಭಟ್ಟನೂ "ರಾಘು ಶಂಕರಾಚಾರ್ಯರ ನಂತರ ಹಿಂದೂ ಸಮಾಜದಲ್ಲಿ ಸಾಮರಸ್ಯಕ್ಕೆ ಪ್ರಯತ್ನಿಸಿದ ಸಂತ" ಎಂದು ರೈಲು ಬಿಟ್ಟಿದ್ದಾನೆ. ಶಂಕರಾಚಾರ್ಯ ಎಂಥ ಶೂದ್ರ ವಿರೋಧಿಯಾಗಿದ್ದಾನೆಂಬುದು ಇತಿಹಾಸವೇ ಹೇಳುತ್ತದೆ. ಹಾಗೆಯೇ ರಾಘು ದಲಿತರ ಬಳಿ ಹೋಗುವುದು ಆತನ ಸ್ವಾರ್ಥ ಮತ್ತು ಬಚ್ಚಿಟ್ಟುಕೊಂಡು ರಕ್ಷಣೆ ಪಡೆಯಲಷ್ಟೇ. ಕಲ್ಲಡ್ಕ ಹೇಳುವ ಹಾಗೆ ರಾಘು ದಲಿತರ ಹಿತಕ್ಕಾಗಿ ಎಂದೂ ಅವರ ಮನೆಗೆ-ಕೇರಿಗೆ ಹೋಗಿದ್ದಿಲ್ಲ. ಆತ ಸಾಮಾನ್ಯ ದಲಿತರ ಬಳಿಗಂತೂ ಹೋಗಿದ್ದೇ ಇಲ್ಲ.

ರಾಘು ಹೋಗಿದ್ದು ಸುಳ್ಯದ ಬಲಿತ ದಲಿತ-ಚೆಡ್ಡಿಗಳ ಪರಮಸೇವಕನಂತಿರುವ ಶಾಸಕ ಎಸ್. ಅಂಗಾರನ ಮನೆಗೆ! ಯಾಕೆ ಗೊತ್ತಾ? ಪೆರಾಜೆಯಲ್ಲಿರುವ ಮಾಣಿಮಠ (ರಾಮಚಂದ್ರಾಪುರಮಠದ ಶಾಖಾ ಮಠ)ದ ವತಿಯಿಂದ ಕಟ್ಟಿಸುತ್ತಿರುವ "ಜನಭವನ"ಕ್ಕೆ ಶಾಸಕನ ನಿಧಿಯಲ್ಲಿ ಅಥವಾ ಆತನ ಪ್ರಯತ್ನದಲ್ಲಿ ಸರ್ಕಾರಿ ಹಣ ರಾಘುಗೆ ಬೇಕಾಗಿದೆ. ಅದಕ್ಕಾಗಿ ರಾಘು ಸ್ವಾಮಿ ಅಂಗಾರನ ನೋಡಲು ಹೋಗಿದ್ದಾನೆಯೇ ಹೊರತು ದಲಿತೋದ್ಧಾರಕ್ಕಾಗಿ ಅಥವಾ ಅವರ ಮೇಲಿನ ಗೌರವ-ಪ್ರೀತಿಯಿಂದಲ್ಲ.

ಕಲ್ಲಡ್ಕನ ಬೊಗಳೆಗೆ ಅರ್ಥವಿದೆಯಾ? ಈತನ ಹಿಂದೂತ್ವದ ಹಿಕಮತ್ತು ಅಂಗಾರನಿಗೆ ಅರ್ಥವಾಗದೇ ಇರಬಹುದು. ದಲಿತರಿಗೆ ಖಂಡಿತ ಗೊತ್ತಾಗೇ ಆಗುತ್ತದೆ!




ಾಡಿದ್ದಾನೆ. ರಾಘು ಮಾಣಿಯು ಕೊಳಕುತನ
ಸುತ್ತಿರುವ ಬುದ್ಧಿಜೀವಿಗಳು-ಪ್ರಜ್ಞಾವಂತರ ಮೇಲೆಲ್ಲ
ಾಯ್ದು ವಿಕೃತಾನಂದ ಪಡೆದಿದ್ದಾನೆ. ಮುಜರಾಯಿ
ಿಯ ನಿಷೇಧದ ನಿರ್ದೇಶನ ಹಿಂದೂ ಸಮಾಜದ
ನ ಸರ್ಕಾರಿ ಆಕ್ರಮಣ ಎಂದು ಪ್ರಚೋದನಾತ್ಮಕ
ಾ ಬಗಿದಿದ್ದಾನೆ. ರಾಘುನ ಸಮರ್ಥಿಸಿಕೊಳ್ಳಲು
ಿ-ಚರ್ಚ್‌ಗಳ ಬಗ್ಗೆ ಕುಹಕದ ಮಾತಾಡಿ ಹಿಂದೂಗಳ
ುವ ಕಿತಾಪತಿ ಮಾಡಿದ್ದಾನೆ.

ಾಘುಗೆ ಉಪ್ಪಿನಂಗಡಿ ಪ್ರವೇಶ ನಿಷೇಧಿಸಿದ್ದು
ರಾಷ್ಟ್ರೀಯ ಷಡ್ಯಂತ್ರವಂತೆ! ಇದು ಆತ ಆರೆಸ್ಸೆಸ್
ರಯೇ ಮಾಡಿದ ದಾಳಿ!! ಸಂಘ ಪರಿವಾರದ
ಷ್ಟವರೂ ರಾಘುನ ಬೆನ್ನಿಗೆ ಬಿದ್ದಿದ್ದಾರೆಂದು ಹೇಳುವ
ಾಕ ಚೆಡ್ಡಿ ಗ್ಯಾಂಗಿನ ತನ್ನ ವಿರೋಧಿಗಳಿಗೆ ಆತ
ೕ ಕೊಡಲು ಹವಣಿಸಿದ್ದಾನೆ. ಮಜಾ ಎಂದರೆ,
: ಕೆಲವು ದಿನಗಳ ಹಿಂದೆ ಪುತ್ತೂರಲ್ಲಿ ಸಂಘಟಿಸಿದ್ದ
ಹಿಂದೂ ಪರಿಷತ್‌ನ ಅಂತಾರಾಷ್ಟ್ರೀಯ ಅಧ್ಯಕ್ಷ
್ ತೊಗಾಡಿಯಾನ ವಿರಾಟ್ ಹಿಂದೂ ಹೃದಯ
ುಕ್ಕೇ ರಾಘು ಮಾಣಿಯನ್ನು ತರಲಾಗಿರಲಿಲ್ಲ. ರಾಗು
ವೇಶಕ್ಕೆ ಬರ್‍ತಾನೆಂದು ಭಟ್ಟ ಪುತ್ತೂರಿನಲ್ಲೆಲ್ಲಾ ಫ್ಲೆಕ್ಸ್-
ೕ ಹಾಕಿಸಿ ರಾಘುಗೆ ಸ್ವಾಗತ ಕೋರಿದ್ದ. ಆದರೆ
್ ನಾಗಪುರ-ಬೆಂಗಳೂರಿನ ನೇತಾಗಳು "ನೀನು
ೕಪಿಸ್ಟ್ ಸ್ವಾಮೀನ ಕರೆಸೋದಾದ್ರೆ ನಾವು
ಡಿಯಾನನ್ನೇ ಹೋಗದಂತೆ ತಡೆಯಬೇಕಾಗ್ತದೆ...."
ಸಮಾ ಉಗಿದಿದ್ದರು. ಆಗ ವಿಧಿಯಿಲ್ಲದೆ ಭಟ್ಟ
ಮುದುರಿಕೊಂಡಿದ್ದ. ಹಾಗೆಯೇ ಬೆಂಗಳೂರಿನ
ಾಡಿಯಾನ ಶಾಂತಿಗೆಡಿಸುವ ಹಿಂಸೋನ್ಮಾದ
ೕದಕ ಆಡಿಯೋ ಶೋಗೂ ರಾಘುನನ್ನು ತಂದು
ಸಲಾಗಿರಲಿಲ್ಲ ಈ ಭಂಡ ಭಟ್ಟನಿಗೆ. ಪುತ್ತೂರು-
ೂರಲ್ಲಿ ತರಹೇವಾರಿ ಸಾಧು-ಸಂತರು ವಿಜೃಂಭಿಸಿದರೂ
ನ ಅಡ್ರೆಸ್ ಮಾತ್ರ ಇರಲಿಲ್ಲ. ಇದಕ್ಕೆ ಕಾರಣ
ಪರಿವಾರದ "ಬಹಿಷ್ಕಾರ". ಆಗ ಕಾಣದ
ರಾಷ್ಟ್ರೀಯ ಸಂಚು ಭಟ್ಟನಿಗೆ ಉಪ್ಪಿನಂಗಡಿ ದೇವಸ್ಥಾನ
ಕ್ರಮಕ್ಕೆ ರಾಘು ಬಹಿಷ್ಕೃತನಾದಾಗ ಕಾಣಿಸಿದ್ದು
ಸ್ಪದವೇ ಸರಿ!

ಾಘುನ ಪರ ವಹಿಸಿರುವ ಭಟ್ಟನನ್ನೇ ಆರೆಸ್ಸೆಸ್‌ನಿಂದ
ದೂಡುವ ಚಿಂತನ-ಮಂಥನಗಳು ನಡೆದಿವೆ.
ಂಗಡಿ ಯಲ್ಲಿ ಭಟ್ಟ ರಾಘು ಪರ ವಕಾಲತ್ತು
ದ್ದನ್ನು ಆಕ್ಷೇಪಿಸಿ ಒಂದಿಷ್ಟು ಹವ್ಯಕ ಮುಖಂಡರು
"ಕೇಶವ ಕೃಪಾ"ಕ್ಕೆ ದೂರು ಕೊಂಡೊಯ್ದಿದ್ದರು.
ಲ್ಲಿಂದ ಬಂದ ಉತ್ತರವೇ ಕಲ್ಲಡ್ಕ ಚೆಡ್ಡಿ ಗ್ಯಾಂಗಿಂದ
ೂಂಡು ಹೊರಬೀಳುವುದು ಸನ್ನಿಹಿತವಾಗಿದೆ ಎಂಬ
ಬಿತ್ತರಿಸಿದೆ. "ನೋಡ್ರಿ... ನಾವು ಆ ಭಟ್ಟನಿಗೆ
ವೇದಿಕೆಗಳಲ್ಲಿ, ಮೀಟಿಂಗ್‌ಗಳಲ್ಲಿ ರಾಘುನ ಪರ
ದಂತೆ ತಾಕೀತು ಮಾಡಿದ್ದೇವೆ... ಅವ್ನು ಪಬ್ಲಿಕ್
ಗಳಲ್ಲಿ ರಾಘುನ ಸಮರ್ಥಿಸಿಕೊಂಡರೆ ನಾವೇನೂ
ಲಿಕ್ಯಾಗೂದಿಲ್ಲ... ನಮ್ಗೂ ಆ ಭಟ್ಟನ
ಸಂಗದಿಂದ ಬೇಜಾರು ಬಂದಿದೆ.... ಇದ್ಕೊಂದು
ಾಣಿಸ್ಲೇಬೇಕು...." ಎಂದಿದ್ದಾರೆ ಕೇಶವಕೃಪಾದ
ು.




## ಸತ್ಯಶೋಧ ಮಿತ್ರಮಂಡಳಿ!

ಅತ್ತ ಆರೆಸ್ಸೆಸ್‌ನಲ್ಲಿ ತನ್ನ ಪರ ಲಾಬಿ ಮಾಡಲು ಕಲ್ಲಡ್ಕ ಭಟ್ಟನನ್ನು ನೇಮಿಸಿಕೊಂಡಿರುವ ರಾಘು ಮಾಣಿ ಇತ್ತ ಸಮಾಜದಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತನ್ನ ದಶಾವತಾರದ ಲೀಲೆಯ ಬಗ್ಗೆ ಕಮೆಂಟ್ ಮಾಡೋರ ಹಣಿಯಲು ಮಠದ ರೌಡಿ ಮಾಣಿ ಪಡೆ, ಅಟ್ರಾಸಿಟಿ ಕಾಯ್ದೆ ಮತ್ತು ಸೈಬರ್ ಕಾನೂನನ್ನು ಬಳಸಿಕೊಳ್ಳುತ್ತಿದ್ದಾನೆ. ಫೇಸ್‌ಬುಕ್‌ನಲ್ಲಿ ಸರಿಸುಮಾರು 600 ಜನರ ಬಳಗವೊಂದಿದ್ದು ಅದು ರಾಘು ಮಾಣಿಯ ಅತ್ಯಾಚಾರ-ಅನಾಚಾರ-ಅವ್ಯವಹಾರ-ದೌರ್ಜನ್ಯ-ಏಕಾಂತ ದರ್ಶನ.... ಮುಂತಾದ ಲೀಲೆಗಳ ಬಗ್ಗೆ ಚರ್ಚೆ ಮಾಡುತ್ತಿದೆ. ಹವ್ಯಕ ಬ್ರಾಹ್ಮಣರೇ ಹೆಚ್ಚಿರುವ ಈ ಫೇಸ್‌ಬುಕ್ ಬಳಗದ ಹೆಸರು 'ಸತ್ಯಶೋಧ ಮಿತ್ರಮಂಡಳಿ' ಇದಕ್ಕೆ ವಿರುದ್ಧವಾಗಿ ರಾಘುನ ತಾಲಿಬಾನಿ ಪಡೆ 'ಗುರುಗಳೇ ನಿಮ್ಮ ಹಿಂದೆ ನಾವಿದ್ದೇವೆ' ಪಡೆ ಕಟ್ಟಿಕೊಂಡಿದೆ.

ಈ 'ನಾವಿದ್ದೇವೆ' ಗ್ಯಾಂಗಿಗೆ ರಾಘುನ 'ಗುಣಗಾನ' ಮಾಡದವರ ಮೇಲೆ ದೈಹಿಕ-ಮಾನಸಿಕ ದಾಳಿ ಮಾಡುವುದು, ಸೈಬರ್ ಕಾನೂನಿನಂತೆ ಕೇಸು ಹಾಕೋದು, ಅಟ್ರಾಸಿಟಿ ಪ್ರಕರಣ ದಾಖಲಿಸಿ ಹಿಂಸೆಗೀಡು ಮಾಡೋದು ನಿತ್ಯಕರ್ಮದಂತಾಗಿ ಹೋಗಿದೆ! ನೈಜೀರಿಯಾದಲ್ಲಿ ಉನ್ನತ ಹುದ್ದೆಯಲ್ಲಿರುವ ಶಾಂತಾರಾಮ ಹೆಗಡೆ ಕಟ್ಟೆ, ಸಾಗರದ ಮಂಜುನಾಥ ಹೊಸಬಾಳೆ, ವಿಟ್ಲದ ಚಂದ್ರಶೇಖರ್, ಕೇಶವ ಭಟ್ ಎಂಬವರು ಫೇಸ್‌ಬುಕ್‌ನಲ್ಲಿ ರಾಘುನ ಢೋಂಗಿ ದಲಿತ ಪ್ರೇಮದ ಬಗ್ಗೆ ಚರ್ಚೆ ಮಾಡಿದ್ದರು. ಕೆಕ್ಕಾರು ಭಾಗದಲ್ಲಿರುವ 'ಮುಕ್ರಿ' ಎಂಬ ದಲಿತ ಪಂಗಡವನ್ನು ರಾಘು ಓಲೈಸುತ್ತಿರುವುದು, ಅವರನ್ನು ಮಠಕ್ಕೆ ಕರೆದು ಮಂತ್ರಾಕ್ಷತೆ ನೀಡುವುದು ದಲಿತ ಪ್ರೀತಿಯಿಂದಲ್ಲ; ತನ್ನ ರಕ್ಷಣೆಗೆ-ಅಸ್ತಿತ್ವ ಉಳಿಕೆ ಎಂಬುದು ಈ ಗೆಳೆಯರ ಅಭಿಮತ. ಇದನ್ನೇ ದಲಿತನಿಂದನೆ ಎಂದು ರಾಘನ ಪಡೆ ಕುಮಟಾ ಪೊಲೀಸ್ ಠಾಣೆಯಲ್ಲಿ ಈ ನಾಲ್ವರ ಮೇಲೆ ಅಟ್ರಾಸಿಟಿ ಕೇಸು ಜಡಿಯಲು ಷಡ್ಯಂತ್ರ ಮಾಡಿದೆ. ಆ ಮಟ್ಟಿಗೆ ರಾಘು ಹತಾಶನಾಗಿ ಹೋಗಿದ್ದಾನೆ.

ಪೊಲೀಸರ ಪ್ರಕಾರ ದಲಿತರ ಅವಹೇಳನ ಎಂದು ಅರ್ಜಿ ಕೊಟ್ಟವನು ಕೆಕ್ಕಾರು ಮಠದ ಹತ್ತಿರದ ಕಡತೋಕದ ಎಂ.ಡಿ. ಮುಕ್ರಿ ಎಂಬ ತರುಣ. ಆದರೆ ಈ ಎಂ.ಡಿ. ಮುಕ್ರಿಗೆ ಈ ಕೇಸಿನ ತಲೆಬುಡವೇ ಗೊತ್ತಿಲ್ಲ. ಪಾಪದ ಬಡಪಾಯಿ ಆತ. ದಿನವೂ ದುಡಿದುಣ್ಣುವ ಈ ದಲಿತನನ್ನು ಬಳಸಿಕೊಂಡವನು ಮಠದ ಮೋಸಗಾರರ ಮಾತಿಗೆ ಬಲಿ ಬಿದ್ದು ರಾಘುನ ರಕ್ಷಣಾ ಪಡೆ ಸೇರಿರುವ ಬಲಿತ ದಲಿತ ಎನ್.ಆರ್. ಮುಕ್ರಿ! ಈ ಮುಕ್ರಿ ನಿವೃತ್ತಿ ಸಿಪಿಐ. ಈತ ತನ್ನ ಜಾತಿಯ ಅಮಾಯಕ ಹುಡುಗನ ಹೆಸರಲ್ಲಿ ಹೆಗಡೆಕಟ್ಟೆ ಮತ್ತು ಗೆಳೆಯರ ಮೇಲೆ ಅಟ್ರಾಸಿಟಿ ಹಾಕಿಸಲು ಪ್ರಯತ್ನಿಸಿದ್ದಾನೆ. ಇದು ಗೊತ್ತಾದ ತಕ್ಷಣ ಇದು ತಕ್ಷಣ ಎಂ.ಡಿ. ಮುಕ್ರಿ ಅರ್ಜಿ ವಾಪಸ್ ಪಡೆದಿದ್ದಾನೆ. ಈ ನಾಲ್ವರು ಫೇಸ್‌ಬುಕ್ ಮಿತ್ರರಿಂದ ತನ್ನ ಮುಕ್ರಿ ಸಮಾಜಕ್ಕೆ ಅವಹೇಳನವೇನೂ ಆಗಿಲ್ಲ; ಈ ಕೇಸ್ ಕೊಡಿಸಿದ್ದು ಎನ್.ಆರ್. ಮುಕ್ರಿ ಎಂದು ಪತ್ರಿಕಾಹೇಳಿಕೆಯೂ ಕೊಟ್ಟಿದ್ದಾನೆ. ಅಲ್ಲಿಗೆ ಮಠದ ತಾಲಿಬಾನಿಗಳ ಕುತಂತ್ರ ಬಹಿರಂಗವಾಗಿದೆ. ಅಕಸ್ಮಾತ್ ನ್ಯಾಯಾಲಯಕ್ಕೆ ಹಾಜರಾಗುವಂಥ ಸನ್ನಿವೇಶ ಬಂದರೆ ಆ ನಾಲ್ವರ ಮೇಲೆ ಕುಮಟೆಯಲ್ಲಿ ದಾಳಿ ಮಾಡುವ ಪ್ಲಾನೂ ತಾಲಿಬಾನಿಗಳು ಹಾಕಿದ್ದರು. ಅಷ್ಟೇ ಅಲ್ಲ, ಹೆಗಡೆಕಟ್ಟೆಯವರ ವೃದ್ಧ ತಾಯಿಯಿರುವಲ್ಲಿಗೆ (ಶಿರಸಿ) ಹೋಗಿ ರಾಘುನ ಬಂಟರು ಬಹಿಷ್ಕಾರದ ಬೆದರಿಕೆ ಹಾಕಿಬಂದಿದ್ದಾರೆ. ಮಗನ



ಹದ್ದುಬಸ್ತಿನಲ್ಲಿಡದಿದ್ರೆ ಪರಿಣಾಮ ಕೆಟ್ಟದಾಗುತ್ತದೆ ಎಂದು ಧಮಕಿ ಹಾಕಿದ್ದಾರೆ. ಈ ಹೆಗಡೆಕಟ್ಟೆ ಫ್ಯಾಮಿಲಿ ಮಠದ ಪರಮಭಕ್ತರಾಗಿದ್ದವರು. ಲಕ್ಷಾಂತರ ರೂಪಾಯಿ ದೇಣಿಗೆ ಕೊಟ್ಟವರು. ಇಂಥವರಿಗೇ ರಾಘುನ ಪಡೆ ಗಂಡಾಂತರಕಾರಿಯಾಗಿದೆ.

## ಮಹತಿ ಪ್ಯಾಕ್‌ವೆಲ್ ಮತ್ತು ಜೀವವಿಮೆ!!

ತನಗಾಗದವರನ್ನು ನಿರ್ನಾಮ ಮಾಡುವ ರಾಘುನ ಭೂಗತ ಸಂಚಿನ ಕತೆ ಒಂದೆರಡಲ್ಲ. ಅದೆಷ್ಟೋ ಜನ ರಾಘುನ ಬೆಂಬಲಿಗರ ದಾಳಿಗೆ ತುತ್ತಾಗಿ ನಾಶವಾಗಿ ಹೋಗಿದ್ದಾರೆ. ಒಂದು ಸಾರಿ ಯಾರನ್ನಾದರೂ ರಾಘು "ಕಾಫಿರ್" ಎಂದು ಘೋಷಿಸಿದರೆ ಸಾಕು! ಅಂಥವರ ಮುಗಿಸಲು ಏನೇನು ಸಾಧ್ಯವೋ ಅದೆಲ್ಲ ಆತನ ರೌಡಿ ಪಟಾಲಮ್ ಮಾಡುತ್ತದೆ. ಕೆಲದಿನಗಳ ಹಿಂದೆ ಬಾಲಕೃಷ್ಣರಾಜ್ ನೀರ್ಚಾಲ್ ಎಂಬವರ ಮೇಲೆ ಫೇಸ್‌ಬುಕ್‌ನಲ್ಲಿ ಚರ್ಚೆ ಮಾಡಿದ್ದಕ್ಕೆ ಸೈಬರ್ ಕ್ರೈಮ್ ಕೇಸ್ ಜಡಿಯಲು ರಾಘುನ ಬಲಗೈ ಬಂಟ ರಾಡು ಗಣಪತಿ ಎಂಬಾತ ಪ್ರಯತ್ನಿಸಿದ್ದ ಆಕಾಶ ನೋಡಿ ಉಗುಳುವ ಸ್ವಭಾವದ ರಾಘು ಮತ್ತವನ ನಡತೆಗೆಟ್ಟವರ ತಂಡ ನೀರ್ಚಾಲ್‌ರನ್ನು ಕೇಸ್‌ನಲ್ಲಿ ಸಿಕ್ಕಿಸಲು ಹೋಗಿ ತಮ್ಮ "ಬಂಡವಾಳ" ಬಯಲು ಮಾಡಿಕೊಂಡಿದ್ದು ಸ್ವಾರಸ್ಯಕರವಾಗಿದೆ.

ಗಣಪತಿ ಹೆಗಡೆ ಹೊಸನಗರದ ರಾಮಚಂದ್ರಾಪುರ ಮಠದ ಶಾನುಭೋಗ! ಅಂದರೆ ರಾಘು ಸ್ವಾಮಿಯ ಪರ್ಸನಲ್ ಅಸಿಸ್ಟೆಂಟ್! ಹೊನ್ನಾವರದ ಹೊಸಾಕುಳಿ (ಹಳಿ ಮನೆ) ಕಡೆಯ ಈ ಅರೆಶಿಕ್ಷಿತ ರಾಘುನ ಬಾಲ್ಯ ಸ್ನೇಹಿತನೆಂಬ ಪ್ರತೀತಿಯೂ ಇದೆ. ಮಠದ ಕೋಟ್ಯಂತರ ರೂ ವ್ಯವಹಾರದ 'ಧರ್ಮಚಕ್ರ' ಟ್ರಸ್ಟ್‌ನ ಮೇಲುಸ್ತುವಾರಿ ಈತನದೇ. ಟ್ರಸ್ಟಿನ ಲಕ್ಷಾಂತರ ರೂ ಈತನ ಖಾಸಗಿ ಬ್ಯಾಂಕ್ ಖಾತೆಯಿಂದ ಬದಲಾವಣೆಯಾಗಿದೆ. ಪುಷ್ಕಳ ಅವ್ಯವಹಾರ ನಡೆಸಿರುವುದು ಈ ಟ್ರಸ್ಟ್‌ನಲ್ಲಾಗಿದೆ. ಕೇಂದ್ರ ತೆರಿಗೆ ಇಲಾಖೆಯಿಂದ ತೆರ ಉಲ್ಲಂಘನೆಗಾಗಿ ವಿಚಾರಣೆ ಎದುರಿಸುತ್ತಿದೆ. ಈತ ಸುಳ್ಯದ ಶಮನ ಎಂಬ ಎಮ್‌ಎಸ್ಸಿ ಆಗಿರುವ ಶ್ರೀಮಂತ ಹವ್ಯಕರ ಮನೆಯ ಹೆಣ್ಣನ್ನು ಮದುವೆಯಾಗಿದ್ದಾನೆ. ಈಕೆ-ರಾಘುನ ಪರಮಾಪ್ತ ಭಕ್ತೆ! ಹೈಸ್ಕೂಲು ದಿನಗಳಿಂದಲೂ ಮಠಕ್ಕೆ ಹೋಗಿ-ಬಂದು ಮಾಡುತ್ತಿದ್ದ ಶಮನಗೆ ಗಣಪತಿ ಹೆಗಡೆಯ ದೋಸ್ತಿಯಾಗಿದೆ. ರಾಘು ಸ್ವಾಮಿಯೇ ಮುಂದೆ ನಿಂತು ಈ ಡಬ್ಬಲ್ ಡಿಗ್ರಿ ಹುಡುಗಿಯನ್ನು ಸರಿಯಾಗಿ ಹೈಸ್ಕೂಲೂ ದಾಟದವನ ಜೊತೆ ಮದುವೆ ಮಾಡಿದ್ದಾರೆ. ಇದು ರಾಘು-ಶಮನ-ಗಣಪತಿಯ "ತ್ರಿವೇಣಿ ಸಂಗಮ" ಎಂದು ಮಠದ ಮಾಣಿಗಳು ಇವತ್ತಿಗೂ ಮಾತಾಡಿಕೊಳ್ಳುತ್ತಿವೆ. ರಾಘು ಸ್ವಾಮಿ ಪೌರೋಹಿತ್ಯದಲ್ಲಿ ಇಂಥ ಅಯೋಗ್ಯ ಗಿಂಡಿ ಮಾಣಿಗಳು ತಮಗಿಂತ ಹೆಚ್ಚಿನ ಯೋಗ್ಯತೆಯ ಹುಡುಗಿಯರೊಂದಿಗೆ ಮದುವೆಯಾಗಿರುವುದು, ಇದರಲ್ಲಿ ಕೆಲವು ಹುಡುಗಿಯರ ಬದುಕು ಬರ್ಬಾದು ಆಗಿರುವುದು ಅನೇಕಾನೇಕ ಅರ್ಥ-ಅನುಮಾನ-ರಾಘುನ ಸ್ತ್ರೀಕಾಳಜಿಯ ಚರ್ಚೆ ಹುಟ್ಟುಹಾಕಿದೆ.


20.12.13 ರಂದು ಈ ಶಮನ ಮತ್ತು ಗಣಪತಿ ದಂಪತಿ "ಮಹತಿ ಪ್ಯಾಕ್‌ವೆಲ್ ಪ್ರೈವೇಟ್ ಲಿಮಿಟೆಡ್" ಎಂಬ ಕಂಪನಿ ಶುರು ಮಾಡಿದ್ದಾರೆ. ಬೆಂಗಳೂರಿನ ಮಾಗಡಿ ಮೈನ್‌ರೋಡ್‌ನ ವಿಳಾಸದ ಸದ್ರಿ ಕಂಪನಿ ರಾಘುನ ಬೇನಾಮಿ ಕೈಗಾರಿಕೆ ಎನ್ನುವವರೂ ಇದ್ದಾರೆ. ಇದರ ಇ-ಮೈಲ್ ಐಡಿ-hegde@me.com. ವಿಷಯ ಅದಲ್ಲ, ಅಸಲಿ ಸಂಗತಿ ಎಂದರೆ ಈಚೆಗೆ ಈ ಕಂಪನಿಯ ವಿಳಾಸದಿಂದಲೇ ರಾಘುನ ಜೀವವಿಮಾ ಪಾಲಿಸಿ (621975233) ಗೆ ಬರೋಬ್ಬರಿ 1,21,337 ರೂ. ಕಂತು ಹೋಗಿದೆ ಎಂಬುದೀಗ ದೊಡ್ಡ ರಾದ್ಧಾಂತ ಆಗಿದೆ.

ಸುಮಾರು 17 ವರ್ಷದ ಹಿಂದೆ ಸರ್ವಸಂಗ ಪರಿತ್ಯಾಗಿಯಾಗಿ ಆತ್ಮಶ್ರಾದ್ಧ ಮಾಡಿಕೊಂಡಿರುವ ರಾಘು ಸ್ವಾಮಿಗೆ 1 ಕೋಟಿ ರೂ. ಜೀವವಿಮೆ ಇಳಿಡಿರುವ ರಾಘು ಸ್ವಾಮಿಗೆ ಬರೋಬ್ಬರಿ 1 ಕೋಟಿ ರೂ. ಜೀವ ವಿಮೆ ಇಳಿಸಿಕೊಳ್ಳುವ ಹುಕ್ಕಿ ಬಂದಿತ್ತಲ್ಲ, ಅದೇ ಈಗ ಆತನ ಸನ್ಯಾಸತ್ವದ ಹಲವು ಅನುಮಾನಾಸ್ಪದ ಅಂಶಗಳಲ್ಲಿ ಒಂದಾಗಿ ಕಾಡುತ್ತಿದೆ. ಈ ಪಾಲಿಸಿ ಮಾಡಿಸಿದ ಏಜೆಂಟ್ (08151626) ರಾಜಲಕ್ಷ್ಮಿ ಜೋಶಿ ಎಂಬ ಅಂದಿನ ಎಳೆಪ್ರಾಯದ ಹೆಂಗಸು. ಈಕೆ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ಭೀಮೇಶ್ವರ ಜೋಶಿಯ ಧರ್ಮಪತ್ನಿ. ರಾಘು ಈ ಅನ್ನಪೂಣೇಶ್ವರಿ ದರ್ಶನಕ್ಕೆ ಪದೇಪದೇ ಹೋಗಿ ಬರುವ ರೂಢಿ ಇಟ್ಟುಕೊಂಡಿರುವುದು ಅನೇಕ ರಸಿಕ- ರಂಜನೆಗೂ ಕಾರಣವಾಗಿದೆ. ಇದೆಲ್ಲ ಹಳೆ ಕತೆ.

ರಾಘು ಸ್ವಾಮಿ ಯಾನೆ ಹರೀಶ್ ಎಸ್. ಎಂಬ ಕಾವಿ ಆಸಾಮಿ ಎಲ್‌ಐಸಿ ಪಾಲಿಸಿಗೆ ಕೊಟ್ಟಿರುವ ಇ-ಮೇಲ್ ಐಡಿ ಇದೆಯಲ್ಲ ಅದು ಗಣಪತಿ-ಶಮನ ದಂಪತಿಗಳ ಪ್ಲಾಸ್ಟಿಕ್ ಕಂಪನಿಯ ಐಡಿ. ಅಂದರೆ -hegde@me.com. ರಾಘುನ ಸಂಪರ್ಕ ವಿಳಾಸ ಅಂದಾಯ್ತು. ರಾಘುನ 50 ಲಕ್ಷದ ಒಂದು ಪಾಲಿಸಿಯ ಸ್ಟೇಟಸ್ ರಿಪೋರ್ಟ್ ಈಚೆಗೆ ಜಾಲತಾಣದಲ್ಲಿ ಹರಿದಾಡಿತ್ತು. ಮಹತಿ ಪ್ಯಾಕ್‌ವೆಲ್‌ನವರು ಯಾಕೆ ಹರೀಶನ ಇಷ್ಟು ದೊಡ್ಡ ಮೊತ್ತದ ಕಂತನ್ನು ಕಟ್ಟುತ್ತಾರೆ? ಆ ಕಂಪನಿ ರಾಘುನ ಬೇನಾಮಿ ಕಂಪನಿಯಾ? ಇಲ್ಲದಿದ್ದರೆ ಶಮನ-ಗಣಪತಿ ಏಕೆ ಲಕ್ಷಗಟ್ಟಲೆ ಪ್ರೀಮಿಯಂ ತುಂಬುತ್ತಾರೆ? ರಾಘು-ಶಮನ-ಗಣಪತಿ ನಡುವಿನ ಸಂಬಂಧವೇನು? ಮುಗ್ಧರ ಭಕ್ತಿಗೆ ಮೋಸ ಮಾಡುವ ಲೌಕಿಕ ವ್ಯವಹಾರ ಅದೆಷ್ಟು ರಾಮಚಂದ್ರಾಪುರ ಮಠದ ನೆರಳಲ್ಲಿ ನಡೆಯುತ್ತಿದೆ! ಎಂಬಿತ್ಯಾದಿ ಕಾಮೆಂಟ್‌ಗಳು ಹರಿದಾಡಿದ್ದವು. ಜೊತೆಗೆ ಮಹತಿ ಪ್ಯಾಕ್‌ವೆಲ್ ಕಂಪನಿಯ ವಿವರ ಮತ್ತು ರಾಘುನ ವಿಮಾ ಪಾಲಿಸಿ ಸ್ಟೇಟಸ್ ಕೂಡ ಜಾಲತಾಣದಲ್ಲಿ ಕಂಡುಬಂದಿತ್ತು. ಪಾಲಿಸಿ ಮತ್ತು ಕಂಪನಿಯ ಇ-ಮೇಲ್ ಐಡಿ ಒಂದೇ ಆಗಿರುವುದು ರಾಘುನ ಕಪಟ ಸನ್ಯಾಸತ್ವ ಜಗಜ್ಜಾಹೀರು ಮಾಡಿಬಿಟ್ಟಿದೆ.

(ಮುಂದಿನ ಸಂಚಿಕೆಗೆ)

# ಮೇಲುಕೋಟೆ: ಖದೀಮ ಅರ್ಚಕರ 'ಆಭರಣ ಲೂಟಿ'!




ಕಳುವಾಗಿರುವ ಮೂರು ಉತ್ಸವ ಮೂರ್ತಿಗಳ ಆಭರಣಗಳು...

'ಭಕ್ತಿ'ಯ ನೆಪದಲ್ಲಿ ಮುಗ್ಧ ಜನರಿಗೆ ದೇವರನ್ನು ತೋರಿಸಿ ಸುಲಿಯುವ ಅರ್ಚಕ ಪ್ರಭೃತಿಗಳ ಪೀಳಿಗೆ ಸಮಾಜಕ್ಕೆ ಹೊಸದೇನೂ ಅಲ್ಲ. ಪ್ರತಿ ಧಾರ್ಮಿಕ ಕ್ಷೇತ್ರ, ಗುಡಿ ಗುಂಡಾಂತರಗಳ ತಳಪಾಯ ಎದ್ದುನಿಂತಿರೋದೆ ಇಂತಹ ಆಲೋಚನೆಯ ಅಡಿಗಲ್ಲುಗಳಿಂದ. ಆದರೆ ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ವ್ಯಥೆ ಇದಕ್ಕೂ ಒಂದು ಕೈಮೀರಿದ್ದು. ಯಾಕೆಂದರೆ ಇಲ್ಲಿನ ಅರ್ಚಕ ಕೂಟ ಕೇವಲ ಭಕ್ತರ ಸುಲಿಗೆ ಮಾಡೋದಲ್ಲದೆ ಖುದ್ದು ಚೆಲುವರಾಯಸ್ವಾಮಿಯನ್ನೂ ಅಹೋರಾತ್ರಿ ದರೋಡೆ ಮಾಡುತ್ತಿದ್ದಾರೆ. ಖದೀಮ ಅರ್ಚಕರು, ಕಳ್ಳ ಪರಿಚಾರಕರು, ಭ್ರಷ್ಟ ಅಧಿಕಾರಿಗಳ ಕೂಟದ ಭರ್ಜರಿ ರಾಬರಿಗೆ ಸಿಲುಕಿದ ಚೆಲುವರಾಯನ ಆಭರಣಗಳು ಒಂದೊಂದಾಗಿ ನಾಪತ್ತೆಯಾಗುತ್ತಿವೆ. ಅಟ್ ದಿ ಸೇಮ್ ಟೈಮ್, ಅರ್ಚಕರ ಕುತ್ತಿಗೆಯಲ್ಲಿ ತೊನೆದಾಡುವ ಚಿನ್ನದ ಎಳೆಗಳು ದಿನೇದಿನೇ ದುಂಡಗಾಗುತ್ತಲೇ ಸಾಗಿವೆ! ಅಸಲಿಗೆ ಸರ್ಕಾರದ ಮುಜರಾಯಿ ಇಲಾಖೆಯ ನೇರ ಸುಪರ್ದಿಯಲ್ಲಿರುವ ಈ ದೇವಸ್ಥಾನದಲ್ಲಿ ಈ ಪರಿ ಹಗಲು ದರೋಡೆ ನಡೆಯುತ್ತಿದ್ದರೂ ಜಿಲ್ಲಾಡಳಿತವಾಗಲಿ, ಸರ್ಕಾರವಾಗಲಿ ಕ್ಯಾರೇ ಎನ್ನದೆ ಕೈಕಟ್ಟಿ ಕುಳಿತಿರೋದನ್ನು ಕಂಡು ಸ್ವತಃ ಚೆಲುವರಾಯನೇ ಬಾಯಿ ಬಡಿದುಕೊಳ್ಳುವಂತಾಗಿದೆ.

ಚೆಲುವನಾರಾಯಣಸ್ವಾಮಿ ವಜ್ರಾಂಗಿ ಆಭರಣವನ್ನು ಕದ್ದು ತಿಂದು ತೇಗಿದ ಅರ್ಚಕ ನರಸರಾಜಭಟ್ಟನ ಕಳ್ಳ ಪ್ರಸಂಗವಿನ್ನೂ ನ್ಯಾಯಾಲಯದಲ್ಲಿರುವಾಗಲೇ ಮತ್ತೊಂದು ಆಘಾತಕಾರಿ ಸುದ್ದಿಯೊಂದು ಹೊರಬಿದ್ದಿದೆ. ಒಂದಲ್ಲ, ಎರಡಲ್ಲ ಸ್ವಾಮಿಯ ಸನ್ನಿಧಿಯಲ್ಲಿದ್ದ ಬರೋಬ್ಬರಿ 38 ಆಭರಣಗಳು ನಾಪತ್ತೆಯಾಗಿರುವ ಕುರಿತು ಮುಜರಾಯಿ ಇಲಾಖೆಯ ಮೌಲ್ಯಮಾಪಕ ವೇದಮೂರ್ತಾಚಾರ್ ಖಡಕ್ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಚೆಲುವನಾರಾಯಣಸ್ವಾಮಿಗೆ ಭಕ್ತರು ದೇಣಿಗೆಯಾಗಿ ನೀಡಿದ್ದ ಆಭರಣಗಳು ನಾಪತ್ತೆಯಾಗುತ್ತಿವೆ ಎಂಬೊಂದು ದೂರನ್ನು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಎಂ.ಬಿ.ಶ್ರೀನಿವಾಸ್ ಮುಜರಾಯಿ ಸಚಿವ ಹಾಗೂ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಿಗೆ ಸಲ್ಲಿಸಿದ್ದರು. ಈ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಇಲಾಖೆಯು ಆಭರಣ ಮೌಲ್ಯಮಾಪಕ ವೇದಮೂರ್ತಾಚಾರ್‌ರಿಗೆ ಸೂಚನೆ ನೀಡಿತ್ತು. ಅದರ ಭಾಗವಾಗಿ ಮೊನ್ನೆ ಎರಡು ದಿನಗಳ ಕಾಲ ದೇವಸ್ಥಾನದಲ್ಲೇ ಠಿಕಾಣಿ ಹೂಡಿ ಪ್ರತಿಯೊಂದು ದಾಖಲೆ ಮತ್ತು ಆಭರಣವನ್ನು ಭೌತಿಕವಾಗಿ ಪರಿಶೀಲನೆ ನಡೆಸಿದಾಗ 41 ಆಭರಣಗಳ ಪೈಕಿ ಹಲವು ಆಭರಣಗಳು ನಕಲಿಗೊಂಡಿರುವುದು ಹಾಗೂ ಮತ್ತೆ ಕೆಲವು ಸಂಪೂರ್ಣವಾಗಿ ನಾಪತ್ತೆಯಾಗಿರುವುದು ಬೆಳಕಿಗೆ ಬಂದಿತ್ತು. ಇದರಲ್ಲಿ ಅರ್ಚಕರು, ಪರಿಚಾರಕರು ಮತ್ತು ದೇವಸ್ಥಾನ ಉಸ್ತುವಾರಿ ಸಮಿತಿಯ ಅಧಿಕಾರಿಗಳ ನೇರ ಕೈವಾಡವಿರುವುದು ನಗ್ನಸತ್ಯ.

ಇದೇ ಫೆಬ್ರವರಿ 7ರಂದು ಸರ್ಕಾರಕ್ಕೆ ಸಲ್ಲಿಸಿರುವ ತಮ್ಮ 25 ಪುಟಗಳ ವರದಿಯಲ್ಲಿ 'ದೇವಸ್ಥಾನಕ್ಕೆ ಭಕ್ತರು ನೀಡಿದ 41 ಆಭರಣಗಳು ಕಳುವು ಆಗಿರುವುದು ನಿಜ, ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕಳುವಾಗಿರುವ ಆಭರಣಗಳನ್ನು ಸರ್ಕಾರ ವಶಕ್ಕೆ ಪಡೆಯಲಿ' ಎಂದು ವೇದಮೂರ್ತಾಚಾರ್ ಶಿಫಾರಸ್ಸು ಮಾಡಿದ್ದಾರೆ. ಈ ಖದೀಮ ಕೂಟ ಎಂತಹ ಕಿರಾತಕ ಪಡೆಯೆಂದರೆ ತನಿಖೆಯ ಸಮಯದಲ್ಲಿ ಆಭರಣಗಳನ್ನು ಹಾಜರುಪಡಿಸುವಂತೆ ಕೇಳಿದಾಗ ಫೋಟೊಗಳನ್ನು, ವೀಡಿಯೋ ಸಿಡಿಗಳನ್ನು ತೋರಿಸಿ ಇಲ್ಲಿವೆ ನೋಡಿ ಆಭರಣಗಳು ಎಂಬರ್ಥದ ಸಂತೈಕೆಗೆ ಮುಂದಾಗಿದ್ದುಂಟು. ಆದರೆ ಪಟ್ಟು ಹಿಡಿದ ವೇದಮೂರ್ತಾಚಾರ್ ಆಭರಣಗಳನ್ನು ಭೌತಿಕವಾಗಿ ಹಾಜರುಪಡಿಸುವಂತೆ ತಾಕೀತು ಮಾಡಿದರೂ ಸುಮಾರು 38 ಆಭರಣಗಳು ಹಾಜರಾಗಲೇ ಇಲ್ಲ.

ಯದುಗಿರಿ ಅಮ್ಮನ ಉತ್ಸವ ಮೂರ್ತಿಯ ಹಸಿರು ಹರಳಿನ ನೆತ್ತಿಕಟ್ಟು, ಚೆಲುವನಾರಾಯಣಸ್ವಾಮಿ ಉತ್ಸವ ಮೂರ್ತಿಯ ಚಿನ್ನ ಅಥವಾ ಬೆಳ್ಳಿಯಿಂದ ಮಾಡಿರುವ ಗದಾಂಗಿ, ಬಿಳಿ ಹರಳು ಜೋಡಿಸಿದ ಪದಕ ಸಹಿತ ಮುತ್ತಿನ ಸರಗಳು, ಚೆಲುವನಾರಾಯಣಸ್ವಾಮಿ ಹಾಗೂ ಉಭಯ ಅಮ್ಮನವರ ಕಿರೀಟಕ್ಕೆ ಲೋಹದಿಂದ ಮಾಡಿದ ಅರಳು ಜೋಡಿಸಿದ ನೆತ್ತಿಕಟ್ಟು, ಮೂಲಮೂರ್ತಿಯ ಶಿರಪೇಶು, ಸೊಂಟಪಟ್ಟಿ, ಚೆಲುವನಾರಾಯಣಸ್ವಾಮಿ ಉಭಯ ಅಮ್ಮನವರ ನಾಗರ ಹೆಡೆ ಸಹಿತ ಡಾಬು, ಬಿಳಿ, ಹಸಿರು, ಕೆಂಪು ಹರಳಿನ ಓಲೆಗಳು, ವೈರಮುಡಿ ಉತ್ಸವಮೂರ್ತಿಯ ನೆಕ್ಲೇಸ್, ಕೃಷ್ಣನ ಉತ್ಸವ ಮೂರ್ತಿಯ ಹರಳು ಸಹಿತ ಪದಕ, ಮುತ್ತಿನಸರ ಸಹಿತ ಬಿಳಿ, ಕೆಂಪು, ಹರಳಿನ ಪದಕ, ಹಸಿರು ಬಿಳಿ ಹರಳಿನ ತಿಲಕ, ಹಸಿರು ಬಿಳಿ ಕೆಂಪು ಹರಳಿನ ಹಸ್ತ ಸೇರಿದಂತೆ ಚಿನ್ನ, ಬೆಳ್ಳಿ ಮತ್ತು ತಾಮ್ರದಿಂದ ಮಾಡಿ ಹರಳು ಜೋಡಿಸಿರುವ ಹಲವಾರು ಆಭರಣಗಳನ್ನು ಸಂಬಂಧಪಟ್ಟ ಅರ್ಚಕರು, ಪರಿಚಾರಕರು ಹಾಗೂ ಅಧಿಕಾರಿಗಳು ಮೌಲ್ಯಮಾಪನ ವೇಳೆ ಹಾಜರುಪಡಿಸಲೇ ಇಲ್ಲ.

ಮೂರು ಉತ್ಸವಮೂರ್ತಿಗಳಿಗೆ ಸೇರಿದ ಕೆಲ ಆಭರಣಗಳನ್ನು ಮಾತ್ರ ತೋರಿಕೆಗೆಂಬಂತೆ ಮೌಲ್ಯಮಾಪನ ವೇಳೆ ಹಾಜರುಪಡಿಸಲಾಗಿದೆ. ಚೆಲುವನಾರಾಯಣಸ್ವಾಮಿಯ ತಾಮ್ರದ ಕಿರೀಟ, ಪಚ್ಚೆ ಹರಳಿನ ತಿಲಕ, ಬಿಳಿ ಮಧ್ಯ ಕೆಂಪು ಹರಳಿನ ತಿಲಕ, ಚಿನ್ನದ ಪಾದ ಜೋಡಿ, ಶ್ರೀ ಕೃಷ್ಣ ಮೂರ್ತಿಯ ಬಿಳಿ ಮತ್ತು ಕೆಂಪು ಮಣಿಸರ, ಯದುಗಿರಿ ಉತ್ಸವ ಮೂರ್ತಿಯ 514 ಕಿ.ಗ್ರಾಂ. ಚಿನ್ನದ ಕಿರೀಟ ಸೇರಿದಂತೆ ಕೆಲ ಆಭರಣಗಳನ್ನು ಮಾತ್ರ ಮೌಲ್ಯಮಾಪನದ ವೇಳೆ ಹಾಜರುಪಡಿಸಿದ್ದಾರೆ. ಅಲ್ಲದೆ ಛಾಯಾಚಿತ್ರದಲ್ಲಿ ಗುರುತು ಮಾಡಿರುವ ಕೆಲವು ಆಭರಣಗಳು ಸ್ಪಷ್ಟವಾಗಿ ಕಾಣುತ್ತಿಲ್ಲವಾದ್ದರಿಂದ ಕೆಲವು ಆಭರಣಗಳ ಮೌಲ್ಯಮಾಪನವಾಗಿಲ್ಲ, ಈ ಬಗ್ಗೆ ಅರ್ಚಕರ ಅಭಿಪ್ರಾಯ ಪಡೆಯಬೇಕೆಂದು ಮೌಲ್ಯಮಾಪಕ ವೇದಮೂರ್ತಾಚಾರ್ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಕೆಲವೊಂದು ಆಭರಣಗಳನ್ನು ತಂದಿರಿಸಿದರಾದರು ಅವೆಲ್ಲಾ ಡೂಪ್ಲಿಕೇಟ್ ಆಭರಣಗಳಾಗಿದ್ದವು. ಚಲುವನಾರಾಯಣ ಉತ್ಸವ ಮೂರ್ತಿಗೆ ಮೈಸೂರು ಸಂಸ್ಥಾನದ ರಾಜಗುರು ಪರಕಾಲ ಶ್ರೀಗಳು ನೀಡಿರುವ ಪುರಾತನ ಪದಕವಾದ 'ಘಂಟಾವತಾರ ಪರಕಾಲ ಪದಕ', ಖಜಾನೆಯಲ್ಲಿರುವ 'ಗಂಡಭೇರುಂಡ' ಪದಕಗಳು ಕೂಡಾ ಡೂಪ್ಲಿಕೇಟ್ ಆಗಿವೆ. ಹಾಗಾದರೆ ಅಸಲಿ ಚಿನ್ನದ ಆಭರಣಗಳು ಎತ್ತ ಹೋದವು? ಡೌಟೇ ಬೇಡ, ಅವೆ[illegible] ಅರ್ಚಕರ ಖಾಸಗಿ ತಿಜೋರಿ ಸೇರಿಕೊಂಡಿವೆ!

ತಮ್ಮ ದೂರಿನ ವರದಿಯನ್ನು ಜಿಲ್ಲಾಧಿಕಾರಿ[illegible] ಪಾಂಡವಪುರ ಉಪವಿಭಾಗಾಧಿಕಾರಿ ಹಾಗ[illegible] ಚೆಲುವನಾರಾಯಣಸ್ವಾಮಿ ದೇವಾಲಯದ[illegible] ಕಾರ್ಯನಿರ್ವಾಹಕ ಅಧಿಕಾರಿಗೂ ಸಲ್ಲಿಸಿರುವ ಆಚಾ[illegible] ಇದರಲ್ಲಿ ಅರ್ಚಕರು ಮತ್ತು ಭ್ರಷ್ಟ ಅಧಿಕಾರಿಗ[illegible] ಕೈವಾಡವಿದ್ದು ಸೂಕ್ತ ತನಿಖೆ ನಡೆಸುವಂತೆ ಮನ[illegible] ಮಾಡಿಕೊಂಡಿದ್ದಾರೆ. ಇನ್ನಾದರೂ ಈ ಕಳ್ಳರ ಬಗ್ಗೆ ಸರ್ಕಾ[illegible] ಹಾಗೂ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಂಡು ಕಳ್ಳ[illegible] ಕೈಯಿಂದ ಚೆಲುವನಾರಾಯಣಸ್ವಾಮಿ ದೇವಾಲಯವನ್[illegible] ಕಾಪಾಡಬೇಕೆನ್ನುವುದು ಭಕ್ತರ ಅಳಲಾಗಿದೆ.

ದೇವರ ವಜ್ರಾಂಗಿಯನ್ನು ಲಪಟಾಯಿಸಿದ್ದ ವಂಚ[illegible] ಅರ್ಚಕ ನರಸರಾಜಭಟ್ಟ ಕಾನೂನಿನ ಕುಣಿಕೆಯಿಂ[illegible] ತಪ್ಪಿಸಿಕೊಳ್ಳಲು ಇನ್ನಿಲ್ಲದಂತೆ ಹರಸಾಹಸ ಮಾಡುತ್ತಿದ್ದಾ[illegible] ಆಪಾದನೆ, ಆರೋಪವಾಗಿ ಸಾಬೀತಾದರೂ ಆತನನ್[illegible] ಹಿಡಿದು ಜೈಲಿಗೆ ಗದುಮಲು ಪೊಲೀಸ್ ಇಲಾಖೆ[illegible] ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಕೋಟ್ಯಂತರ ಬೆಲೆಬಾಳುವ[illegible] ವಜ್ರಾಂಗಿಯನ್ನು ಕದ್ದ ನರಸರಾಜಭಟ್ಟನೇ ಆರಾಮಾಗಿ[illegible] ತಿರುಗಾಡಿಕೊಂಡಿರೋದನ್ನು ನೋಡಿಯೇ ಇನ್ನುಳಿದ[illegible] ಅರ್ಚಕರೂ ದೇವರ ತಿಜೋರಿಗೆ ಕೈಇಟ್ಟು ದುಂಡಗಾಗುವ[illegible] ಧೈರ್ಯ ಮಾಡಿರೋದು.

ಧಾರ್ಮಿಕ ದತ್ತಿ ಇಲಾಖೆಯ ಮೌಲ್ಯಮಾಪಕರು[illegible] ನೀಡಿರುವ ವರದಿಯನ್ನು ಮುಂದಿಟ್ಟುಕೊಂಡು[illegible] ಸರಿಯಾದ್ದೊಂದು ಕಾರ್ಯಾಚರಣೆಗೆ ಜಿಲ್ಲಾಧಿಕಾರಿ[illegible] ಡಾ.ಅಜಯ್‌ನಾಗಭೂಷಣ್ ಮತ್ತು ಪಾಂಡವಪುರ[illegible] ಉಪವಿಭಾಗಾಧಿಕಾರಿ ಡಾ.ಎಚ್.ಎಲ್.ನಾಗರಾಜ್[illegible] ಮುಂದಾಗಬೇಕಿದೆ. ಜನರ ಭಕ್ತಿಯನ್ನೇ ಬಂಡವಾಳ[illegible] ಮಾಡಿಕೊಂಡು ಹೋಮ-ಹವನ, ಪೂಜೆ, ಪುನಸ್ಕಾ[illegible] ಹೆಸರಿನಲ್ಲಿ ಹಗಲುದರೋಡೆ ನಡೆಸಿದ್ದಲ್ಲದೆ ಕೋಟ್ಯಂತರ[illegible] ಬೆಲೆಬಾಳುವ ಆಭರಣಗಳನ್ನೂ ಸ್ವಾಹ ಮಾಡಿರುವ ಖದೀಮ[illegible] ಅರ್ಚಕರು ಮತ್ತು ಭ್ರಷ್ಟ ಅಧಿಕಾರಿಗಳಿಗೆ ತಕ್ಕ ಪಾ[illegible] ಕಲಿಸದಿದ್ದರೆ ಮೇಲುಕೋಟೆ ದೇವಸ್ಥಾನದಲ್ಲಿ ಚೆಲುವನಾರಾ[illegible]ಯಣನ ವಿಗ್ರಹಕ್ಕೂ ಉಳಿಗಾಲವಿಲ್ಲದಂತಾಗಬಹುದು.


■ ಮಂಡ್ಯ ನಾಗೇಶ್

ಈ ಕೆಳಗಿನ ಚಾಯಾಚಿತ್ರಗಳ ಬಗ್ಗೆ ಆಭರಣ ಮೌಲ್ಯಮಾಪಕರ ಅಭಿಪ್ರಾಯಗಳು, ಪುಟ-8

Observations of Jewellery valuer in respect of below Photograph:-

ಈ ಚಾಯಾಚಿತ್ರಗಳಲ್ಲಿ ಕಾಣುವ ಆಭರಣಗಳ ಬಗ್ಗೆ ಅರ್ಜಿದಾರರೊಬ್ಬರು ದೇವಸ್ಥಾನದ ಕಚೇರಿಗೆ ಮಾಹಿತಿ ಕೋರಿದ ಕಾರಣ, ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಚೆಲುವನಾರಾಯಣ ಸ್ವಾಮಿ ದೇವಸ್ಥಾನ, ಮೇಲುಕೋಟೆ ರವರು ಆಭರಣ ಮೌಲ್ಯಮಾಪಕರಾದ ನಮ್ಮಿಂದ ಅಭಿಪ್ರಾಯ ಕೋರಿದ್ದಾರೆ.

ಆದ್ದರಿಂದ ನಮ್ಮ ಅಭಿಪ್ರಾಯ :- ದಿನಾಂಕ:06-02-2015, ಗೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು/ ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ




1. ಇದು ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ಉತ್ಸವ ಮೂರ್ತಿಯ ಆಭರಣ ಸಹಿತ ಚಿತ್ರವಾಗಿದೆ

1. ಕ್ರಮ ಸಂ.17(ಎ) ಎಂದು ಗುರುತುಮಾಡಿದ ಆಭರಣವು ದೇವಸ್ಥಾನದ ಪುರಾತನ ಆಭರಣ 'ಘಂಟವತಾರ ಪರಕಾಲ ಪದಕ' ದ ಮಾದರಿಯನ್ನು ನಕಲು ಮಾಡಿದ ಆಭರಣವಾಗಿದೆ. ಇದರ ವಿವರ ಪಟ್ಟಿಯಲ್ಲಿ ಲಭ್ಯವಿರುವುದಿಲ್ಲ

2. ಕ್ರಮ ಸಂ.17. ಈ ಪದಕವನ್ನು ಮೌಲ್ಯಮಾಪನಕ್ಕೆ ಹಾಜರುಪಡಿಸಿಲ್ಲ .

3. ಕ್ರಮ ಸಂ.18. ಗಂಡುಭೇರುಂಡ ಪದಕ, ಇದನ್ನು ಮೌಲ್ಯಮಾಪನಕ್ಕೆ ಭೌತಿಕವಾಗಿ ಹಾಜರುಪಡಿಸಿಲ್ಲ, ಇದು ದೇವಸ್ಥಾನದ ಪುರಾತನ ಆಭರಣದ ಮಾದರಿಯನ್ನು ನಕಲು ಮಾಡಿದ ಆಭರಣವಾಗಿದೆ.

4. ಕ್ರಮ ಸಂ.19 ರ ಈ ಪದಕವನ್ನು ಅಭಿಪ್ರಾಯ ಪುಟ ಸಂ.3 ರಲ್ಲಿ ಸಂಖ್ಯೆ 16 ಎಂದು ಗುರುತುಮಾಡಿದೆ.

ಷರಾ: ದೇವಸ್ಥಾನದ ಕಚೇರಿಯಿಂದ ಪಡೆದ ಚಾಯಾಚಿತ್ರ ಮತ್ತು ಚಾಯಾಚಿತ್ರಗಳಿರುವ ಸಿ.ಡಿ (Compact Disc) ಯನ್ನು ಪರಿಶೀಲಿಸಿ ವರದಿ ನೀಡಿದೆ.

Vedamurthahar.G. *B.A., Law., LL.B.,*
Govt. Regd. Valuer(Jewels)

**ಮೌಲ್ಯಮಾಪಕ ವೇದಮೂರ್ತಾಚಾರ್ ಸರ್ಕಾರಕ್ಕೆ ನೀಡಿರುವ ವರದಿ**

ಹಿಂದಿನ ಪುಟದಿಂದ

## ಸೈಬರ್ ಕಂಪ್ಲೇಂಟು

ಇದು ಇಲ್ಲಿಗೇ ನಿಂತಿಲ್ಲ. ಈ ಜಾಲತಾಣದ ಕಮೆಂಟು ರಾಘುನ ಮರ್ಮಕ್ಕೇ ನಾಟಿದೆ. ತನ್ನ ಚಪಲದ ಬಂಡವಾಳ ಮತ್ತು ಗಣಪತಿ ಹೆಗಡೆ ಕುಟುಂಬದೊಂದಿಗಿನ ಅನ್ಯೋನ್ಯ ನಂಟಿನ ಬಣ್ಣ ಬಯಲಾಗಿದೆ ಎಂಬ ಗಾಬರಿಗಾತ ಬಿದ್ದಿದ್ದಾನೆ. ಗಣಪತಿ ಹೆಗಡೆಯಿಂದ ಗಿರಿನಗರ ಠಾಣೆಯಲ್ಲಿ ತನ್ನ ಮಾನಹಾನಿ ಬಾಲಕೃಷ್ಣರಾಜ್ ನೀರ್ಚಲ್ ಫೇಸ್‌ಬುಕ್ ಮುಖಾಂತರ ಮಾಡಿದ್ದಾನೆಂದು ರಾಘು ಕಂಪ್ಲೇಟು ಕೊಡಿಸುತ್ತಾನೆ. ಈ ಅರ್ಜಿ ವಿಚಾರಣೆ ವೇಳೆ ತನ್ನ ಹೆಂಡತಿ ಮತ್ತು ಮಗುವಿನ ಫೋಟೋ ಫೇಸ್‌ಬುಕ್ ಅಕೌಂಟ್‌ನಿಂದ ತೆಗೆದು ನೀರ್ಚಲ್ ಮಿತ್ರ ಮಂಡಳಿ ಲೈಕ್ ಮಾಡಿದ್ದಷ್ಟೇ ಅಲ್ಲ ಈ ಮಗುವಿನ ತಂದೆ ಯಾರು? ಎಂದು ಕೇಳಿದ್ದಾರೆಂಬುದು ಗಣಪತಿ ಹೆಗಡೆಯ ಆಕ್ಷೇಪವಾಗಿತ್ತು. ಕೆಟ್ಟದಾಗಿ ಏನು ಕಮೆಂಟ್ ಮಾಡಿಲ್ಲ; ಅಷ್ಟಿದ್ದರೆ ತಕ್ಷಣ ನಿಸ್ಸದೇ ಮಗುವೆಂದು ಹೇಳಿ ನೀನು ತಣ್ಣಗೆ ಉತ್ತರಿಸಬಹುದಿತ್ತಲ್ಲ ಎಂಬುದು ನೀರ್ಚಲ್ ಬಳಗದ ವಾದವಾಗಿತ್ತು. ಕೆಟ್ಟದಾಗಿ ಅಭಿವ್ಯಕ್ತಿ ಮಾಡಿದಿದ್ದರೆ ತಾವು ದೇಹತ್ಯಾಗಕ್ಕೂ ರೆಡಿ ಎಂದು ನೀರ್ಚಲ್ ಸವಾಲೂ ಹಾಕುತ್ತಾರೆ. ಆ ತಾಯಿ-ಮಗು ಫೋಟೋ ಅಪ್ಲೋಡ್ ಮಾಡಿದ್ದು ನೀರ್ಚಲ್ ಅಲ್ಲ, ಫೋಟೋಕ್ಕೆ ಸಹಜವಾಗಿ ಆತ ಪ್ರತಿಕ್ರಿಯಿಸಿದ್ದಾರೆ. ಬಂಗಾರದ ಪದಕ ಸಮೇತ ಮೂರು ಪದವಿ ಪಡೆದು, ಉನ್ನತ ಸ್ಥಾನದಲ್ಲಿರುವ ನೀರ್ಚಲ್‌ರನ್ನು ಪೊಲೀಸರು 4-5 ತಾಸು ಠಾಣೆಯಲ್ಲಿ ನಿಲ್ಲಿಸಿ ಸತಾಯಿಸಿದ್ದಾರೆ. ಕುಳಿತುಕೊಳ್ಳಲು ಬಿಡದೆ ನಿಲ್ಲಿಸಿಯೇ ವಿಚಾರಣೆ ಸಿಪಿಐ ನಡೆಸಿದ್ದಾನೆ. ಇದು ರಾಘುನ ಮಾಮೂಲಿ ಷಡ್ಯಂತ್ರ ಶೈಲಿ! ಅದೇನೇ ಇರಲಿ, ರಾಘು-ಗಣಪತಿ-ಶಮನ ನಡುವಿನ ಪತಿ-ಪತ್ನಿ ಮತ್ತು ಅವನು ಸಂಬಂಧದ ಬಗ್ಗೆ ನಡೆಯುತ್ತಿದ್ದ ರಹಸ್ಯ ಚರ್ಚೆಗಳೀಗ ಬೀದಿಗೆ ಬಿದ್ದಂತಾಗಿದೆ!

### ಹವ್ಯಕರ ವಿಘಟನೆ


ಈ ರೋಚಕ ಬೆಳವಣಿಗೆಗಳೆಲ್ಲ ನಿಧಾನಕ್ಕೆ ಹವ್ಯಕ ಸಮುದಾಯ ತಮ್ಮ ಜಾತಿಗೆ ಕಂಟಕನಾಗಿರುವ ಕುಲಘಾತುಕ ಗುರುವಿನ ಎದುರು ಎದೆ ಸೆಟೆಸಿ ನಿಲ್ಲುತ್ತಿರುವುದನ್ನು ಬಿಂಬಿಸುತ್ತಿದೆ. ಇದು ಹೀಗೇ ಮುಂದುವರಿದರೆ ತಾನು ಜೈಲು ಸೇರಿ ಪೀಠತ್ಯಾಗ ಮಾಡಬೇಕಾಗುತ್ತದೆಂಬ ವಾಸ್ತವವೂ ರಾಘುಗೆ ಅರಿವಾಗಿ ಹೋಗಿದೆ. ಹೀಗಾಗಿ ತಾನೇ ಏನೇನೋ ಮನರಂಜನೆ-ಜಾತಿ ದುರಭಿಮಾನ ಕೆರಳಿಸಿ ಸಂಘಟಿಸಿದ್ದ ಹವ್ಯಕರನ್ನು ವಿಘಟಿಸಿ ಹೋಗುವ ಹತಕ್ಯಾತ ಬಿದ್ದಿದ್ದಾನೆ. ಹೀಗಾಗಿ ಹವ್ಯಕರ ಗೌರವಾನ್ವಿತ ಮುಖಂಡರಾದ ಡಾ. ಟಿ.ಟಿ. ಹೆಗಡೆ, ಕೆ.ಎಚ್. ಶ್ರೀನಿವಾಸ್‌ರಂಥವರ ವಿರುದ್ಧ ಅಪಪ್ರಚಾರ, ಅವರ ಸಂಘ-ಸಂಸ್ಥೆ-ಕುಟುಂಬದ ಮೇಲೆ ಮಠದ ಮಾಣಿಗಳ ಛೂಬಿಡುವಂಥ ಕಚಡಾ ಕೆಲಸ ರಾಘು ಮಾಡುತ್ತಿದ್ದಾನೆ.

ಇಷ್ಟಾದರೂ ರಾಘು ಮಾಣಿಗೆ ನಿದ್ದೆ ಮಾತ್ರ ಬೀಳುತ್ತಿಲ್ಲ. ಪ್ರೇಮಲತಾ ತನ್ನ ಮೇಲೆ ಕೊಟ್ಟಿರುವ ರೇಪ್ ಕೇಸ್ ರದ್ದುಗೊಳಿಸುವಂತೆ ಆತ ಮಾಡಿದ್ದ ಬೇಡಿಕೆ ಹೈಕೋರ್ಟ್ ತಿರಸ್ಕರಿಸಿದೆ. ಇದಕ್ಕೂ ಮುಂಚೆ ಸದ್ರಿ ಕೇಸ್ ವಿಚಾರಣೆಗೆ 7 ಜನ ಜಡ್ಜ್‌ಗಳು ಹಿಂದೇಟು ಹಾಕಿದ್ದಾರೆ. ಅಲ್ಲಿ[illegible] ನ್ಯಾಯಾಂಗ ಇತಿಹಾಸದಲ್ಲಿ ರಾಘು ಮಾಣಿ ರೇಪ್ ಕೇಸ್[illegible] "ಹೈ ವೋಲ್ಟೇಜ್ ಕೇಸೆಂದು" ದಾಖಲಾಗುವಂತಾಗಿದೆ[illegible] ಅಷ್ಟು "ವಿಶಿಷ್ಟ" ಸನ್ಯಾಸಿ ರಾಘು ಮಾಣಿ!! ಆತನ ನಿರೀಕ್ಷಣಾ[illegible] ಜಾಮೀನು ರದ್ದು ಮಾಡಲು ಸಾಧ್ಯವಿಲ್ಲವೆಂದು ಸಿಓಡಿಗೆ[illegible] ಸೆಷನ್ಸ್ ಕೋರ್ಟ್ ಹೇಳಿದಾಗ ರಾಘು ಸದ್ಯಕ್ಕೆ ಬಂಧನ[illegible] ಭೀತಿಯಿಂದ ಪಾರಾಗಿದ್ದೇನೆಂದು ನಿಟ್ಟುಸಿರು ಬಿಟ್ಟಿದ್ದಾನೆ.

ಸಿಓಡಿ ಚಾರ್ಜ್‌ಶೀಟ್ ಹಾಕಿದಾಕ್ಷಣ ತಂತಾನೆ[illegible] ನಿರೀಕ್ಷಣಾ ಜಾಮೀನು ರದ್ದಾಗುತ್ತದೆ. ಆಗ ಇನ್ನುಳಿದ[illegible] ಮೂರು ಟೆಸ್ಟ್‌ಗೆ ರಾಘು ಬೇಕೆಂದು ಸಿಓಡಿ ಕಸ್ಟಡಿಗೆ[illegible] ತಗೊಂಡರೆ ಏನು ಗತಿ? ರಾಮನ ಪೂಜೆ ಮಾಡೋರ್ಯಾರು? ಶೂನ್ಯಪೀಠದ ಪಾಡೇನು? ಇಂಥ ಚಿಂತನ-ಮಂಥನ[illegible] ರಾಘುನ ನಿಷ್ಠ ಪರಿವಾರದ ತಲೆ ತಿನ್ನುತ್ತಿದೆ. ಒಂದಂತೂ[illegible] ಖರೆ. ರಾಘುನ ಪೀಠೋಚ್ಚಾಟನೆ ಸನ್ನಿಹಿತವಾಗಿದೆ!!

■ [illegible]

# ಶಿವಮೊಗ್ಗದಲ್ಲಿ ನಡೆದದ್ದೇನು?



ಶಿವಮೊಗ್ಗದ ಪಾಲಿಗೆ ಇಂತಹದ್ದೊಂದು ಘಟನೆಯನ್ನು ...ಕ್ಷಿಸಲಾಗಿತ್ತು. ಈ ಹಿಂದೆ ತೀರ್ಥಹಳ್ಳಿಯ ನಂದಿತಾ ...ನ ವಿಚಾರದಲ್ಲಿ ನಡೆದ ವ್ಯವಸ್ಥಿತ ಕೃತ್ಯಗಳು ಶಿವಮೊಗ್ಗದಲ್ಲಿ ...ರೊಂದು ರೀತಿಯಲ್ಲಿ ವಿಜೃಂಭಿಸಿದೆ. ಆದರೆ ಇಲ್ಲಿ ...ಎಫ್‌ಐ ಎಂಬ ಮುಸ್ಲಿಂ ಸಂಘಟನೆಯ ಮೂರ್ಖತನವೇ ...ದ್ದು ಕಾಣುತ್ತದೆ. ಎರಡನೆಯದಾಗಿ ಜಿಲ್ಲಾಡಳಿತದ ...ಭದ್ರಗೇಡಿತನ ಅಕ್ಷಮ್ಯವಾದದ್ದು. ಈ ಆಡಳಿತಕ್ಕೆ ...ಲ್ಲೆಯಲ್ಲಿ ಅಧಿಕಾರವಂಚಿತ ಬಿಜೆಪಿ ಏನೇನು ...ಡಬಹುದೆಂಬ ಎಚ್ಚರಿಕೆ ಇರಬೇಕಿತ್ತು.

...ರಾಷ್ಟ್ರಮಟ್ಟದಲ್ಲಿ ಕೋಮುಗಲಭೆಗೆ ಎಂಟನೇ ಸ್ಥಾನ ...ದಿರುವ ಶಿವಮೊಗ್ಗದಲ್ಲಿ ಕರ್ತವ್ಯ ನಿರ್ವಹಿಸುವ ...ಕಾರಿಗಳು ದಕ್ಷರಾಗಿರಬೇಕಾಗುತ್ತದೆ ಮತ್ತು ಸಾಧ್ಯವಾದಷ್ಟು ...ಮಾಣಿಕರಾಗಿರಬೇಕಾಗುತ್ತದೆ. ಈ ಜಿಲ್ಲೆಯಲ್ಲಿ ಬಿಜೆಪಿಗಳು ...ಡಿಕೊಂಡು ಬಂದಿರುವ ರಾಜಕಾರಣವನ್ನು ಅವಲೋಕಿ ...ರೆ ಕೆಲವು ಸತ್ಯಸಂಗತಿಗಳು ಹೊಳೆಯುತ್ತವೆ. ಬಡತನ, ...ಕ್ಷರತೆ ಮತ್ತು ಮತಾಂಧತೆಯೇ ಮೇಳೈಸಿದಂತಿರುವ ...ಸ್ಲಿಂ ಜನಾಂಗವನ್ನ ಕೆರಳಿಸುವುದು, ಅದು ಯಾರೋ ... ಅಮಾಯಕ ಹಿಂದೂವನ್ನು ಕೊಲೆಗೈಯ್ಯುವುದು, ...ನ ಶವವನ್ನ ವಶಪಡಿಸಿಕೊಂಡ ಬಿಜೆಪಿಗಳು ಮೆರವಣಿಗೆ ...ಡಿ ಓಟ್ ಬ್ಯಾಂಕನ್ನು ಹೆಚ್ಚಿಸಿಕೊಳ್ಳುವುದು... ಇದು ...ತ ಶತಮಾನದಿಂದ ನಡೆದುಬಂದ ಒಂದು ರಕ್ತಸಿಕ್ತ ...ನ್ಯಾಯ.

ಇಂತಹ ಕೃತ್ಯಕ್ಕೆ ಸುಮಾರು ಜನ ಬಲಿಯಾದ ನಂತರ ...ಪಿ ಅಧಿಕಾರ ಪಡೆದು ಇಂತಹ ಕೃತ್ಯವನ್ನು ನಿಲ್ಲಿಸಿತ್ತು, ...ರೆ ಈಗ ಜಿಲ್ಲಾಡಳಿತ ಅದರ ಕೈ ತಪ್ಪಿದೆ. ಶಾಸಕತ್ವ ...ಗ್ರೆಸ್ ಪಾಲಾಗಿದೆ. ಜಿಲ್ಲಾ ಪಂಚಾಯ್ತಿ ಕಾಂಗ್ರೆಸ್ ...ಾಗಿದೆ. ಕಾರ್ಪೊರೇಷನ್ ಕೂಡ ಕಾಂಗ್ರೆಸ್ ಪಾಲಾಗಿರು...ದಿಂದ ಬಿಜೆಪಿ ರಕ್ತಾಗ್ನಿ ಹಪಹಪಿಸುವಂತಹ ಸ್ಥಿತಿಯಿತ್ತು, ...ವದನ್ನ ತಣಿಸಿದ ಕೀರ್ತಿ ಪಿಎಫ್‌ಐ ಎಂಬ ಮೂರ್ಖ ...ಟನೆಗೆ ಸಲ್ಲಬೇಕು.

ಈ ಬಾರಿ ಹಿಂದೆಂದಿಗಿಂತಲೂ ಶಿವಾಜಿ ಜನ್ಮದಿನೋತ್ಸ...ವನ್ನು ಶಿವಮೊಗ್ಗದ ಮತೀಯ ಸಂಘಟನೆಗಳು ...ರಾಗಿಯೇ ಆಚರಿಸಲು ತಯಾರಿ ನಡೆಸಿದ್ದವು. ಇದಕ್ಕೂ ...ದಲೇ ಟಿಪ್ಪು ಜನ್ಮದಿನ ಆಚರಿಸಿದ ಮುಸ್ಲಿಂ ...ಟನೆಗಳು ಹಿಂದೆಂದೂ ಕಂಡಿರದಷ್ಟು ಹಸಿರು ಬಣ್ಣದ ... ಮತ್ತು ಹುಲಿಯನ್ನು ಸಿಗಿದು ಬಿಸಾಡುವ ಟಿಪ್ಪು ...ಗಳನ್ನು ಹಾಕಿದ್ದರು. ಚೆಡ್ಡಿಗಳಿಗೆ ತಮ್ಮ ಮತಾಂಧತೆ ...ದಲೇ ಉತ್ತರ ಕೊಡಲು ಹೊರಟ ಮುಸ್ಲಿಮರು ...ಗ ಟಿಪ್ಪುವನ್ನು ಕೂಡ ಮತಾಂಧಗೊಳಿಸಿದಂತೆ ಕಂಡರು. ...ಲ್ಲಾ ಇನ್ನೂ ಹಸಿರಾಗಿರುವಂತೆಯೇ ಶಿವಮೊಗ್ಗದ ಮುಸ್ಲಿಂ ...ವಣಿಗಳು ಮತ್ತು ಬಿ.ಹೆಚ್. ರೋಡಿನಲ್ಲಿ ಪಿಎಫ್‌ಐ ...ಟನೆಯ ಫ್ಲೆಕ್ಸ್ ರಾರಾಜಿಸತೊಡಗಿದವು. ಅದರಲ್ಲಿನ ... ಹಿಡಿದ ಯುವಕರ ಫೋಟೋ ಕೂಡ ಆರೆಸ್ಸೆಸ್‌ಗೆ ...ಕ ಕೊಡುವಂತೆ ಪ್ರತೀಕಾರವಾಗಿ ಕಂಡವು. ಅವರ ...ವಣಿಗೆ ಮತ್ತು ಸಭೆಯ ದಿನ ತೊಂದರೆ ಕೊಡಲು ...ಯ ಅಂಗಗಳು ಸಜ್ಜುಗೊಳ್ಳತೊಡಗಿದವು. ಪಿಎಫ್‌ಐ ...ಟನೆಯೂ ತನ್ನ ಸಭೆ ಸಂವಿಧಾನದ ಆಶಯದ ...ಮುಲ್ಲೇ ನಡೆಯುತ್ತದೆಂದು ಬಿಂಬಿಸಲು ದಸಂಸದ ...ಮೂರ್ತಿಯನ್ನು ಕರೆದುಕೊಂಡು ಹೋಗಿ ವೇದಿಕೆಗೆ ಕೂರಿಸಿಕೊಂಡವು.

ಮಂಡಳಿಯಿಂದ ಹೊರಟ ಮೆರವಣಿಗೆ ತನ್ನ ಪ್ರಜಾಪ್ರಭುತ್ವದ ಆಶಯಗಳಿಗೆ ವ್ಯತಿರಿಕ್ತವಾಗಿ ದೇಶದ್ರೋಹದ ಘೋಷಣೆಗಳನ್ನು ಕೂಗತೊಡಗಿತು. ಹಲವು ಘೋಷಣೆಗಳು ಆರೆಸ್ಸೆಸ್ ಮತ್ತು ಬಿಜೆಪಿ ವಿರುದ್ಧವಾಗಿದ್ದವು. ಬಾಬಾ ಬುಡನ್‌ಗಿರಿಯಲ್ಲಿ ವಿಶ್ವಹಿಂದೂಗಳ ಘೋಷಣೆ ಕೇಳಿಸಿಕೊಂಡವರಿಗೆ ಇವೇನು ಅಂತಹ ಕೆಟ್ಟ ಘೋಷಣೆಗಳಾಗಿರಲಿಲ್ಲ, ಆದರೆ ಮೂರ್ಖ ಪಿಎಫ್‌ಐ ಹುಡುಗರ ಬಾಯಿಂದ ಪಾಕಿಸ್ತಾನದ ಪರ ಘೋಷಣೆಗಳೂ ಬಂದಾಗ ಪೊಲೀಸರು ಸುಮ್ಮನಿರಲಿಲ್ಲ, ಅಮೀರ್ ಅಹಮದ್ ಸರ್ಕಲ್ ಬಳಿ ಪೊಲೀಸರೇ ಘೋಷಣೆ ವಿರುದ್ಧವಾಗಿ ಲಾಠಿ ಚಾರ್ಜು ಮಾಡಿದರು.


ಅದಕ್ಕಿಂತ ಮೊದಲೇ ಗೋಪಿ ಸರ್ಕಲ್‌ನಲ್ಲಿ ಸೇರಿದ್ದ ಬಿಜೆಪಿ ಅಂಗಗಳು ಶಿವಾಜಿಯ ಫ್ಲೆಕ್ಸ್ ಎದುರು ಸಾವಿರಾರು ರೂಪಾಯಿಗಳ ಪಟಾಕಿ ಹೊಡೆದು ಹೊಗೆ ಎಬ್ಬಿಸಿದ್ದರು. ಊರಿಗೆ ಬೆಂಕಿ ಬೀಳಲು ಇಷ್ಟು ಸಾಕಾಗಿತ್ತು, ಸಂಜೆಯ ವೇಳೆಗೆ ಶಿವಮೊಗ್ಗಕ್ಕೆ ಬೆಂಕಿ ಬೀಳತೊಡಗಿತು. ಮೊದಲೇ ನೋಡಿಕೊಂಡಿದ್ದ ಗೂಡಂಗಡಿಗಳು ಮತ್ತು ತಳ್ಳು ಗಾಡಿಗಳ ಸಮೀಪ ಮೂತ್ರ ವಿಸರ್ಜಿಸುವಂತೆ ಹೋಗಿ ನಿಂತವರು ಪೆಟ್ರೋಲ್ ಹಾಕಿ ಹೋದರೆ ಹಿಂದಿನಿಂದ ಬೈಕಲ್ಲಿ ಬಂದವರು ಬೆಂಕಿ ಹಚ್ಚಿ ಪರಾರಿಯಾಗತೊಡಗಿದರು. ಪಿಎಫ್‌ಐ ಸಭೆ ನಂತರ ಕುಂದಾಪುರ, ಮಂಗಳೂರು ಕಡೆಯಿಂದ ಬಂದಿದ್ದ ಮತಾಂಧ ಮುಸ್ಲಿಮರು ಗಾಜನೂರಿನ ಮೇಲೆ ಹಠಾತ್ ದಾಳಿ ಮಾಡಿ ಬೈಕಲ್ಲಿ ಬರುತ್ತಿದ್ದ ವಿಶ್ವನಾಥ್ ಶೆಟ್ಟಿಯನ್ನು ಕೊಲೆ ಮಾಡಿ ಮೂವರಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಪರಾರಿಯಾದರು.

ಹಠಾತ್ತನೆ ನಡೆದ ಈ ದಾಳಿಯಿಂದ ಕಂಗಾಲಾದ ಗಾಜನೂರಿನ ಜನ "ನಮ್ಮ ಊರಿನಲ್ಲಿ ಮುಸ್ಲಿಮರೇ ಇಲ್ಲ, ಆದರೂ ಬಂದು ದಾಳಿ ಮಾಡಿ ಹೋದರಲ್ಲ. ಈ ಕೃತ್ಯದಿಂದ ಹಿಂದೂಗಳು ಕೆರಳಿ ಮುಸ್ಲಿಮರ ಮೇಲೆ ಪ್ರತೀಕಾರಕ್ಕಿಳಿದರೆ ಎಂಬ ಪರಿಜ್ಞಾನವೇ ಇಲ್ಲದ ಇಂತಹ ಸಾಬರನ್ನು ನಾವು ಹೇಗೆ ಸಹಿಸಿಕೊಳ್ಳುವುದು" ಎಂದು ದಿಗ್ಭ್ರಮೆಗೊಂಡರು. ಅಷ್ಟರಲ್ಲಿ ವಿಶ್ವನಾಥ್ ಶೆಟ್ಟಿಯ ಶವಕ್ಕೆ ವಾರಸುದಾರರಂತೆ ವಕ್ಕರಿಸಿದ ಬಿಜೆಪಿಗಳು ಈಶ್ವರಪ್ಪನ ನೇತೃತ್ವದಲ್ಲಿ ಮೆರವಣಿಗೆ ಮಾಡಲು ಹೊರಟರು, ಇದೇ ಹೊತ್ತಿಗೆ ಭೀಕರ ಸಂಗತಿಗಳ ಸೃಷ್ಟಿಕರ್ತರು ಜಾಲ ತಾಣಗಳಾದ ವ್ಯಾಟ್ಸಪ್, ಫೇಸ್‌ಬುಕ್ ಮತ್ತು ಮೊಬೈಲ್‌ಗಳಲ್ಲಿ ಸುಳ್ಳು ಸುಳ್ಳು ವದಂತಿಗಳನ್ನು ಹರಿಯಬಿಡತೊಡಗಿದರು. ಇವರೆಲ್ಲಾ ವಿದ್ಯಾವಂತ ಮೂರ್ಖರು. ಎಲ್ಲೆಲ್ಲಿಯೋ ಸಂಗ್ರಹಿಸಿದ ಕೈಕಾಲಿನ ಚಿತ್ರಗಳು, ಸತ್ತ ವ್ಯಕ್ತಿ ಚಿತ್ರಗಳು, ಕತ್ತರಿಸಿ ಬಿದ್ದ ದೇಹದ ಚಿತ್ರಗಳು... ಇವನ್ನೆಲ್ಲಾ ಶಿವಮೊಗ್ಗದ ಗಲಭೆಗೆ ಜೋಡಿಸಿ ಮುಸ್ಲಿಮರ ಬಗ್ಗೆ ಭೀತಿ ಹುಟ್ಟಿಸತೊಡಗಿದರು. ಕೆಲವೇ ದಿನಗಳ ಹಿಂದೆ ಸಿರಿಯಾದಲ್ಲಿ ಐಸಿಸ್ ಇಪ್ಪತ್ತೊಂದು ಕ್ರಿಶ್ಚಿಯನ್ನರ ತಲೆ ಕಡಿಯುತ್ತಿರುವ ಚಿತ್ರವನ್ನು ಪತ್ರಿಕೆಗಳಲ್ಲಿ ನೋಡಿದ್ದ ಜನ ಮುಸ್ಲಿಮರ ಬಗ್ಗೆ ಮತ್ತಷ್ಟು ಭೀತಿಗೊಳ್ಳುವಂತೆ ಈ ಜಾಲತಾಣಗಳು ತಮ್ಮ ಕೃತ್ಯವನ್ನು ಎಸಗತೊಡಗಿದವು. ಇದರಿಂದ ಶಿವಮೊಗ್ಗ ನಗರದ ಪ್ರಕ್ಷುಬ್ಧತೆ ಏರತೊಡಗಿತು.



ಶಿವಮೊಗ್ಗದ ಎಂಕಕೆ ರಸ್ತೆಯಲ್ಲಿ ಗಸ್ತಿನಲ್ಲಿರುವ ಸಿಆರ್‌ಪಿಎಫ್ ಸಿಬ್ಬಂದಿ

ಆಗ ಎಚ್ಚೆತ್ತುಕೊಂಡ ಸರ್ಕಾರ ವಿಪರೀತ ಪೊಲೀಸ್ ಪಡೆಯನ್ನೇ ನಗರದ ನಿಯಂತ್ರಣಕ್ಕೆ ನೇಮಿಸಿತು. ಅಲ್ಲದೆ ಈ ಹಿಂದೆ ಶಿವಮೊಗ್ಗದಲ್ಲಿ ದಕ್ಷತೆಯಿಂದ ಕೆಲಸ ಮಾಡಿದ ಕೆಂಪಯ್ಯನವರು, ರೌಡಿ ಪಡೆಗಳಿಗೆ ಸಿಂಹಸ್ವಪ್ನವಾಗಿದ್ದ ಹಾದಿಮನಿ, ಶಾಮಣ್ಣ, ಅಶೋಕ್‌ಕುಮಾರ್, ಮದನ ಗಾಂವಕರ್, ಪದ್ಮನಯನ ಇಂತಹ ಘಟಾನುಘಟಿಗಳಲ್ಲದೆ, ಈ ಹಿಂದಿನ ಎಸ್ಪಿ ಆಗಿದ್ದ ರಮಣ್‌ಗುಪ್ತಾ ಸಹ ಬಂದು ಶಿವಮೊಗ್ಗವನ್ನು ನಿಯಂತ್ರಣಕ್ಕೆ ತಂದರು. ಅಲ್ಲದೆ ಗಲಭೆಗೆ ಕಾರಣರಾದವರನ್ನೆಲ್ಲಾ ಬಂಧಿಸಿದರು. ಗಾಜನೂರಿನಲ್ಲಿ ವಿಶ್ವನಾಥ ಶೆಟ್ಟಿಯನ್ನು ಕೊಲೆ ಮಾಡಿ ಮೂವರನ್ನು ಗಾಯಗೊಳಿಸಿ ಹೋಗಿದ್ದ ಕುಂದಾಪುರ ಮೂಲದ ಐವರು ಆರೋಪಿಗಳನ್ನು ಹಿಡಿದು ತರಲಾಯ್ತು, ಈ ಪೈಕಿ ಪಿಎಫ್‌ಐ ಕಾರ್ಯಕರ್ತರೇ 96 ಜನರ ಅರೆಸ್ಟಾದರೆ, 27 ಆರೋಪಿಗಳು ಶಿವಮೊಗ್ಗ ಜಿಲ್ಲೆಯವರು. ಇವರೆಲ್ಲರ ಮೇಲೆ ಸರಿಯಾದ ಐಪಿಸಿ ಕಲಂ ಜಡಿದಿರುವ ಪೊಲೀಸರು ಕೆಲ ನಿರಪರಾಧಿಗಳನ್ನು ಬಂಧಿಸಿದ್ದಾರೆ.



ಪ್ರಸನ್ನಕುಮಾರ್

## ಪಿಎಫ್‌ಐ ಕರೆದವರಾರು?

ಶಿವಮೊಗ್ಗದಲ್ಲಿ ಶಿವಾಜಿ ಜನ್ಮದಿನದ ಆಚರಣೆಗೆ ಸರಿಯಾಗಿ ಪ್ರತಿ ದಾಳಿಯಂತಹ ಪಿಎಫ್‌ಐ ಸಂಘಟನೆ ಕರೆದು ಸಭೆ ಮಾಡಲು ಅನುವು ಮಾಡಿಕೊಟ್ಟವರಾರು? ಎಂಬುದು ಯಕ್ಷಪ್ರಶ್ನೆಯಾಗಿದೆ. ಶಾಸಕ ಪ್ರಸನ್ನಕುಮಾರ್ "ಆ ಮಹಾತ್ಮನಾರು ನನಗೆ ತೋರಿಸಿಕೊಡಿ" ಎನ್ನುತ್ತಿದ್ದರೆ, ಬಿಜೆಪಿ ಜನರು "ಇದಕ್ಕೆಲ್ಲಾ ಶಾಸಕನೇ ಕಾರಣ" ಎನ್ನುತ್ತಿದ್ದಾರೆ. ಶಾಸಕ ಪ್ರಸನ್ನಕುಮಾರ್ ಮನೆ ಬಳಿ ಯಾವಾಗಲೂ ಬುರ್ಖಾ ಹೆಂಗಸರು ಮತ್ತು ಗಡ್ಡದ ಸಾಬರ ಸಂತೆಯನ್ನು ನೋಡಿ ಸಹಿಸಲಾರದ ಸ್ವಪಕ್ಷೀಯರ ಗೊಣಗಾಟವನ್ನು ಕೇಳಿದ ಬಿಜೆಪಿಗಳು, "ಈತ ಸಂಪೂರ್ಣ ಮುಸ್ಲಿಂ ಪರ" ಎಂದು ಆರೋಪಿಸಿ, ಪ್ರಸನ್ನ ಕುಮಾರ್‌ಗೆ ಬಿದ್ದ ಸೆಕ್ಯುಲರ್ ಮತಗಳನ್ನು ವಿಂಗಡಿಸುವ ಯತ್ನದಲ್ಲಿದ್ದಾರೆ. ಹಾಗೆ ನೋಡಿದರೆ, ಪ್ರಸನ್ನ ಕುಮಾರ್ ಎಲ್ಲ ಸಿದ್ಧಾಂತಗಳಿಗೂ ಸಲ್ಲುವ ವ್ಯಕ್ತಿ, ಆದರೂ ಕಾಂಗ್ರೆಸ್ಸಿಗ. ಜನಸಾಮಾನ್ಯರಿಗೆ ಆತ ಸ್ಪಂದಿಸುವುದನ್ನು ನೋಡಲಾಗದ ಬಿಜೆಪಿಗಳು ಮುಂದಿನ ಚುನಾವಣೆ ಮೇಲೆ ಕಣ್ಣಿಟ್ಟು ಈಗಿನಿಂದಲೇ ಅಪಪ್ರಚಾರದಲ್ಲಿ ತೊಡಗಿದ್ದಾರೆ ಎಂಬುದು ಯಾರಿಗಾದರೂ ಅರಿವಾಗುವ ಸಂಗತಿ.

## ಕೆಲ ಮುಸ್ಲಿಮರ ಗೋಳು

"ನಮಗೆ ಯಾವ ಗೊಡವೆಯೂ ಬೇಡ. ದುಡಿದು ತಿನ್ನುವ ನಮ್ಮ ಬದುಕೇ ನಮಗೆ ಸಾಕಾಗಿದೆ. ಹಾಗಿರುವಾಗ ಎಲ್ಲಿಂದಲೋ ಬಂದು ಗಲಭೆ ಎಬ್ಬಿಸಿ ಹೋದವರನ್ನು ಬಿಡಬಾರದು. ಅವರನ್ನ ಹಿಡಿದು ಶಿಕ್ಷಿಸಿ ನಮ್ಮ ಬದುಕು ನೆಮ್ಮದಿಯಿಂದ ಇರುವಂತೆ ಮಾಡಬೇಕು" ಎಂಬುದು ಪಿಎಫ್‌ಐ ಸಂಘಟನೆಯ ಹೆಸರನ್ನ ಹೊಸದಾಗಿ ಕೇಳಿದ ಕೆಲ ಮುಸ್ಲಿಮರ ಅಳಲು. ಏಕೆಂದರೆ ರಸ್ತೆ ಬದಿಯಲ್ಲಿದ್ದ ಅವರ ಹಣ್ಣಿನ ಅಂಗಡಿ, ಗೂಡಂಗಡಿ, ತಳ್ಳು ಗಾಡಿ ಒಂದೂ ಉಳಿದಿಲ್ಲ, ಬಿಜೆಪಿಗಳಲ್ಲಿ ಮುಸ್ಲಿಮರ ಆಸ್ತಿ ನಾಶದ ಮನಸ್ಸಿದ್ದರೆ, ಮುಸ್ಲಿಮರಲ್ಲಿ ಜೀವಹತ್ಯೆ ಮಾಡಿ ಭಯವುಂಟುಮಾಡುವ ಮನಸ್ಸಿದೆ. ಇವರ ನಡುವೆ ಸಿಕ್ಕು ದುಡಿದು ತಿನ್ನುವ ಮನುಷ್ಯರ ದುಃಖ ಯಾರ ಗಮನಕ್ಕೂ ಬರದಿರುವುದೊಂದು ದುರಂತ.

## ಹೋಳಿ ಹಬ್ಬ

ಸಾಮಾನ್ಯವಾಗಿ ಶಿವಮೊಗ್ಗದಲ್ಲಿ ಮತೀಯ ಗಲಭೆ ನಡೆಯುವುದು ವಿಶ್ವಹಿಂದೂ ಪರಿಷತ್‌ನ ಗಣಪತಿ ವಿಸರ್ಜನೆ ಸಮಯದಲ್ಲಿ. ಆದರೆ ಈಗ ಪಿಎಫ್‌ಐ ಮತ್ತು ಶಿವಾಜಿ ಜನ್ಮದಿನದಂದು ಆರಂಭವಾದ ಗಲಭೆ ಒಂದು ವಾರ ಕಾಲ ನಡೆದರೂ ನಗರದ ಪ್ರಕ್ಷುಬ್ಧತೆ ಇನ್ನು ಶಮನಗೊಂಡಿಲ್ಲ, ಆದ್ದರಿಂದ ಮಾರ್ಚ್ 5ರಂದು ಬರುವ ಹೋಳಿ ಹಬ್ಬದಂದು ಅನಾಹುತ ಸಂಭವಿಸುವ ಸೂಚನೆ ಮನಗಂಡಿರುವ ಶಾಸಕ ಪ್ರಸನ್ನ ಕುಮಾರ್ ಅಲ್ಲಿಯವರೆಗೂ ನಿಷೇಧಾಜ್ಞೆ ಮುಂದುವರಿಸಲು ಸರಕಾರವನ್ನು ಕೇಳಿಕೊಂಡಿದ್ದಾರೆ.

ಗಲಭೆ ಶುರುವಾದ ದಿವಸ ಶುಭಮಂಗಳ ಕಲ್ಯಾಣಮಂಟಪದಲ್ಲಿ ತರೀಕೆರೆಯ ಟಿ.ವಿ. ಶಿವಶಂಕರಪ್ಪನವರ ಮಗನ ಮದುವೆ ಅದ್ದೂರಿಯಾಗಿ ಜರುಗುತ್ತಿದ್ದರೆ, ಕುವೆಂಪು ರಂಗಮಂದಿರದಲ್ಲಿ ಸಾಸ್ವೆಹಳ್ಳಿ ಸತೀಶ್ ನಿರ್ದೇಶನದಲ್ಲಿ 'ಮಂಥರೆ' ನಾಟಕ ನಡೆಯುತ್ತಿತ್ತು, ಅದೇ ಹೊತ್ತಿಗೆ ಮತೀಯವಾದಿಗಳು ಗೂಡಂಗಡಿಗೆ ಮತ್ತು ಬೈಕುಗಳಿಗೆ ಬೆಂಕಿ ಹಚ್ಚುತ್ತಿದ್ದರು. ಇದೊಂದು ರೀತಿ ಭಾರತ ಎಲ್ಲವನ್ನ ಸಹಿಸಿಕೊಂಡು ಮುನ್ನಡೆವ ಕ್ರಮವನ್ನು ಸಾಂಕೇತಿಕವಾಗಿ ತೋರಿದಂತಿತ್ತು, ಪಿಎಫ್‌ಐ ಮಾಡಿದ ಅನಾಹುತದಿಂದ ಮೊದಲ ಬಾರಿಗೆ ಶಿವಮೊಗ್ಗದ ಮುಸ್ಲಿಮರು ಹೆದರಿದಂತೆ ಕಾಣುತ್ತಿದ್ದಾರೆ. ಏಕೆಂದರೆ ವಿಶ್ವಹಿಂದೂಗಳಿಗೆ ಇನ್ನೂ ಸರಿಯಾದ ಮತೀಯ ಗಲಭೆಯಾದಂತೆ ಕಾಣುತ್ತಿಲ್ಲ. ಆ ಕಾರಣವಾಗಿ ಜಿಲ್ಲಾ ರಕ್ಷಣಾ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾಗಿದೆ.


## ಪೀಸ್ ಕಮಿಟಿ ಪೀಸ್ ಪೀಸ್

ಶಿವಮೊಗ್ಗದಲ್ಲಿ ಗಲಭೆಗೂ ಮುನ್ನ ಮತ್ತು ನಂತರ ಶಾಂತಿಸಭೆಗಳು ಸೇರುತ್ತವೆ. ಸೂಕ್ಷ್ಮವಾಗಿ ನೋಡಿದರೆ ಗಲಭೆಕೋರರರೆ ಬೇರೆ, ಶಾಂತಿಮಂತ್ರದವರೇ ಬೇರೆ. ಮತೀಯ ದಳ್ಳುರಿ ಹತ್ತಿಕೊಂಡು ಪರಸ್ಪರ ಆಸ್ತಿನಾಶ ಮತ್ತು ಜೀವಹತ್ಯೆ ನಡೆಯುವಾಗ ಈ ಶಾಂತಿಪ್ರಿಯ ಜನ ಎಲ್ಲಿರುತ್ತಾರೆ, ಏನು ಮಾಡುತ್ತಾರೆ ಎಂಬುದು ಈವರೆಗೂ ನಿಗೂಢವಾಗಿದೆ. ಆ ಸಮಯದಲ್ಲವರು ಬೀದಿಯಲ್ಲಿ ಕಾಣಿಸಿಕೊಂಡದ್ದನ್ನು ಯಾರೂ ನೋಡಿಲ್ಲ. ಆದರೂ ಶಾಂತಿಸಭೆಯಲ್ಲಿ ಕಾಣಿಸಿಕೊಂಡು ಹೃದಯ ಕರಗುವಂತಹ ಸೌಹಾರ್ದ ನುಡಿಗಳಲ್ಲಿ ಭಾಷಣ ಆರಂಭಿಸುತ್ತಾರೆ. ಮತ್ತೆ ಕೆಲವರು ಕಿಡಿ ಕಾರುತ್ತಾರೆ. ಅಂತಲ್ಲಿ ಶಾಂತಿಸಭೆಗಳು ಕ್ಷೋಭೆಯುಂಟುಮಾಡುವ ಸಭೆಗಳಾಗಿ ಅಂತ್ಯಗೊಳ್ಳುತ್ತವೆ. ಶಿವಮೊಗ್ಗದ ಶಾಂತಿಸಭೆಯಲ್ಲೂ ಪರಸ್ಪರರು ಗಡಿರೇಖೆಯಲ್ಲಿ ನಿಂತ ಶ್ವಾನಗಳ ಹಾಗೆ ಬೊಗಳಿದ್ದು ಬಿಟ್ಟರೆ ಯಾವ ಸಾಧನೆಯೂ ಆಗಲಿಲ್ಲ, ಆದ್ದರಿಂದ ಗಲಭೆಕೋರರೆ ಬೇರೆ ಶಾಂತಿಪ್ರಿಯರೇ ಬೇರೆ ಎಂಬುದು ಸಾಬೀತಾಗಿದೆ. ಇವರು ಸಕ್ರಿಯರಾಗಿದ್ದರೆ ನಿರಪರಾಧಿಗಳು ಅರೆಸ್ಟಾಗುವುದಿಲ್ಲ, ಹಾಗೆಯೇ ಅಪರಾಧಿಗಳು ತಪ್ಪಿಸಿಕೊಳ್ಳಲಾಗುವುದಿಲ್ಲ. ಆದ್ದರಿಂದ ನಿಜವಾದ ಗಲಭೆಕೋರರೆ ಶಾಂತಿಸಭೆ ಮಾಡಿಕೊಂಡು ಊರುಬಿಟ್ಟು ಹೋದರೆ ಯಾವುದೇ ಊರಿನಲ್ಲಿ ಮತೀಯ ಗಲಭೆಗಳಾಗುವುದಿಲ್ಲ.

■ ವರದಿಗಾರ



ಶಿವಮೊಗ್ಗ ತಾಲೂಕಿನ ಗಾಜನೂರಿನಲ್ಲಿ ನಡೆದ ಹತ್ಯೆ ಹಾಗೂ ಹಿಂಸಾಚಾರ ಪ್ರಕರಣದಲ್ಲಿ ಸಂಬಂಧಿಸಿದಂತೆ ಪೊಲೀಸರು ಬಂಧಿಸಿರುವ ಆರೋಪಿಗಳು



ಇತ್ತೀಚಿನ ಕೋಮು ಗಲಭೆ ವೇಳೆ ನಡೆದ ವಿಶ್ವನಾಥ ಶೆಟ್ಟಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಶಿವಮೊಗ್ಗ ಪೊಲೀಸರು ಬಂಧಿಸಿದ್ದಾರೆ



# ಪರಮೇಶ್ವರ್ ಯಾವ ಸೀಮೆ ದಲಿತ!

ಇಲ್ಲಿಗೆ ಎರಡು ವರ್ಷದ ಹಿಂದಿನ ಮಾತು. ತುಮಕೂರಿನ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಆಡಳಿತ ಕಚೇರಿಯೆದುರು ನೂರಕ್ಕೂ ಅಧಿಕ ದಲಿತ ವಿದ್ಯಾರ್ಥಿಗಳು ಅಂಬೇಡ್ಕರ್ ಫೋಟೋ ಹಿಡಿದು 'ವಿ ವಾಂಟ್ ಜಸ್ಟೀಸ್' ಎಂದು ಕೂಗಾಡುತ್ತಲೇ ಇದ್ದರು. ಜಾತಿಯಿಂದ ದಲಿತರಾಗಿಯೂ ಸರ್ಕಾರಿ ಮೆರಿಟ್ ಕೋಟಾದಡಿಯೇ ಪ್ರವೇಶ ಪಡೆದೂ ಮ್ಯಾನೇಜ್‌ಮೆಂಟು ತಮ್ಮಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿದೆ, ಸಣ್ಣಪುಟ್ಟ ಹಾಸ್ಟೆಲ್ ಸೌಲಭ್ಯಗಳಿಗೂ ಬೇಕಾಬಿಟ್ಟಿ ಹಣ ಸುಲಿಯುತಿದೆ, ಇಂಥ ಶೋಷಣೆಯನ್ನು ತಮ್ಮಿಂದ ಭರಿಸಲಾಗುತ್ತಿಲ್ಲ, ಇದು ಕಾನೂನುಬಾಹಿರ.... ಎಂಬುದು ಆ ದಲಿತ ವಿದ್ಯಾರ್ಥಿಗಳ ಅಳಲಾಗಿತ್ತು,

ಹೀಗೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದ ಆ ದಲಿತ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ವರದಿ ಮಾಡಲೆಂದೇ ನ್ಯೂಸ್ ಚಾನಲ್ಲುಗಳ ಕ್ಯಾಮರಾ ಸಮೇತ ನಾಲ್ಕೈದು ಮಂದಿ ವರದಿಗಾರರು ಧಾವಿಸಿ ಬಂದಿದ್ದರು. ಇದು ಗೊತ್ತಾಗಿದ್ದೇ ಕಾಲೇಜು ಆಡಳಿತ ಮಂಡಳಿಯ 'ಬಾಸ್' ಓರ್ವ ನುಗ್ಗಿಬಂದಿದ್ದೇ ಟೀವಿ ಕ್ಯಾಮರಾಗಳನ್ನು ಕಿತ್ತುಕೊಳ್ಳಲೆತ್ನಿಸಿದ್ದೇ ವರದಿಗಾರರನ್ನೇ ಅಟ್ಟಾಡಿಸತೊಡಗಿದ. 'ನೀವೆಲ್ಲ ಕಾಲೇಜು ಆವರಣದೊಳಕ್ಕೆ ಬಂದಿದ್ದೇಕೆ? ನಿಮ್ಮನ್ನು ಒಳಕ್ಕೆ ಬಿಟ್ಟಿದ್ದು ಯಾರು? ಗೆಟ್‌ಔಟ್ ಫ್ರಂ ಹಿಯರ್. ಇಲ್ಲಾ ಅಂದ್ರೆ ನಿಮ್ಮನ್ನೆಲ್ಲ ಅರೆಸ್ಟ್ ಮಾಡಿಸ್ತೀನಿ....' ಎಂದದ್ದೇ ಟೀವಿಯವರನ್ನ ಅಟ್ಟಾಡಿಸಿ ಹೊರದಬ್ಬಿದ.

ಹೀಗೆ ಕೆಂಡಮಂಡಲನಾಗಿ ಆವತ್ತು ಪ್ರತಿಭಟಿಸುತ್ತಿದ್ದ ದಲಿತ ವಿದ್ಯಾರ್ಥಿಗಳನ್ನೂ ಟೀವಿಯವರನ್ನೂ ಒಟ್ಟೊಟ್ಟಿಗೆ ಅಟ್ಟಾಡಿಸಿ ಬಡಿದದ್ದು ತುಮಕೂರಿನ ಸಿದ್ಧಾರ್ಥ ಮೆಡಿಕಲ್ ಅಂಡ್ ಇಂಜಿನಿಯರಿಂಗ್ ಸಾಮ್ರಾಜ್ಯದ ಧಣಿ ಡಾ. ಶಿವಪ್ರಸಾದ್. ಹಾಲಿ ಕೆಪಿಸಿಸಿ ಅಧ್ಯಕ್ಷ ಅಂದರೆ ಪ್ರದೇಶ ಕಾಂಗ್ರೆಸ್ ಅಧಿಪತಿ ಡಾ. ಪರಮೇಶ್ವರ್ ಸಾಹೇಬರಿಗೆ ಈ ಶಿವಪ್ರಸಾದ್ ಖಾಸಾ ಅಣ್ಣ!

## ದಲಿತ ವಿದ್ಯಾರ್ಥಿಗಳ ಗೋಳು?

ಪರಮೇಶ್ವರ್‌ರ ಸಕಲ ಸಂಪತ್ತಿಗೂ ಮೂಲವಾದ ತುಮಕೂರಿನ ಸಿದ್ಧಾರ್ಥ ಮೆಡಿಕಲ್ ಅಂಡ್ ಇಂಜಿನಿಯರಿಂಗ್ ಕಾಲೇಜುಗಳೆಂದರೆ ಅದು ದಲಿತರ ಪಾರುಪತ್ಯೆಯ ಸಂಸ್ಥೆಯೆಂದೇ ತಾನೇ ರಾಜ್ಯದ ದಲಿತ ಸಮೂಹ ಭಾವಿಸಿರುವುದು. ಆದರೆ ದಲಿತ ವಿದ್ಯಾರ್ಥಿಗಳೇ ತಮ್ಮನ್ನು ಆಡಳಿತ ವರ್ಗ ಸುಲಿಗೆ ನಡೆಸುತ್ತಿದೆ ಎಂದು ಅಂಬೇಡ್ಕರ್ ಫೋಟೋ ಹೊತ್ತು ಪ್ರತಿಭಟನೆಗಿಳಿಯುತ್ತಾರೆ ಎಂದರೆ ಏನರ್ಥ?

ಇದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ಮತ್ತವರ ಕೂಟದ ದಲಿತ ಕಾಳಜಿಯ ಸಣ್ಣ ಸ್ಯಾಂಪಲ್ಲಷ್ಟೇ. ಆವತ್ತು ದಲಿತ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯನ್ನು ಕೇವಲ ಒಂದು ನ್ಯೂಸ್ ಚಾನಲ್ಲಿನ ಹೊರತಾಗಿ ಬೇರೆ ಯಾವ ಚಾನಲ್ಲೂ ಬಿತ್ತರಿಸಲಿಲ್ಲ, ತುಮಕೂರಿನ ಕೆಲ ಲೋಕಲ್ ಪತ್ರಿಕೆಗಳ ಹೊರತಾಗಿ ರಾಜ್ಯಮಟ್ಟದ ಯಾವ ಪತ್ರಿಕೆಗಳಲ್ಲೂ ಇದು ಸುದ್ದಿಯಾಗಲಿಲ್ಲ, ಏಕೆಂದರೆ ಅದು ದಲಿತರೊಬ್ಬರ ಸಂಸ್ಥೆಯ ವಿರುದ್ಧ ದಲಿತ ವಿದ್ಯಾರ್ಥಿಗಳೇ ನಡೆಸಿದ 'ಕ್ಷುಲ್ಲಕ' ಪ್ರತಿಭಟನೆ!

ದಲಿತ ಎಂದರೆ ಎಲ್ಲಾ ಜಾತಿಯ ಬಡವ ಎಂಬ ಮಾನವೀಯ ಔದಾರ್ಯದ ಮಾತು ಒತ್ತಟ್ಟಿಗಿರಲಿ. ಸಂವಿಧಾನದ ವಿಧಿ 341 ರ ಪ್ರಕಾರ ಯಾರು ಅಸ್ಪೃಶ್ಯರೋ ಶೈಕ್ಷಣಿಕವಾಗಿ ತೀರ ಹಿಂದುಳಿದಿದ್ದಾರೋ ಆತ ಮಾತ್ರವೇ ಪರಿಶಿಷ್ಟ. ಆರ್ಥಿಕ ದುರ್ಗತಿಯಾಗಲಿ, ಹುಟ್ಟಿನ ಕಾರಣವಾಗಲಿ, ರಕ್ತ ಸಂಬಂಧವಾಗಲಿ ಇಲ್ಲಿ ಮುಖ್ಯವಾಗುವುದಿಲ್ಲ, ಆದರೆ ಏಕಾಏಕಿ ಹುಟ್ಟಿಕೊಂಡ 'ದಲಿತ ಮುಖ್ಯಮಂತ್ರಿ' ಎಂಬ ಆಕಸ್ಮಿಕ ಅನಿರೀಕ್ಷಿತ, ಅನಪೇಕ್ಷಿತ ಪ್ರಶ್ನೆಯ ವಿಪರ್ಯಾಸ ಹೇಗಿದೆ ನೋಡಿ-

ಏಕಾಏಕಿ ಕನ್ನಡ ಜನತೆಗೊಬ್ಬ ದಲಿತ ಮುಖ್ಯಮಂತ್ರಿ ಬೇಕೆಂದು ಕೇಳುತ್ತಿರುವವರ್‍ಯಾರು?


ರಾಜ್ಯದ ದಲಿತ ಸಮೂಹದಿಂದಲೋ, ದಲಿತ ಚಿಂತಕರು ಜನಪರ ಹೋರಾಟಗಾರರ ನಡುವಿನಿಂದಲೋ ಅಥವಾ ಆಳುವ ಕಾಂಗ್ರೆಸ್ ವಲಯದಿಂದಲೋ ಈ ಥರದ ಕೂಗೆದ್ದಿದ್ದರೆ ಆ ಮಾತು ಬೇರೆ. ಆದರೆ ಕೂಗು ಕೇಳಿಬರುತ್ತಿರುವುದು ಐಷಾರಾಮಿ 'ವಿಟ್ರಿಯಾ' ಎಂಬ ಪಂಚತಾರಾ ಹೋಟೆಲಿನ ಪಾರ್ಟಿ ಹಾಲಿನಿಂದ!

## ಖರ್ಗೆಯ ನೆರವು!

ನಟಭಯಂಕರ ಕಮ್ ನಿವೃತ್ತ ಐಎಎಸ್ ಅಧಿಕಾರಿ ಶಿವರಾಂ, ರಾಜ್ಯ ರಿಪಬ್ಲಿಕನ್ ಪಕ್ಷ ಮತ್ತು ಸಮತಾ ಸೈನಿಕ ದಳದ ಅಧ್ಯಕ್ಷರಾದ ವೆಂಕಟಸ್ವಾಮಿ, ಮತ್ತೊಬ್ಬ ದಲಿತ ನಾಯಕ ಎನ್. ಮೂರ್ತಿ ಮತ್ತು ಮಾದಿಗ ದಂಡೋರದ ಪಾವಗಡ ಶ್ರೀರಾಮ್. ಶಿವರಾಂ ಹೊರತಾಗಿ ಮಿಕ್ಕೆಲ್ಲ ದಲಿತ ನಾಯಕರ ಬದ್ಧತೆ, ಪ್ರಾಮಾಣಿಕತೆ, ಕಾಳಜಿಯ ಬಗ್ಗೆಯೂ ಅನುಮಾನ ದೂರವಿರಲಿ. ಹಾಗುಂತ ಪರಮೇಶ್ವರ್ ಮುಖ್ಯಮಂತ್ರಿಯಾದರೆ ದಲಿತ ಕ್ರಾಂತಿ ಸಂಭವಿಸುತ್ತಾ? ಪರಮೇಶ್ವರ್‌ರನ್ನು ಓರ್ವ ದಲಿತನೆಂದು ಪರಿಗಣಿಸಲು ಈ ಮಂದಿ ಬಳಸುತ್ತಿರುವ ಮಾನದಂಡ ವೇನು? ಪರಮೇಶ್ವರ್ ಮುಖ್ಯಮಂತ್ರಿಯಾದ ಮಾತ್ರಕ್ಕೆ ದಲಿತರ ಬೇಗುದಿಯೆಲ್ಲ ಕೊನೆಗೊಳ್ಳುತ್ತದೆಯೆಂದೂ ಸದ್ಯ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ದಲಿತ ವಿರೋಧಿ ಅಥವಾ ಸ್ವಜನಪಕ್ಷಪಾತಿ ಎಂದೂ ಈ ಮಂದಿ ನಿರ್ಧರಿಸಿದ್ದರ ಹಿಂದಿರುವ ಕಾರಣವೇನು?

ಈ ಪ್ರಶ್ನೆಗಳೆಲ್ಲ ಒತ್ತಟ್ಟಿಗಿರಲಿ. ಮೊದಲು ಪರಮೇಶ್ವರ್ ಹೇಗೆ ದಲಿತರಾಗುತ್ತಾರೆ ಮತ್ತು ಈತನಕ ಅವರ ಬದುಕು ಯಾರಿಗಾಗಿ ಯಾವ ಉದ್ದೇಶಗಳತ್ತ ಸಾಗಿ ಬಂದಿದೆ ಎಂಬುದನ್ನೇ ಪರಿಶೀಲಿಸೋಣ. ಪರಮೇಶ್ವರ್ ತಂದೆ ಗಂಗಾಧರಯ್ಯ ಓರ್ವ ಸಾಮಾನ್ಯ ಶಾಲಾ ಶಿಕ್ಷಕರಾಗಿದ್ದರು. ಬಡತನವನ್ನು ಕಂಡವರು. ಅವರು ಕಷ್ಟಪಟ್ಟು ಕಟ್ಟಿದ್ದು ತುಮಕೂರಿನ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜು. ಅದಕ್ಕೆ ಕಾರಣರಾಗಿದ್ದು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ. ತನ್ನ ಅಧಿಕಾರ, ಪ್ರಭಾವ ಎಲ್ಲವನ್ನೂ ಬಳಸಿ ಸಿದ್ಧಾರ್ಥ ಮೆಡಿಕಲ್ ಕಾಲೇಜಿಗೆ ಮಂಜೂರಾತಿಯನ್ನೂ ಕೊಡಿಸಿಕೊಟ್ಟ ಖರ್ಗೆ ಶುರುವಿನಲ್ಲಿ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಸ್ಥಾಪಕರೂ ಆಗಿದ್ದರು.

ತಂದೆ ಗಂಗಾಧರಯ್ಯ ಸೊಸೈಟಿಗೆ ಸೂತ್ರಧಾರರಾಗಿರುವತನಕ ಎಲ್ಲವೂ ಸುಸೂತ್ರವಾಗೇ ಇತ್ತು. ಯಾವತ್ತು ಪರಮೇಶ್ವರ್ ಆಸ್ಟ್ರೇಲಿಯಾದಿಂದ ವ್ಯಾಸಂಗ ಮುಗಿಸಿ ಬಂದರೋ ತುಮಕೂರಿನ ಸಿದ್ಧಾರ್ಥ ಕ್ಯಾಂಪಸ್ಸಿನ ಗ್ರಹಗತಿಯೇ ಬದಲಾಯಿತು. ದಲಿತ ಹಣೆಪಟ್ಟಿ ಹೊತ್ತೇ ಪರಮೇಶ್ವರ್ ಮಂತ್ರಿಯಾದರು. ಅಧಿಕಾರ ಬಂತು. ಅಂತಸ್ತು ಆಸ್ತಿ ಸಂಪತ್ತು ಎಲ್ಲವೂ ಬಂತು. ಆದರೆ ಪರಮೇಶ್ವರ್ ತನ್ನ ಬಾಳಸಂಗಾತಿಯನ್ನಾಗಿ ಆಯ್ದುಕೊಂಡಿದ್ದು ಮಾತ್ರ ಬ್ರಾಹ್ಮಣರನ್ನು!



## ಪರಮೇಶ್ವರ್ ಪುತ್ರನ ಹುಚ್ಚಾಟಗಳು



ಬಿದನೆಯ ಬೀಜ ನೆಟ್ಟರೆ ಬೆಂಡೆ ಬೆಳೆಯುವುದುಂಟೆ? ಹಾಗೇ ಪರಮೇಶ್ವರ್ ಮಗ ಶಶಾಂಕ್ ಅಲಿಯಾಸ್ Shawn ಎಂಬ ಹೈಬ್ರೀಡ್ ಹುಡುಗನ ಜೀವನಶೈಲಿಯಿದೆ. ಆಸ್ಟ್ರೇಲಿಯಾದಿಂದ ಇಲ್ಲಿಗೆ ನಾಲ್ಕು ವರ್ಷದ ಹಿಂದೆ ವಾಪಸ್ಸಾದ ಶಶಾಂಕ್ ಒಮ್ಮೆ ತುಮಕೂರಿನಿಂದ ಬೆಂಗಳೂರಿಗೆ ವಿದೇಶಿ ಕಾರಲ್ಲೇ ಬರುತ್ತಿದ್ದನಂತೆ. ಹೇಳಿಕೇಳಿ ಇಂಡಿಯನ್ ರಸ್ತೆಗಳು. ಡ್ರೈವರ್ ಬೇರೆ ಲೋಕಲ್ಲು, ಎಷ್ಟು ಅಂತ ವೇಗವಾಗಿ ಓಡಿಸಲು ಸಾಧ್ಯ?

ಸ್ಪೀಡಾಗಿ ಓಡಿಸು, ಇದು ಇಂಪೋರ್ಟೆಡ್ ಕಾರು, ಇಷ್ಟು ನಿಧಾನವಾಗಿ ಓಡಿಸೋದು ನೀನು ಆ ಕಾರಿಗೇ ಮಾಡೋ ಅವಮಾನ ಎಂದನಂತೆ ಶಶಾಂಕ್. ಪಾಪ ಡ್ರೈವರ್ ತಾನೇ ಏನು ಮಾಡಿಯಾನು? ಓಡಿಸಬೇಕೆಂದರೂ ಮುಂದೆ ಚಲಿಸುವ ಕಾರುಗಳು ಅಷ್ಟೇ ವೇಗವಾಗಿ ಸಾಗಬೇಕಲ್ಲ, ನೋಡುವಷ್ಟು ನೋಡಿ ರೋಸತ್ತ ಶಶಾಂಕ್ ಗಾಡಿ ನಿಲ್ಲಿಸು ಎಂದಿದ್ದೇ ಡ್ರೈವರ್‌ನನ್ನು ಕೆಳಕ್ಕಿಳಿಸಿದ್ದೇ ಕಪಾಳಕ್ಕೆರಡು ಬಿಗಿದು ತಾನೇ ಡ್ರೈವರ್ ಸೀಟಲ್ಲಿ ಕೂತು ಶರವೇಗದಲ್ಲಿ ನುಗ್ಗಿದನಂತೆ. ಆದರೆ ರಸ್ತೆಗಳು ಆಸ್ಟ್ರೇಲಿಯಾದ ರಸ್ತೆಗಳಲ್ಲವಲ್ಲ, ಕಾರು ವೇಗವಾಗಿ ಮರೆಯಾದ ಹತ್ತೇ ನಿಮಿಷಕ್ಕೆ ಅತ್ತ ಪರಮೇಶ್ವರ್ ಮೊಬೈಲಿನಿಂದ ಡ್ರೈವರ್‌ಗೆ ವಾಚಾಮಗೋಚರ ಬೈಗುಳವಂತೆ.

ಹಕೀಕತ್ತೇನೆಂದರೆ ಇಂಡಿಯನ್ ರೋಡುಗಳ ಹಣೆಬರಹವೇ ಗೊತ್ತಿಲ್ಲದೆ ಪರಮೇಶ್ವರ್ ಪುತ್ರ ಯರ್‍ರಾಬಿರ್‍ರಿ ಕಾರು ನುಗ್ಗಿಸಲು ಹೋಗಿ ಮರಕ್ಕೆ ಗುದ್ದಿ ರಕ್ತ ಸುರಿಸುತ್ತಿದ್ದನಂತೆ! ಇದು ಪರಮೇಶ್ವರ್ ಪುತ್ರನ ಕಾಳಜಿಗೆ ಒಂದು ನಿದರ್ಶನವಷ್ಟೆ.

ಇದಾಗಿ ವರ್ಷಕ್ಕೇ ಪರಮೇಶ್ವರ್ ಮಗ ಪ್ರತಿಷ್ಠಿತ ಕಮರ್ಷಿಯಲ್ ಸ್ಟ್ರೀಟ್‌ನಲ್ಲೊಂದು ವಿದೇಶಿ ಕಾರುಗಳ ಬಿಡಿಭಾಗಗಳ ಷೋರೂಮ್ ತೆರೆದ ಸುದ್ದಿ ಬಂತು. ಸಫೀನಾ ಪ್ಲಾಜಾದ ಪಕ್ಕದಲ್ಲೇ ಕೋಟಿಕೋಟಿ ಬಂಡವಾಳ ಹಾಕಿ ಪರಮೇಶ್ವರ್ ಮಗನ ಇಂಪೋರ್ಟೆಡ್ ಕಾರುಗಳ ಬಿಡಿಭಾಗದ ಮಳಿಗೆ ವಿಜೃಂಭಣೆಯಲ್ಲೇ ಶುರುವಾಗಿತ್ತು,

ಆದರೆ ಷೋರೂಮಿನ ಉದ್ಘಾಟನೆಯ ವಿಶೇಷವೇನು ಗೊತ್ತೆ? ಗಣಪತಿ ಹೋಮವಾಗಲಿ ಬುದ್ಧ ಧಮ್ಮ ಪಠನವಾಗಲಿ ಅಲ್ಲ, ಫ್ಯಾಷನ್ ಷೋ, ಅರೆಬರೆ ಉಡುಗೆ ತೊಟ್ಟು ಅರೆಬೆತ್ತಲಾಗಿ ರ್‍ಯಾಂಪ್ ಮೇಲೆ ಮಾಡೆಲ್ ಬೆಡಗಿಯರು ಕ್ಯಾಟ್‌ವಾಕ್ ಮಾಡುತ್ತಿದ್ದರೆ ಪರಮೇಶ್ವರ್ ಪುತ್ರ ಆಸ್ಟ್ರೇಲಿಯನ್ ಇಂಗ್ಲಿಷ್‌ನಲ್ಲಿ ಕೇಕೆ ಹಾಕುತ್ತಿದ್ದನಂತೆ!

ಅರೆ ಬ್ರಾಹ್ಮಣ ಅರೆ ದಲಿತ ಪರಮೇಶ್ವರ್ ಪುತ್ರ ನಾಡಿನ ದಲಿತರ ಹಾಗೆ ಅಂಬೇಡ್ಕರ್ ಕ್ರಾಂತಿಗೀತೆ ಹೇಳಿಕೊಂಡಿರಬೇಕೆಂದು ಯಾರಾದರೂ ಏಕೆ ನಿರೀಕ್ಷಿಸಬೇಕು? ಶಾಂತಂ ಪಾಪಂ!

## ನಟ ಭಯಂಕರ ಶಿವರಾಮು ದಲಿತನಾಗಿದ್ದು ಯಾವಾಗ?


ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಖರ್ಗೆ ಸಮಾಜ ಕಲ್ಯಾಣ ಮಂತ್ರಿ. ರಾಜ್ಯಾದ್ಯಂತ ದಲಿತ ವಿದ್ಯಾರ್ಥಿಗಳೆಲ್ಲ ಕಂಪ್ಯೂಟರ್ ಪರಿಜ್ಞಾನ ಹೊಂದಲೆಂಬ ಆಸೆ ಹೊತ್ತೇ 43 ಕೋಟಿ ರೂಪಾಯಿಗಳ ವೆಚ್ಚದ ವಿಶೇಷ ಯೋಜನೆಯೊಂದನ್ನು ತಂದರು. ಅದು ದಲಿತ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣದ ಯೋಜನೆ. ಪ್ರಾಮಾಣಿಕವಾಗಿ ಅದು ಕಾರ್ಯಗತವಾಗಿದ್ದರೆ ಈ ಹೊತ್ತಿಗೆ ಲಕ್ಷಲಕ್ಷ ಹಳ್ಳಿಗಾಡಿನ ದಲಿತ ಮಕ್ಕಳೆಲ್ಲ ಕಂಪ್ಯೂಟರ್ ಪರಿಣಿತರಾಗಿ ಯಾವ ಮಟ್ಟಕ್ಕೇರುತ್ತಿದ್ದರೋ!

ಆಗ ಸಮಾಜ ಕಲ್ಯಾಣ ಆಯುಕ್ತರಾಗಿದ್ದದ್ದು ನಟ ಭಯಂಕರ ಶಿವರಾಂ. ಸಿಎಂಸಿ ಸೇರಿದಂತೆ ಐದಾರು ಕಂಪ್ಯೂಟರ್ ಕಂಪನಿಗಳಿಗೆ ದಲಿತ ಮಕ್ಕಳಿಗೆ ಕಂಪ್ಯೂಟರ್ ಕಲಿಸುವ ಕಾಂಟ್ರಾಕ್ಟು ಕೊಟ್ಟಿದ್ದೇ ದೊಡ್ಡ ಗೋಲ್‌ಮಾಲಾಗಿತ್ತು, ಯಾರ್‍ಯಾರದೋ ಫೋಟೋ, ನಕಲಿ ಜಾತಿಪತ್ರಗಳನ್ನು ಲಗತ್ತಿಸಿ ಅವರೆಲ್ಲರಿಗೂ ಕಂಪ್ಯೂಟರ್ ಕಲಿಸಿದಂತೆ ದಾಖಲೆ ಸೃಷ್ಟಿಸಿದ್ದು ಬಿಟ್ಟರೆ ಯೋಜನೆಯ ಅಷ್ಟೂ ಹಣವನ್ನು ಆಯುಕ್ತ ಶಿವರಾಂ ಪಟಾಲಮ್ಮೇ ನುಂಗಿಹಾಕಿತ್ತು,

ಹೀಗೆ ದೋಚಿದ ದುಡ್ಡನ್ನೇ ಬಳಸಿ ಶಿವರಾಂ ತಾನೇ ಹೀರೋ ಆಗಿ ನಿರ್ಮಿಸಿದ್ದು 'ಗೇಮ್' ಎಂಬ ತಗಡು ಚಿತ್ರವನ್ನು, ತಮಿಳಿನ ಹೀರೋಯಿನ್ ಮೀನಾಳ ಮುಂದೆ ನರಪೇತಲ ಶಿವರಾಮು ಕುಣಿತ ಸಿಂಹದ ಮುಂದೆ ಸಿಂಗಳಿಕದಂತಿತ್ತು, ಶಿವರಾಂ ಬದಲಾಗಿ ಬೇರೆ ಯಾರೇ ಸದೃಢ ಯುವಕ ಹೀರೋ ಆಗಿದ್ದರೂ ಸಿನಿಮಾ ಗೆಲ್ಲುತ್ತಿತ್ತೇನೋ. ಹತ್ತು ಕೋಟಿ ದಲಿತರಿಂದ ದೋಚಿದ ದುಡ್ಡು ಹಾಕಿ ನಿರ್ಮಿಸಿದ 'ಗೇಮ್' ವಾರಕ್ಕೇ ಮಕಾಡೆ ಬಿತ್ತು,

ಸಿನಿಮಾ ತೋಪು, ದುಡ್ಡಿಗೂ ದೋಖಾ. ಇದು ನಟ ಭಯಾನಕ ಶಿವರಾಮುರ ದಲಿತ ಕ್ರಾಂತಿಯ ಸಣ್ಣ ಸ್ಯಾಂಪಲ್ಲಷ್ಟೆ. ಪರಮೇಶ್ವರ್ ಹಾಗೆಯೇ ಶಿವರಾಮ್ ಬಾಳಸಂಗಾತಿಯನ್ನಾಗಿ ಬ್ರಾಹ್ಮಣರನ್ನು ಮದುವೆಯಾದರು. ಇತ್ತೀಚಿಗೆ ತಮ್ಮ ಮಗಳಿಗೂ ಬ್ರಾಹ್ಮಣ ಯುವಕನನ್ನೇ ತಂದು ಮದುವೆ ಮಾಡಿದ್ದೂ ಆಯ್ತು, ನಿಜಕ್ಕೂ ಪರಮೇಶ್ವರ್‌ಗೆ ತೀರ ಶಿವರಾಮು ಬಗ್ಗೆ ಪ್ರೀತಿಯಿದ್ದರೆ ಕಾಂಗ್ರೆಸ್ ಟಿಕೆಟ್ ಕೊಡಿಸಬೇಕಿತ್ತು, ಆದರೆ ಶಿವರಾಮು ಚುನಾವಣೆಗೆ ನಿಂತಿದ್ದು ಜೆಡಿಎಸ್ ಅಭ್ಯರ್ಥಿಯಾಗಿ!

ಈಗ ಪರಮೇಶ್ವರ್ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಯಾಗಬೇಕಂತೆ. ಬಳ್ಳಾರಿಯಿಂದ ಪಾದಯಾತ್ರೆ ಬೇರೆ ಮಾಡುತ್ತಾರಂತೆ. ಶಿವರಾಮು ಮಾತು, ನಡೆ, ವರ್ತನೆಗೂ ಈಗ ನಟಿಸುತ್ತಿರುವ ಪಾತ್ರಕ್ಕೂ ಏನಾದರೂ ಸಂಬಂಧವುಂಟೆ? ಶಿವರಾಮುವನ್ನು ಯಾರಾದರೂ ದಲಿತ ಎನ್ನುವುದಾದರೆ ಇನ್ನು ದಲಿತರನ್ನು ಏನೆನ್ನಬೇಕು?



...ಲಿತ: ಅಯ್ಯಂಗಾರ್ ಹಿನ್ನೆಲೆಯ ಕನ್ನಿಕಾ ಪರಮೇಶ್ವರ್ ಅರ್ಧಾಂಗಿ ... ಮೂಲಕ ಅರೆ ವೈದಿಕರಾದರು. ಹಾಗಂತ ತಾನೊಬ್ಬ ಬುದ್ಧಾನುಯಾಯಿ ...ನ್ನು ಮರೆಮಾಚದೆ ತನ್ನ ಛೇಂಬರ್, ವರಾಂಡಗಳಲ್ಲಿ ಬುದ್ಧ ವಿಗ್ರಹಗಳನ್ನೂ ...ಸಿಕ್ಕಿಡುತ್ತಿದ್ದರು. ಅಣ್ಣ ಶಿವಪ್ರಸಾದ್ ಕೂಡ ಸೂಟು, ಬೂಟು, ಟೈ ...ತರು. ತಂದೆ ಗಂಗಾಧರಯ್ಯ ಕೆಲವರ್ಷಗಳ ಹಿಂದೆ ನಿಧನರಾದಾಗ ... ಬುದ್ಧ ವಿಧಿಯಲ್ಲೇ ಅಂತ್ಯಕ್ರಿಯೆ ನಡೆಸಿದ್ದು ಬಿಟ್ಟರೆ ಪರಮೇಶ್ವರ್‌ಗೆ ...ಯಾಗಲಿ ಜಾತೀಯ ಅಪನಿಂದನೆಯಾಗಲಿ ಎಲ್ಲೂ ಕಾಡಲಿಲ್ಲ.

## ದಲಿತರ ಸಮಾಧಿ?

...ಂದೆ ಖರ್ಗೆಯವರನ್ನೇ ಸಿದ್ಧಾರ್ಥ ಸಂಸ್ಥೆಯಿಂದ ಹೊರದಬ್ಬಲಾಯಿತು. ... ಕೈಹಿಡಿದು ಕಾಪಾಡಿದ ಆರ್.ಎಲ್. ಜಾಲಪ್ಪನವರನನ್ನೂ ಪರಮೇಶ್ವರ್ ...ಟ್ಟರು. ಇದ್ದ ಒಬ್ಬನೇ ಮಗನಿಗೆ ಇಟ್ಟ ಹೆಸರು ಶಶಾಂಕ್. ಅದೂ ...ನಾಮಧೇಯವೆ. ಶಶಾಂಕ್ ಭಾರತದ ಯಾವ ಸೋಂಕೂ ತಗುಲದೆ ...ಯೂದಲ್ಲೇ ಬೆಳೆದ. ಇಲ್ಲಿನ ಮಣ್ಣಿನ ವಾಸನೆ ಹಾಳಾಗಲಿ ಶಶಾಂಕ್‌ಗೆ ...ಸರೇ ಅಸಹ್ಯವಾಗಿ ತೀರ ಇತ್ತೀಚೆಗೆ ಅದನ್ನು **Shawn** ಎಂದು ...ಕೊಂಡ.

...ಲಿತ ಹಣೆಪಟ್ಟಿ ಹೊತ್ತೇ ಸರ್ಕಾರದ ಎಲ್ಲಾ ಮೀಸಲಾತಿ, ಸೌಲಭ್ಯ ... ಪರಮೇಶ್ವರ್ ತನ್ನ ಸಿದ್ಧಾರ್ಥ ಮೆಡಿಕಲ್ ಸಾಮ್ರಾಜ್ಯದ ಪಾಲಿಗೆ ...ನ್ನೆಂದೂ ಕಣ್ಣೆತ್ತಿ ನೋಡಿದವರಲ್ಲ. ಕನಿಷ್ಠ ವರ್ಷಕ್ಕೊಬ್ಬ ದಲಿತನನ್ನಾದರೂ ...' ಮಾಡಬಹುದಿತ್ತು. ಪರಮೇಶ್ವರ್ ಆಗಲಿ ಅವರ ಅಣ್ಣ ಶಿವಪ್ರಸಾದ್ ...ಯಾವತ್ತಿಗೂ ದಲಿತರತ್ತ ಕಣ್ಣೆತ್ತಿ ನೋಡಿದವರಲ್ಲ. ಉಚಿತ ಸೀಟು ...ವುದು ಹಾಳಾಗಲಿ ದಲಿತ ವಿದ್ಯಾರ್ಥಿಯೊಬ್ಬನಿಗೆ ಒಪ್ಪೊತ್ತಿನ ಊಟವನ್ನೂ ...ವಾಗಿ ಕಲ್ಪಿಸಿದವರಲ್ಲ.

...ವರರ್ಥ ಪರಮೇಶ್ವರ್‌ನ ಸಿದ್ಧಾರ್ಥ ಮೆಡಿಕಲ್ ಕ್ಯಾಂಪಸ್ಸೆಂಬುದು ದಲಿತ ...ತರಗಳ ಸಮಾಧಿಯೇ ಹೊರತು ಸೌಲಭ್ಯವಲ್ಲ. ಅದರ ಮೇಲೆ ಕೂತು ...ಶ್ವರ್ ಪಟಾಲಂ ಊಟ ಮಾಡುತ್ತಿದೆ. ಇನ್ನು ಮೆಡಿಕಲ್ ಕಾಲೇಜಿಗೆಂದು ...ಭೂಮಿಬಿಟ್ಟುಕೊಟ್ಟ ನೂರಾರು ದಲಿತರದ್ದೂ ನಾಯಿಪಾಡೆ. ನೆಟ್ಟಗೆ ...ರವಿಲ್ಲ. ಉದ್ಯೋಗ ಕಲ್ಪಿಸಲಿಲ್ಲ. ಜಮೀನು ಬಿಟ್ಟುಕೊಟ್ಟಿದ್ದಕ್ಕಾಗಿ ತಮ್ಮ ...ನಾದರೂ ಪ್ರವೇಶದಲ್ಲಿ ರಿಯಾಯಿತಿ ಕೇಳುವಂತಿಲ್ಲ. ಈ ಎಲ್ಲಾ ...ಗಳನ್ನೂ ತೂಕ ಹಾಕಿ ನೋಡಿದರೆ ಎಲ್ಲಾದರೂ ಪರಮೇಶ್ವರ್ ಸಾಹೇಬರ ...ಾಳಜಿ ಹಾಳಾಗಲಿ, ಕನಿಷ್ಠ ಸ್ವಜಾತಿ ಪ್ರೇಮವಾದರೂ ಗೋಚರಿಸಬೇಕಲ್ಲವೆ?

## ದಲಿತ ಶೋಷಕ!

...ಿ ರಾಜಕೀಯವಾಗಿ ಪರಮೇಶ್ವರ್ ಯಾರಾದರೂ ಒಬ್ಬ ದಲಿತನನ್ನಾದರೂ ...ರಾ ಎಂದು ಕೆದಕ ಹೊರಟರೆ ಕಾಣಿಸುವುದು ಆಸ್ಟ್ರೇಲಿಯಾ ಪ್ರಕಾಶ್, ...ಚಂದ್ರಶೇಖರ್, ಎಂ.ಸಿ. ವೇಣುಗೋಪಾಲ್, ಬೋಸರಾಜು, ಹುಸೇನ್ ...ಾದ ವೈಟ್‌ಕಾಲರ್ ಶೋಕಿಲಾಲರೆ. ಇವರ್‍ಯಾರೂ ದಲಿತರಲ್ಲ, ...ರಾಗಲಿ ಬಡವರಾಗಲಿ ಅಲ್ಲವೇ ಅಲ್ಲ. ಅಷ್ಟಕ್ಕೂ ಪರಮೇಶ್ವರ್ ಬಾಯಿಂದ ...ಮಂತ್ರ ಬರುತ್ತಿರುವುದು ಇತ್ತೀಚೆಗೆ ಅಂದರೆ ಕೇವಲ ಒಂದು ವರ್ಷದಿಂದ. ...ದ ಮೈದಾನದಲ್ಲಿ ಕೆಪಿಸಿಸಿ ಪರಿಶಿಷ್ಟ ಘಟಕದ ಸಮಾವೇಶದಲ್ಲಿ ಇದ್ದಕ್ಕಿದ್ದಂತೆ ... ದಲಿತರನ್ನು ಕಡೆಗಣಿಸಬಾರದೆಂದು ಗುಡುಗಿದರು. ಶ್ರೀನಿವಾಸ್ ಪ್ರಸಾದ್, ...ದೇವಪ್ಪ ಆಂಜನೇಯರಂಥ ದಲಿತ ಮಂತ್ರಿಗಳೇ ವೇದಿಕೆಯಲ್ಲಿದ್ದಾಗಲೂ ...ಮಾತ್ರವೇ ದಲಿತ ಎಂಬಂತೆ ಮಾತಾಡಿದ ಪರಮೇಶ್ವರ್ ಅವತ್ತು ...ಲಿಗೀಡಾಗಿದ್ದು ಬಿಟ್ಟರೆ ಯಾವೊಬ್ಬ ದಲಿತನೂ ಚಪ್ಪಾಳೆ ತಟ್ಟಲಿಲ್ಲ.

...ರಮೇಶ್ವರ್ ಪಾಲಿಗೆ ದಲಿತ ಎಂಬುದು ಕೇವಲ ಹಣೆಪಟ್ಟಿ ಮತ್ತು ... ಹಿಡಿಯುವ ತಂತ್ರ ಮಾತ್ರ. ಆಚರಣೆಯಲ್ಲಾಗಲಿ, ವ್ಯಕ್ತಿತ್ವದಲ್ಲಾಗಲಿ ... ದಲಿತ ಲಕ್ಷಣಗಳಿಲ್ಲ. ಮೊದಲಿಗೆ ಅಂಬೇಡ್ಕರ್‌ರ ಯಾವೊಂದು ...ನ್ನೂ ಓದಿಕೊಂಡವರಲ್ಲ, ಮೈಗೂಡಿಸಿಕೊಂಡವರಲ್ಲ. ಅವರ ಜೀವನಶೈಲಿ, ...ವಿಚಾರ ಎಲ್ಲವೂ ಎಸ್.ಎಂ. ಕೃಷ್ಣರನ್ನು ಅನುಕರಿಸುತ್ತದೆ. ಆಕ್ಸ್‌ಫರ್ಡ್ ...ಸ್ಟ್ರೇಲಿಯಾ ಪರಮೇಶ್ವರ್ ಜೋಡಿಯ ಬಗ್ಗೆ ಚೇಷ್ಟೆ ಮಾಡುವವರೂ ... ಪಕ್ಷದಲ್ಲೇ ಇದ್ದಾರೆ. ಪರಮೇಶ್ವರ್ ಬಗ್ಗೆ ಮಾಡುವ ಮತ್ತೊಂದು ...ಂದರೆ ಆತ ಎಸ್.ಎಂ. ಕೃಷ್ಣರ ಜೆರಾಕ್ಸ್ ಕಾಪಿ ಎಂಬುದು.

...ೆ, ರಂಗನಾಥ್, ಮುನಿಯಪ್ಪ, ಶ್ರೀನಿವಾಸ್ ಪ್ರಸಾದ್, ಆಂಜನೇಯ ...ದ ಅದೆಷ್ಟೋ ದಲಿತ ನಾಯಕರನ್ನು ಕಾಂಗ್ರೆಸ್ ಕಂಡಿದೆ. ಅವರಲ್ಲಿ ...ದಲಿತ ಲಕ್ಷಣಗಳಾದರೂ ಗೋಚರಿಸುತ್ತವೆ. ಆದರೆ ಪರಮೇಶ್ವರ್ ... ದಲಿತ ಎಂಬ ಪದವೇ ಆರೋಪದಂತಿದೆ. ದಲಿತರ ಹೆಸರಲ್ಲಿ ...ಮಿಂಗ್ ಮೆಡಿಕಲ್ ಕಾಲೇಜು ಗಿಟ್ಟಿಸಿಕೊಂಡರೇ ಹೊರತು ಒಬ್ಬೇ ...ದಲಿತರನ್ನು ಡಾಕ್ಟರ್-ಇಂಜಿನಿಯರ್ ಮಾಡಲಿಲ್ಲ. ದಲಿತರ ಜಮೀನು ... [illegible] ಗಾಡಿಪ್ಪ, ಕಟ್ಟಿದರೇ ಹೊರತು ಯಾವೊಬ್ಬ ದಲಿತನಿಗೂ ... [illegible] ರಾಜಕೀಯವಾಗಿ ದಲಿತರನ್ನು ಬೆಳೆಸಲಿಲ್ಲ. ... [illegible] ಕೂಡ ಹಾಕಲಿಲ್ಲ. ಪರಮೇಶ್ವರ್ ದಲಿತ ಶೋಷಕನೋ ... [illegible] ಎಂಬುದಕ್ಕೆ ಉಳಿಯುವ ಪ್ರಶ್ನೆ ಏನಿ?

● ರಾ. ಸೋಮನಾಥ್

# ಕ್ಲೈಮ್ಯಾಕ್ಸಲ್ಲಿ ಎಂತ ಆಕ್ಟ್ ಮಾಡಿದ್ದೀರಿ ಶಿವರಾಮ್!

## ಥೂತ್ತೇರಿ

ರಾಮಾವತಾರವೆತ್ತಿ ರಾವಣಾವತಾರದಲ್ಲಿ ವಿಜೃಂಭಿಸುತ್ತಿರುವ ಸ್ವಾಮಿಗಳವರು ಮಾಡಿರುವ ಭಕ್ತಿಯ ಪರಾಕಾಷ್ಠೆಯ ಕೃತ್ಯದಿಂದ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಶ್ರೀಮಂತ ಸೂಳೆಗಾರಿಕೆಯ ಮೇಲೆ ತೀವ್ರತರವಾದ ಪರಿಣಾಮ ಬೀರಿದೆಯಂತಲ್ಲ. ಬೆಂಗಳೂರಿನ ಹೆಸರಾಂತ ರಾಜಕಾರಣಿಗಳು, ಉದ್ಯಮಿಗಳು, ಸಿನಿಮಾದವರು ಮತ್ತು ಸಮಾಜದ ಗಣಮಾನ್ಯರೆಲ್ಲಾ ತಮ್ಮ ವಿಲಾಸಿ ಗಳಿಗೆಯ ಸಮಯದಲ್ಲಿ ಅಪೂರ್ವ ಸುಂದರಿಯರೊಂದಿಗೆ ಆಲಿಂಗನಗೊಂಡು ರಾತ್ರಿ ಕಳೆದು ಬೆಳಗ್ಗೆ ತಮ್ಮ ಎಂದಿನ ಸಮಾಜೋದ್ಧಾರದ ಸಂತೃಪ್ತಿ ಮುಖಭಾವದಲ್ಲಿ ನಿರ್ಗಮಿಸುತ್ತಿದ್ದದ್ದು ಸರ್ವೇಸಾಮಾನ್ಯವಾಗಿತ್ತು. ಆದರೆ ಈಗ ಗೋಣ್ಣೆಯಲ್ಲಿ ಸಿಕ್ಕಿಕೊಂಡ ನೋಣದಂತಾಗಿರುವ ಸ್ವಾಮೀಜಿಯವರ ಫಜೀತಿ ನೋಡಿದ ಗಣ್ಯರು ತಮ್ಮ ಜೊತೆ ರಾತ್ರಿ ಕಳೆದುಹೋಗಲು ಬಂದ ಹೆಣ್ಣುಗಳ ಪೂರ್ವಾಪರವನ್ನು ವಿಚಾರಿಸುತ್ತಿರುವುದಲ್ಲದೆ ರತಿ ಸುಖದ ನಂತರ ಆಕೆಯನ್ನು ಸಂಪೂರ್ಣ ಸ್ವಚ್ಛಗೊಳಿಸಿ, ಆಕೆಯ ಬಟ್ಟೆಗಳನ್ನೆಲ್ಲಾ ತಾವೇ ಇಟ್ಟುಕೊಂಡು, ಹೊಸ ಬಟ್ಟೆ ಕೊಡಿಸಿ, ಹೊಸ ಮೊಬೈಲ್ ಕೊಟ್ಟು ಕಳುಹಿಸುತ್ತಿದ್ದಾರಂತಲ್ಲಾ. ಅತ್ತ ಜನಾಂಗದ ಮರ್ಯಾದೆ, ಕೋರ್ಟಿನ ಮರ್ಯಾದೆ, ಮೀಡಿಯಾದ ಮರ್ಯಾದೆಯನ್ನೆಲ್ಲ ಮಣ್ಣುಪಾಲು ಮಾಡಿರುವ ಸ್ವಾಮಿ ವಿಲಾಸಿ ಜನರ ಬದುಕನ್ನ ದುಪ್ಪಟ್ಟು ಮಾಡಿರುವುದರಿಂದ ಅವರೂ ಕೂಡ ಸ್ವಾಮಿ ಸೆಕ್ಸ್ ಹಾಳಾಗ ಎಂದು ಶಾಪ ಹಾಕುತ್ತಿದ್ದಾರಂತಲ್ಲಾ, ಥೂತ್ತೇರಿ!

*******

ಇದ್ದಕ್ಕಿದ್ದಂತೆ ಖ್ಯಾತ ನಟ ಶಿವರಾಮ್ ಕ್ಷೇತ್ರದಲ್ಲಿ ಕಾಣಿಸಿಕೊಂಡ ದಲಿತ ಸಂಘದ ಬಲಿತರು, ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದುರನ್ನು ಇಳಿಸಿ ಪರಮೇಶ್ವರನನ್ನು ಪ್ರತಿಷ್ಠಾಪಿಸುವಂತೆ ಹೋರಾಟವನ್ನೇ ಹಮ್ಮಿಕೊಂಡಿದ್ದಾರಂತಲ್ಲಾ. ಈ ಬಗ್ಗೆ ಮಾತನಾಡಿಸಲು ಶಿವರಾಮ್‌ಗೆ ಫೋನ್ ಮಾಡಲಾಗಿ ರಿಂಗ್ ಆಯ್ತು.

ರಿಂಗ್ ಟೋನ್: "ಓಹೋ ಹಿಮಾಲಯ, ಓಹೋ ಹಿಮಾಲಯ, ಶಿವನ ಆಲಯ, ಪರಮೇಶ್ವರನಾಲಯ. . "

"ಹಲೋ ಯಾರು?"

"ಸಾರ್ ನಾನು, ಯಾಹೂ ಅಂತ. ನಿಮ್ಮ ಅಭಿಮಾನಿ. ಬಹಳ ಹಿಂದೆ ಫೋನ್ ಮಾಡಿದ್ದೆ ಗೊತ್ತಾ?"

"ಹೌದು. ಯಾವುದೋ ಸಭೆಗೆ ಕರದಿದ್ರಿ. ನಾನು ಬರಲಿಲ್ಲ."

"ಇರಲಿ ಬಿಡಿ. ಏನ್ಸಾರ್ ಇನ್ನೂ ನಿಮ್ಮ ಮೊಬೈಲಲ್ಲಿ 'ಬಾನಲ್ಲೆ ಮಧುಚಂದ್ರಕೆ' ಸಿನಿಮಾದ ಹಾಡೇ ಇದೆ?"

"ಆ ಚಿತ್ರದಿಂದಲೇ ನಾನು ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದು."

"ನಾನಂತೂ ಆ ಸಿನಿಮಾನ ಹಲವಾರು ಬಾರಿ ನೋಡಿದ್ದೆ ಸಾರ್. ಆಗ್ಲೆ ನಿಮ್ಮ ಅಭಿಮಾನಿಯಾಗಿದ್ದು."

"ನೀವಷ್ಟೇ ಅಲ್ಲ, ಒಂದು ಯುವ ಸಮೂಹವೇ ನನ್ನ ಅಭಿಮಾನಿಗಳಾಗಿದ್ರು. ಅವರನ್ನೆಲ್ಲ ಸೇರಿಸಿ ನಾನು 'ಶಿವರಾಮ್ ಸೇನೆ' ಮಾಡಿದೆ."

"ಆ ಸೇನೆನ ನಾನು ನೋಡಿದ್ದೆ ಸಾರ್. ಕೆಂಪೇಗೌಡ ರೋಡಲ್ಲಿ ನಿಮ್ಮ ಸ್ಟಾರ್ ಕಟೌಟನ್ನೆಲ್ಲ ಕಟ್ಟಿ ಎಷ್ಟೇ ಜೈಕಾರ ಹಾಕಿದ್ರೂ ನಿಮ್ಮ ಸಿನಿಮಾ ಓಡಲಿಲ್ಲ. ಬಹುಶಃ ಆ ಸೇನೆ ಇವತ್ತು ಸುಮಾರು ಐವತ್ತರ ಆಸುಪಾಸಿನಲ್ಲಿರಬಹುದು."

"ಹೌದು, ಈಗ್ಲೂ ನನ್ನನ್ನು ಆಕ್ಟ್ ಮಾಡಿ ಅಂತ ಒತ್ತಾಯಿಸುತ್ತಾ ಇರುತ್ತಾರೆ."

"ಕಲಾವಿದರಲ್ವಾ ಸಾರ್ ನೀವು. ಅದರಲ್ಲೂ 'ಬಾ ನಲ್ಲೆ ಮಧುಚಂದ್ರಕೆ' ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಎಷ್ಟು ಚೆನ್ನಾಗಿ ಅಭಿನಯಿಸಿದ್ರಿ ಶಿವರಾಮ್."

"ಯಾವ ಸೀನು ಹೇಳಿ?"

"ಅದೇ ಸಾರ್... ಮಧುಚಂದ್ರಕ್ಕೆ ಕರಕೊಂಡು ಹೋಗಿ, ಹೆಂಡತಿನ ಪ್ರಪಾತಕ್ಕೆ ನೂಕಿ, ಅಪರಾಧಿ ನೀವೇ ಅಂತ ಗೊತ್ತಾದಾಗ ಓಡ್ತೀರಲ್ಲ... ಆ ಸೀನನ್ನು ನಾನು ಇಂದಿಗೂ ಮರತಿಲ್ಲ ಸಾರ್."

"ಹೌದು, ಆ ಕ್ಷಣದಲ್ಲಿ ಆ ಪಾತ್ರವೇ ನಾನಾಗಿ ಓಡಿದೆ."

"ಅಧಿಕಾರಿಯಾಗಿ ಎಲ್ಲಾ ಇಲಾಖೆಲೂ ತಿಂದೂ ತಿಂದೂ ಓಡಿ ಓಡಿ ಈಗ ಜೆಡಿಎಸ್‌ಗೆ ಓಡಿಹೋಗಿದ್ದೀರಿ ಅಂತ ನಿಮ್ಮ ವೈರಿಗಳು ಮಾತಾಡ್ತಿದ್ದಾರೆ."

"ನನ್ನ ವಿರೋಧಿಗಳ ಮಾತನ್ನು ನಾನು ಎಂದೂ ನನ್ನ ಕಿವಿಗೆ ಹಾಕಿಕೊಂಡಿಲ್ಲ."

"ಹಾಕ್ಕೋಬಾರದು ಸಾರ್. ಹಂಗೆ ಹಾಕ್ಕೊಂಡಿದ್ರೆ ಸಿನಿಮಾ ತೆಗಿಯಕ್ಕಾಗ್ತಿತ್ತಾ?"

"ನನ್ನನ್ನು ಅಧಿಕಾರಿ ಅನ್ನದಕ್ಕಿಂತ್ಲೂ ಹೀರೋ ಅಂತ್ಲೆ ಜನ ಗುರುತಿಸ್ತಾರೆ."

"ಹೌದು ಸಾರ್. ನಿಮ್ಮನ್ನ ಹೀರೋ ಮಾಡಕ್ಕೆ ಬಹಳ ಇಲಾಖೆಗಳು ಶ್ರಮ ಪಟ್ಟವಂತೆ. ನೀವು ಒಳ್ಳೆ ಅಧಿಕಾರಿನೂ ಆಗ್ಲಿಲ್ಲವಂತೆ. ಒಳ್ಳೆ ನಟನೂ ಆಗ್ಲಿಲ್ಲವಂತೆ. ಒಳ್ಳೆ ರಾಜಕಾರಣಿನಾರ ಆಗ್ಲಿ ಅನ್ನೋದು ನಿಮ್ಮ ಅಭಿಮಾನಿಗಳ ಆಸೆಯಂತೆ ಸಾರ್."

"ನೋಡ್ರೀ, ಕನ್ನಡದಲ್ಲಿ ಐಎಎಸ್ ಮಾಡಿದ್ದೀನಿ. ಅಧಿಕಾರಿಯಾಗಿ ಬೇಕಾದಷ್ಟು ಕೆಲಸ ಮಾಡಿದ್ದೀನಿ. ಮೊಟ್ಟ ಮೊದಲ ದಲಿತ ಹೀರೋ ಆಗಿ ಆಕ್ಟ್ ಮಾಡಿದ್ದೀನಿ. ರಾಜಕಾರಣದಲ್ಲೂ ನೋಡ್ತಾ ಇರಿ."

"ಸಿದ್ದರಾಮಯ್ಯನನ್ನು ಇಳಿಸಿ ಪರಮೇಶ್ವರರನ್ನು ಮುಖ್ಯಮಂತ್ರಿ ಮಾಡಿದ ಮೇಲೆ ನೀವು ಯಾವ ಖಾತೆ ತಗೊಳ್ತೀರಿ ಸಾರ್?"

"ಅದು ಆಮೇಲೆ. ಈಗ ಮೊದ್ಲು ಸಿದ್ದರಾಮಯ್ಯನ್ನ ಇಳಿಸಬೇಕು."

"ಯಾಕಿಳಿಸಬೇಕು ಸಾರ್?"

"ಪರಮೇಶ್ವರ ಮುಖ್ಯಮಂತ್ರಿ ಆಗಬೇಕು."

"ಯಾಕೆ ಖರ್ಗೆ ಬೇಡವಾ? ಅವುರೇ ಅಲ್ಲವಾ ಸಿದ್ದರಾಮಯ್ಯನಿಗೆ ತಮ್ಮ ಸ್ಥಾನ ಬಿಟ್ಟುಕೊಟ್ಟಿದ್ದು?"

"ಖರ್ಗೆ ಕೇಂದ್ರದಲ್ಲವುರೆ. ಆದರೆ ಪರಮೇಶ್ವರ್ ಇಲ್ಲಿ ಪಾರ್ಟಿ ಪ್ರೆಸಿಡೆಂಟ್ ಆಗಿರೋದ್ರಿಂದ ಅವರನ್ನ ಉಳಿದಿರೋ ಅವಧಿಗೆ ಮುಖ್ಯಮಂತ್ರಿ ಮಾಡ್ಬೇಬೇಕು."

"ಉಳಿದಿರೋ ಅವಧಿ ಜಾಸ್ತಿ ಇದೆಯಲ್ಲಾ ಸಾರ್. ಅರ್ಧನಾದ್ರೂ ಆಗಬಾರದಾ?"

"ನಮ್ಮ ಹೋರಾಟ ಮುಗಿಯೋದ್ರಲ್ಲಿ ಅರ್ಧ ಆಗಿರುತ್ತೆ."

"ಸರಿ. ಒಂದೊರ್ಸನಾದ್ರೂ ಎಡಗೈನೋರು ಆಗಬಾರದಾ?"

"ಎಡಗೈ, ಬಲಗೈ ಅಂತ ಇಲ್ಲ, ನಮಗೆ ಎರಡೂ ಕೈಗಳು ಇವೆ."

"ನಾವೂ ಅಂಗೇ ಅಂದುಕೊಡಿದ್ವಿ ಸಾರ್. ಸ್ವಾತಂತ್ರ್ಯಾನಂತರ ಎಲ್ಲಾ ಸವಲತ್ತನ್ನೂ ಬಲಗೈನೋರೆ ಬಾಚಿ ಬಳದು ತಿನ್ನಕಂಡ್ರು ಅಂತ ಎಡಗೈ ಕೂಗಿದಾಲೆ ನಮಗೂ ಗೊತ್ತಾದದ್ದು."

"ಅದ್ಕೆ ನಾವೀಗ ಕೈಜೋಡಿಸಿದ್ದೀವಿ. ಸಿದ್ದರಾಮಯ್ಯನ್ನ ಇಳಿಸ್ತೀವಿ."

"ನೀವು ಜೆಡಿಎಸ್ ಲೀಡರಲ್ವಾ ಸಾರ್? ನಿಮಗೇನಕ್ಕದೆ ಸಿದ್ದರಾಮಯ್ಯನ ಇಳಿಸದಕ್ಕೆ?"

"ನಾನು ಜೆಡಿಎಸ್‌ನವನಾದ್ರೂ ದಲಿತ. ದಲಿತ್ರು ಯಾವುದೇ ಪಾರ್ಟಿಲಿದ್ರೂ ಎಲ್ಲರೂ ಒಂದೇ."


"ಲಿಂಗಾಯತ್ರೂ ಹಿಂಗೇ ಹೇಳಿ ಠರಾವನ್ನೂ ಪಾಸ್ ಮಾಡಿದ್ರೂ ಸಾರ್. ಆ ಜನಾಂಗದ ಸ್ವಾಮಿಗಳು ಕೂಡ ನಮ್ಮ ಜನಾಂಗದ ಲೀಡರ್‌ಗಳು ಯಾವುದೇ ಪಾರ್ಟಿಲಿದ್ರೂ ಅವುರಿಗೇ ಓಟ್ ಮಾಡಿ ಅಂದಿದ್ರು."

"ಅದೇ ತರ ನಾವೂ ಸಂಘಟನೆ ಆಗ್ಬೇಕು."


"ಅದು ಸಾಧ್ಯ ಇಲ್ಲಾ ಸಾರ್. ದಲಿತರು ಸುಭಾಷ್ ಭರಣಿ ಹೇಳಿದಂತೆ ಧರೆಗೇ ದೊಡ್ಡೋರು. ತುಂಬಾ ವಿಶಾಲ ಮನೋಭಾವದ ಜನ. ಈ ಲೋಕದ ಒಳಿತನ್ನೇ ಯಾವಾಗ್ಲೂ ಯೋಚನೆ ಮಾಡೋರು. ಅಂಥಾ ಜನರನ್ನ ಸಂಜೆ ಎಣ್ಣೆ ಪಾರ್ಟಿ ಲೀಡರ್‌ಗಳು ಬದ್ಲಾಯಿಸಕ್ಕಾಗಲ್ಲ. ಸಿದ್ದರಾಮಯ್ಯ ಒಂದು ರೂಪಾಯಿಗೆ ಕೇಜಿ ಅಕ್ಕಿ ಜೊತೆಗೆ ದಲಿತರ ಸಾಲಾನೂ ಮನ್ನಾ ಮಾಡಿದ. ಆಗ ಟ್ರ್ಯಾಕ್ಟರಿ, ಸೀಮೆ ಹಸು, ಬಾಡಿಗೆ ಕಾರಿನ ಸಾಲ ಮನ್ನ ಆಗಿ, ಅದರ ಜೊತೆಗೆ ಇನ್ನೂ ಏನೇನೋ ಸಾಲಗಳ್ಕೆಲ್ಲ ಚುಕ್ತ ಆಗಿ, ದಲಿತ್ರು ಸರ್ಕಾರಿ ಸಾಲದಿಂದ ಮುಕ್ತ ಆದ್ರು. ಜೊತೆಗೆ ಶ್ರೀನಿವಾಸ್ ಪ್ರಸಾದ್ ರೆವಿನ್ಯೂ ಮಂತ್ರಿ. ಮಹಾದೇವಪ್ಪ ಪಿಡಬ್ಲ್ಯೂ ಮಂತ್ರಿ. ಆಂಜನೇಯ, ಜಾರಕಿಹೊಳಿ ಇವರೆಲ್ಲ ಪ್ರಬಲ ಖಾತೆ ಮಂತ್ರಿಗಳು. ಇಂಥವನ್ನ ನಿಮ್ಮ ಪರಮೇಶ ಮಾಡಕ್ಕಾಗಲ್ಲ. ಅವ್ರುನೊಂತರ ದಲಿತ್ರಲ್ಲಿ ಶಾಮನೂರು ಶಿವಶಂಕರಪ್ಪ ಇದ್ದಂಗೆ. ಆದ್ರಿಂದ ನೀವೇನಾದ್ರು ದಲಿತನ್ನ ಮುಖ್ಯಮಂತ್ರಿ ಮಾಡಬೇಕು ಅನ್ನದಾದ್ರೆ ಖರ್ಗೆ ಅಗ್ಲಿ ಅನ್ನಬಹುದು. ಆ ಕಡೆ ಬಿಜೆಪಿಗಳು ರಣಹದ್ದಿನಂತೆ ಕಾಯ್ತಾ ಅವುರೆ. ಈ ಕಡೆ ಕುಟೀರಿಯೂ ಇಲ್ಲದ ಜೆಡಿಎಸ್‌ನೋರು ಸೇಡಿಗಾಗಿ ಕಾದವುರೆ. ಇಂತಾ ಸಮಯದಲ್ಲಿ ಏನ್ಸಾರ್ ಇಂತ ಕೆಲ್ಸ ಮಾಡಕ್ಕೊಂಟಿದ್ದೀರಾ?"

"ಇದೇ ಸೂಕ್ತವಾದ ಸಂದರ್ಭ ಕಂಡೀ."

"ಥೂತ್ತೇರಿ!!!" ●



# ಎನ್‌ಡಿಎ ಭೂಸ್ವಾಧೀನ ಸುಗ್ರೀವಾಜ್ಞೆ ಮತ್ತು ಜನಾಂದೋಲನ




ಮೂರು ದಿನಗಳ ಕೆಳಗೆ ಆರಂಭವಾದ ಸಂಸತ್ ಅಧಿವೇಶನಕ್ಕೆ ಮುಂಚೆ ಮೋದಿಯ ಸಂಪುಟ ಒಂದು ಸರ್ವಪಕ್ಷ ಸಭೆ ಏರ್ಪಡಿಸಿತ್ತು. ತನ್ನ ಪಕ್ಷದಲ್ಲೇ ಯಾರ ಮಾತನ್ನೂ, ಯಾವುದಕ್ಕೂ ಕೇಳುವ ಅಗತ್ಯವಿಲ್ಲ ಎಂದು ಭಾವಿಸಿರುವ ಮೋದಿ, ವಿರೋಧ ಪಕ್ಷಗಳ ಸಭೆ ಕರೆಯುತ್ತಾರೆ ಎಂದರೆ ಅರ್ಥವೇನು? ಬಹುಶಃ ಡಿಸೆಂಬರ್ 31, 2014ರಂದು ತನ್ನ ಸರ್ಕಾರ ಹೊರಡಿಸಿದ ಸುಗ್ರೀವಾಜ್ಞೆಗೆ ದೇಶಾದ್ಯಂತ ವ್ಯಕ್ತವಾಗುತ್ತಿರುವ ವಿರೋಧಕ್ಕೆ ಸರ್ಕಾರ ಸ್ವಲ್ಪ ಹಿಂಜರಿದಿರಬಹುದು. ಅಣ್ಣಾ ಹಜಾರೆ ನೇತೃತ್ವದಲ್ಲಿ ಈ ಅಧಿವೇಶನ ನಡೆಯುವ ಸಂದರ್ಭದಲ್ಲೇ ದೆಹಲಿಯಲ್ಲಿ ಪ್ರತಿಭಟನೆ ನಡೆಯಲು ರಂಗ ಸಿದ್ಧವಾಗಿದ್ದೂ ಸರ್ಕಾರಕ್ಕೆ ಸ್ವಲ್ಪ ನಡುಕ ಹುಟ್ಟಿಸಿರಬಹುದು. ತಾನು ದೇಶದ ಜನರಿಗೆ, ಅದಕ್ಕಿಂತ ಮುಖ್ಯವಾಗಿ ಕಾರ್ಪೋರೇಟ್‌ಗಳಿಗೆ ಬೆಟ್ಟದಷ್ಟು ಭರವಸೆಗಳನ್ನು ನೀಡಿ, ಅವುಗಳಲ್ಲಿ ಯಾವುದನ್ನೂ ಈಡೇರಿಸಿಲ್ಲ ಎಂಬ ಅಪಖ್ಯಾತಿಗೆ ಗುರಿಯಾಗುತ್ತಿದ್ದು ಅದರಿಂದ ಹೊರಬರುವ ಪ್ರಯತ್ನ ಸರ್ಕಾರದ್ದಾಗಿರಬಹುದು. ಏಕೆಂದರೆ, ಈ ಅಧಿವೇಶನವಿಡೀ ಕೇವಲ ಭೂಸ್ವಾಧೀನ ಕಾಯ್ದೆಯಲ್ಲಿಯೇ ಕಳೆದುಬಿಟ್ಟರೆ, ಎರಡೂ ಸದನಗಳ ವಿಶ್ವಾಸ ಗಳಿಸಿ ನಿರ್ಣಾಯಕವಾಗಿ ಮುಂದಡಿಯಿಡಲು ಆಗದೇಹೋಗಬಹುದು ಎಂಬ ಭಯ ಅದಕ್ಕೆ ಇರಬಹುದು ಇತ್ಯಾದಿ ಅಂದಾಜನ್ನು ಯಾರಾದರೂ ಮಾಡಿದ್ದರೆ ಅದು ಶುದ್ಧ ತಪ್ಪು ಎಂದು ಇದೇ ಫೆ.24ರಂದು ಮೋದಿಯ ಸಂಪುಟ ಸಾಬೀತುಪಡಿಸಿತು.

ಯಾವ ಸುಗ್ರೀವಾಜ್ಞೆಗೆ ದೇಶಾದ್ಯಂತ ವಿರೋಧ ವ್ಯಕ್ತವಾಗಿತ್ತೋ, ಅದರ ಕುರಿತು ಮೊದಲು ಚರ್ಚೆಯಾಗಬೇಕು ಎಂದು ಎಲ್ಲಾ ವಿರೋಧ ಪಕ್ಷಗಳೂ ಬಯಸಿದ್ದವು. ಆದರೆ, ಅದಕ್ಕೆ ಕನಿಷ್ಠ ಚರ್ಚೆ ಮಾಡಲೂ ಅವಕಾಶ ಕೊಡದೇ, ಅದೇ ಸುಗ್ರೀವಾಜ್ಞೆಯನ್ನು ಕಾಯ್ದೆಯಾಗಿಸುವ ತಿದ್ದುಪಡಿ ವಿಧೇಯಕವನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿ ಚೌಧುರಿ ಬೀರೇಂದ್ರ ಸಿಂಗ್ ಲೋಕಸಭೆಯಲ್ಲಿ ಮಂಡಿಸಿಯಾಗಿತ್ತು.

ಸಕಾರಣಗಳಿಗಾಗಿ ಕಾಂಗ್ರೆಸ್ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ಸರ್ಕಾರದ ಭೂಸ್ವಾಧೀನ ಸುಗ್ರೀವಾಜ್ಞೆಯನ್ನೇ ಕಾಯ್ದೆಯನ್ನಾಗಿಸಲು ಹೊರಟ ನೀತಿಯನ್ನು 'ಬುಲ್ಡೋಜಿಂಗ್' ಎಂದು ಕರೆದು ಸಭಾತ್ಯಾಗ ಮಾಡಿದರು. ಅದರಿಂದ ಸ್ವಲ್ಪವೂ ವಿಚಲಿತರಾಗದ ಮೋದಿ ಸರ್ಕಾರದ ಸಂಸದೀಯ ವ್ಯವಹಾರಗಳ ಸಚಿವ ಎಂದಿನಂತೆ ಕಣ್ಣು ಕೆಕ್ಕರಿಸಿಕೊಂಡು ನೋಡುತ್ತಾ, ಅತ್ಯಂತ ಕಟುವಾಗಿ 'ಅಲ್ಪಸಂಖ್ಯಾತರು ಬಹುಸಂಖ್ಯಾತರಿಗೆ ಏನು ಮಾಡಬೇಕೆಂದು ಹೇಳಲಾಗದು; ಅದು ಬುಲ್ಡೋಜಿಂಗ್' ಎಂದು ಘೋಷಿಸಿದರು. ಸಾಮಾನ್ಯವಾಗಿ ಈ ಖಾತೆ ಹೊಂದಿರುವವರು ಸಂಸತ್ ಕಲಾಪ ಸುಗಮವಾಗಿ ನಡೆಯುವ ಉದ್ದೇಶದಿಂದ, ಸ್ವಲ್ಪ ರಾಜಿ ಮಾತುಗಳನ್ನು ಆಡಬೇಕು. ಸರ್ಕಾರಕ್ಕೂ, ವಿರೋಧ ಪಕ್ಷಗಳಿಗೂ ಮಧ್ಯೆ ಸೇತುವೆಯಂತೆಯೂ ಕೆಲಸ ಮಾಡಬೇಕು. ಪ್ರಬುದ್ಧವಾಗಿ ನಡೆದುಕೊಳ್ಳಬೇಕು ಎಂದು ಬಯಸಲಾಗುತ್ತದೆ. ಆದರೆ ಸಚಿವ ವೆಂಕಯ್ಯ ನಾಯ್ಡು ಧಮಕಿ ಹಾಕುವಂತೆ ಮಾತನಾಡುತ್ತಿದ್ದರು. ನಾಯ್ಡುವಿನ ಹಿಂದೆಯೇ ಕೂತಿದ್ದ ಇನ್ನೊಬ್ಬ ಕೇಂದ್ರ ಮಂತ್ರಿ ರಾಜೀವ್ ಪ್ರತಾಪ್ ರೂಢಿ ವಿರೋಧಿ ಸಂಸತ್ಸದಸ್ಯರಿಗೆ ಬೆರಳು ತೋರಿಸುತ್ತಾ 'ಹುಷಾರ್' ಎನ್ನುತ್ತಿದ್ದ.

ಅದರಲ್ಲೇನೂ ಆಶ್ಚರ್ಯವಿರಲಿಲ್ಲ. ಏಕೆಂದರೆ, ಅಂದು ಬೆಳಗ್ಗೆ ತಾನೇ ಪ್ರಧಾನಿ ಮೋದಿ ಎಲ್ಲಾ ಬಿಜೆಪಿ ಸಂಸತ್ ಸದಸ್ಯರಿಗೆ ತನ್ನ ಹೊಸ ಕಾಯ್ದೆಯ ಪರವಾಗಿ ಸಂಸತ್ಸದಸ್ಯರೆಲ್ಲರೂ ಕಿರುಚಾಡಬೇಕು ಎಂದು ಅಪ್ಪಣೆ ಕೊಡಿಸಿದ್ದರು. ಅದೇ ದಿನ ಸಂಜೆ ತನ್ನ ಎನ್‌ಡಿಎ ಮೈತ್ರಿಕೂಟದ ಇತರ ಎಂಪಿಗಳಿಗೂ ಇದನ್ನೇ ಹೇಳುವವರಿದ್ದರು. ಅಷ್ಟಿದ್ದ ಮೇಲೆ ಸ್ವಯಂಸೇವಕ ವೆಂಕಯ್ಯನಾಯ್ಡು ಮತ್ತು ರಾಜೀವ್ ಪ್ರತಾಪ್ ರೂಢಿ ಇನ್ನೇನು ತಾನೇ ಮಾಡಲು ಸಾಧ್ಯವಿತ್ತು?

ಭೂಸ್ವಾಧೀನ ಸುಗ್ರೀವಾಜ್ಞೆಯೊಳಗೇನಿದೆ ಎಂಬುದನ್ನು ಈ ಲೇಖನದ ಜೊತೆಗಿನ ಬಾಕ್ಸ್‌ನಲ್ಲಿ ವಿವರಿಸಲಾಗಿದೆ. ಮೈಸೂರಿನ ಭೂಸ್ವಾಧೀನ ಮಸೂದೆ ತಿದ್ದುಪಡಿ ವಿರೋಧಿ ಸಮಿತಿಯವರ ಪುಸ್ತಕದಲ್ಲಿ ಕೊಟ್ಟಿರುವ ಆ ಕೋಷ್ಟಕವು ಮೋದಿಯ ಬದಲಾವಣೆಯ ವಿವರಗಳನ್ನು ಸ್ಪಷ್ಟಪಡಿಸುತ್ತದೆ.

ಸದರಿ ಸುಗ್ರೀವಾಜ್ಞೆಯು ಯುಪಿಎ ಸರ್ಕಾರವು 2013ರಲ್ಲಿ ತಂದ ಕಾಯ್ದೆಗೆ ಮಾಡಲಾದ ತಿದ್ದುಪಡಿಯೆಂಬುದನ್ನೂ, ಆ ಕಾಯ್ದೆಯು 1894ರಲ್ಲಿ ಬ್ರಿಟಿಷ್ ಸರ್ಕಾರ ತಂದ ಕಾಯ್ದೆಯ ಜಾಗದಲ್ಲಿ ಬಂತೆಂಬುದನ್ನೂ, ಅವೆಲ್ಲದರ ಹಿನ್ನೆಲೆಯನ್ನೂ ಕೆಳಗಿನ ಭಾಗವು ನಿಮಗೆ ವಿವರಿಸುತ್ತದೆ. ಆದರೆ, ಯಾವ 2013ರ ಕಾಯ್ದೆಯನ್ನು ಬುಡಮೇಲು ಮಾಡಲು ಬಿಜೆಪಿ ಸರ್ಕಾರವು ಈಗ ಸುಗ್ರೀವಾಜ್ಞೆ ಮತ್ತು ತಿದ್ದುಪಡಿಗಳನ್ನು ತರುತ್ತಿದೆಯೋ, ಆ ಯುಪಿಎ ಅವಧಿಯ ಕಾಯ್ದೆಗೆ ಬಿಜೆಪಿ ಪಕ್ಷವು ಸಂಸತ್ತಿನ ಎರಡೂ ಸದನಗಳಲ್ಲಿ ಸಂಪೂರ್ಣ ಒಪ್ಪಿಗೆ ನೀಡಿತ್ತು ಎಂಬುದನ್ನು ಮಾತ್ರ ನೆನಪಿನಲ್ಲಿಡಬೇಕು. ಚುನಾವಣೆಗೆ ಮುಂಚೆ ತಾನೇ ಎರಡೂ ಕೈಯೆತ್ತಿ ಅನುಮೋದಿಸಿದ ಕಾಯ್ದೆಯನ್ನು, ಘಾತುಕ ಬಹುಮತ ಸಿಕ್ಕಿದ ನಂತರ ತಿರುಗಾ ಮುರುಗಾ ಮಾಡಲು ಬಿಜೆಪಿ ಹೊರಟಿದೆ.

ಭಾರತದಲ್ಲಿ ಜಾರಿಯಲ್ಲಿರುವ ಹಲವಾರು ಕಾನೂನುಗಳು ಬ್ರಿಟಿಷ್ ಕಾನೂನುಗಳೇ. ಭೂಸ್ವಾಧೀನ ಕಾಯ್ದೆಯೂ ಅಂತಹುದ್ದೇ ಒಂದಾಗಿತ್ತು. 1894ರಲ್ಲಿ ಬ್ರಿಟಿಷರು ತಂದಿದ್ದ ಈ ಕಾಯ್ದೆಯು ಸರ್ಕಾರಕ್ಕೆ, ಜಿಲ್ಲಾಧಿಕಾರಿಗಳ ಮೂಲಕ ಹೊರಡಿಸುವ ಭೂಸ್ವಾಧೀನ ಆದೇಶದನ್ವಯ ಅಪರಿಮಿತ ಅಧಿಕಾರವನ್ನು ತರುತ್ತಿತ್ತು. ಜನರು ತಮಗೆ ಸಿಗಬೇಕಾದ ಪರಿಹಾರಕ್ಕಾಗಿ ಕೋರ್ಟ್ ಹೋಗಬಹುದಿತ್ತು, ಪ್ರಶ್ನಿಸಬಹುದಿತ್ತು, ಆದರೂ ಸರ್ಕಾ ಪರಮಾಧಿಕಾರ (eminent domain)ವೇ ಮೇಲುಗ ಸಾಧಿಸುತ್ತಿತ್ತು, ಇದರನ್ವಯ ನಡೆಯುತ್ತಿದ್ದ ಭೂಸ್ವಾಧೀನ ಜನರ ಬದುಕನ್ನು ಕಿತ್ತುಕೊಳ್ಳುತ್ತಿತ್ತು, ಹೀಗಾಗಿ ದಿನೇ ದಿನೇ ಭೂಸ್ವಾಧೀನ ವಿರೋಧಿ ಹೋರಾಟಗಳ ಹೆಚ್ಚಾಗುತ್ತಲೇ ಇದ್ದವು. ನರ್ಮದಾ ಅಣೆಕಟ್ಟು ವಿರೋ ಹೋರಾಟದಲ್ಲೂ ಭೂಸ್ವಾಧೀನಕ್ಕೆ ವಿರೋಧ ಮುಖ ಅಂಶವಾಗಿತ್ತು, ದಿನೇ ದಿನೇ ಈ ಹೋರಾಟಗಳು ಹಿಂಸಾತ್ಮ ರೂಪವನ್ನೂ ಪಡೆಯುತ್ತಾ ಹೋದವು. ಮಾವೋವಾದಿ


## ಮೈಸೂರಿನ ಭೂಸ್ವಾಧೀನ ಮಸೂದೆ ತಿದ್ದುಪಡಿ ವಿರೋಧಿ ಸಮಿತಿ ಪ್ರಕಟಿಸಿರುವ ಕಿರುಪುಸ್ತಿಕೆಯಿಂದ

| ಹಿಂದಿನ ಯುಪಿಎ ಸರ್ಕಾರದ ಭೂಸ್ವಾಧೀನ ಕಾಯ್ದೆ | ಹಾಲಿ ಎನ್‌ಡಿಎ ಸರ್ಕಾರದ ಸುಗ್ರೀವಾಜ್ಞೆ |
|---|---|
| ಸಾಮಾಜಿಕ ಸಮಗ್ರ ಪರಿಣಾಮಗಳ ಅಧ್ಯಯನದ ವರದಿ (Social Impact Assessment Report) ಕಡ್ಡಾಯ | ರಕ್ಷಣೆ, ಭದ್ರತೆ, ಮೂಲಸೌಕರ್ಯ, ಕೈಗಾರಿಕಾ ಕಾರಿಡಾರ್, ಸಾಮಾಜಿಕ ಮೂಲ ಸೌಕರ್ಯ ಮತ್ತು ಪಿಪಿಪಿ ಮಾದರಿ ಯೋಜನೆಗಳಿಗೆ ಕಡ್ಡಾಯ ಅಗತ್ಯವಿಲ್ಲ |
| ಪರಿಸರದ ಮೇಲೆ ಆಗುವ ಪರಿಣಾಮದ ವರದಿ (Environment Impact Assessment Report) ಕಡ್ಡಾಯ | ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನುಗಳಿಗೆ ಮಾತ್ರ ಈ ವರದಿ ಅವಶ್ಯಕತೆ |
| ನುರಿತ ತಜ್ಞರ ತಂಡದ ವರದಿ (Technical Expertise Committee Report) ಕಡ್ಡಾಯ | ಈ ವರದಿಯೇ ಬೇಕಿಲ್ಲ |
| ಜಿಲ್ಲಾಧಿಕಾರಿಗಳ ಸಮಗ್ರ ವರದಿ | ಈ ವರದಿ ಕಡ್ಡಾಯವೇನಿಲ್ಲ |
| ಸಾರ್ವಜನಿಕ ಯೋಜನೆಗಳಿಗೆ ಅಥವಾ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಯೋಜನೆಗಳಿಗೆ ಮತ್ತು ಖಾಸಗಿ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳಲು ಶೇ.70 ರಷ್ಟು ಭೂ ಸಂತ್ರಸ್ತರ ಒಪ್ಪಿಗೆ ಬೇಕು | ಭೂ ಸಂತ್ರಸ್ತರ ಒಪ್ಪಿಗೆ ಕಡ್ಡಾಯವಿಲ್ಲ |
| ಖಾಸಗಿ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳಲು ಶೇ.80 ರಷ್ಟು ಭೂ ಸಂತ್ರಸ್ತರ ಒಪ್ಪಿಗೆ ಬೇಕು | ಭೂ ಸಂತ್ರಸ್ತರ ಒಪ್ಪಿಗೆ ಕಡ್ಡಾಯವಿಲ್ಲ |
| ಖಾಸಗಿ ಆಸ್ಪತ್ರೆ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರದಿಂದ ಭೂಸ್ವಾಧೀನಪಡಿಸಿಕೊಳ್ಳಲು ಈ ಕಾಯ್ದೆಯಲ್ಲಿ ಅವಕಾಶವಿಲ್ಲ | ಖಾಸಗಿ ಆಸ್ಪತ್ರೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರ ಭೂಸ್ವಾಧೀನಪಡಿಸಿಕೊಂಡು ಈ ವಲಯಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ |
| ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮತ್ತು ಎನ್‌ಜಿಓಗಳಿಗೆ ಲೇಔಟ್ ಮಾಡಲು ಅಥವಾ ಸ್ವಂತ ಜಾಗ ಹೊಂದಲು ಅವಕಾಶವಿಲ್ಲ | ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮತ್ತು ಎನ್‌ಜಿಓಗಳಿಗೆ ಲೇಔಟ್ ಮಾಡಲು ಅಥವಾ ಸ್ವಂತ ಜಾಗ ಹೊಂದಲು ತಿದ್ದುಪಡಿ ತಂದಿರುವ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಅವಕಾಶ ಕಲ್ಪಿಸಲಾಗಿ |
| ಬಹು ಬೆಳೆ ಬೆಳೆಯುವ ಭೂಮಿಯನ್ನು ಜಿಲ್ಲೆಯ ಒಟ್ಟು ಭೂಮಿಯ ಶೇ.5 ರಷ್ಟು ಮಾತ್ರ ಭೂಸ್ವಾಧೀನಪಡಿಸಿಕೊಳ್ಳಲು ಅವಕಾಶ | ಬಹು ಬೆಳೆ ಬೆಳೆಯುವ ಭೂಮಿಯನ್ನು ಶೇ.100 ರಷ್ಟು ಭೂಸ್ವಾಧೀನಪಡಿಸಿಕೊಳ್ಳಲು ಅವಕಾಶ |
| ಭೂಸ್ವಾಧೀನ ಆಗಿ 5 ವರ್ಷವಾದರೂ ಬಳಕೆಯಾಗದಿದ್ದರೆ, ಮೂಲ ಭೂಮಾಲೀಕರಿಗೆ ಭೂಮಿ ಹಿಂತಿರುಗಿಸಬೇಕು | ನಿಗದಿತ ಅವಧಿ ಮೀರಿದರೂ, ಸರ್ಕಾರ ಯೋಜನೆಗೆ ಭೂಮಿಯನ್ನು ಬಳಸದಿದ್ದರೂ, ಅದನ್ನು ದೀರ್ಘಕಾಲ ತನ್ನ ಬಳಿಯೇ ಇಟ್ಟುಕೊಳ್ಳಬಹುದು |
| ಸಾರ್ವಜನಿಕರ ಆಕ್ಷೇಪಣೆಗಳಿಗೆ ಅವಕಾಶ ನೀಡಿ, ಅವುಗಳನ್ನು ಪರಿಗಣಿಸಬೇಕು | ಬೇಕಿಲ್ಲ |
| ಫಲವತ್ತಾದ ನೀರಾವರಿ ಜಮೀನನ್ನು ಸ್ವಾಧೀನಪಡಿಸಿಕೊಂಡರೆ, ಪರಿಹಾರ ದೊಡನೆ ಎರಡು ಪಟ್ಟು ಜಮೀನನ್ನು ರೈತರಿಗೆ ಬೇರೆ ಕಡೆ ನೀಡಬೇಕು | ಅನ್ವಯಿಸುವುದಿಲ್ಲ |
| ಭೂಸ್ವಾಧೀನಪಡಿಸಿಕೊಳ್ಳುವಾಗ, ಪ್ರಾಥಮಿಕ ಅಧಿಸೂಚನೆ, ಅಂತಿಮ ಅಧಿಸೂಚನೆಗಳ ನಂತರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಬೇಕು | ಭೂಸ್ವಾಧೀನ ಅಧಿಸೂಚನೆಯ 30 ದಿನದೊಳಗೆ ಭೂಮಿಯನ್ನು ವಶಪಡಿಸಿಕೊಳ್ಳಬಹುದು |
| ಭೂಸ್ವಾಧೀನಪಡಿಸಿಕೊಳ್ಳುವಾಗ, ಸಾರ್ವಜನಿಕರ ಆಕ್ಷೇಪಣೆಗಳಿಗಾಗಿ, ಪತ್ರಿಕೆಗಳಲ್ಲಿ, ವೆಬ್‌ಸೈಟ್‌ಗಳಲ್ಲಿ ಮತ್ತು ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟಿಸಬೇಕು | ಈ ಯಾವ ನಿರ್ಬಂಧವೂ ಇಲ್ಲ |
| ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟಿಸುವುದಕ್ಕಿಂತ ಮುಂಚೆ ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಸಭೆಗಳ ಅನುಮತಿ ಕಡ್ಡಾಯ | ಬೇಕಿಲ್ಲ |
| ಭೂಮಿಯನ್ನೇ ನೆಚ್ಚಿಕೊಂಡು ಜೀವನ ನಡೆಸುವವರಿಗೆ, ಕುಟುಂಬದಲ್ಲಿ ಒಬ್ಬರಿಗೆ ಆ ಸಂಸ್ಥೆಯಲ್ಲಿ ಕೆಲಸ ನೀಡಬೇಕು | ಅನ್ವಯಿಸುವುದಿಲ್ಲ |
| ಸಾರ್ವಜನಿಕರ ಆಕ್ಷೇಪಣೆಗಳನ್ನು ಸ್ವೀಕರಿಸಲು ಬಹಿರಂಗಸಭೆಯನ್ನು ಆಯೋಜಿಸಿ, ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಬೇಕು | ಅನ್ವಯಿಸುವುದಿಲ್ಲ |
| ಭೂಮಿ ಖರೀದಿಸುವವರು ಮುಂಗಡವಾಗಿ ಹಣವನ್ನು ರೈತರ ಹೆಸರಿನಲ್ಲಿ ಡಿಪಾಸಿಟ್ ಮಾಡಿರಬೇಕು | ಅನ್ವಯಿಸುವುದಿಲ್ಲ |
| ಭೂಮಿಗೆ ಪರಿಹಾರ ನೀಡುವಾಗ ಹಾಲಿ ಇರುವಂತಹ ಮಾರ್ಕೆಟ್ ಬೆಲೆಯನ್ನು ಪರಿಗಣಿಸಬೇಕು. ಮಾರ್ಕೆಟ್ ಬೆಲೆಯನ್ನು ನಿಗದಿಪಡಿಸುವಾಗ ಅಕ್ಕಪಕ್ಕದ ಊರುಗಳಲ್ಲಿರುವ ಗರಿಷ್ಠ ಬೆಲೆಯನ್ನು ತೆಗೆದುಕೊಳ್ಳಬೇಕು | ಅನ್ವಯಿಸುವುದಿಲ್ಲ |
| ಪರಿಹಾರದ ಮಾನದಂಡ: ಮಾರುಕಟ್ಟೆ ಬೆಲೆ + ಶೇ.100 ರಷ್ಟು Solatium + xly by 2 (ಗ್ರಾಮೀಣ ಪ್ರದೇಶ) ಅಥವಾ xly by 3 (ನಗರ ಪ್ರದೇಶ) + ಬಿಲ್ಡಿಂಗ್/ ಮರ ಗಿಡಗಳಿಗೆ ಪ್ರತ್ಯೇಕ ಪರಿಹಾರ | ಉದ್ಯಮಿಗಳು-ರೈತರ ನಡುವೆ ದರ ನಿಷ್ಕರ್ಷೆ ಬಗ್ಗೆ ಮಾತುಕತೆಗೆ ಅವಕಾಶ ಕಲ್ಪಿಸಲಾಗಿದೆ |
| ಮನೆ ಕಳೆದುಕೊಂಡರೆ, ಪರ್ಯಾಯ ಮನೆಯನ್ನು ನಿರ್ಮಿಸಿಕೊಡಬೇಕು | ಅನ್ವಯಿಸುವುದಿಲ್ಲ |
| ಭೂಸ್ವಾಧೀನ ವಶಪಡಿಸಿಕೊಳ್ಳುವ ರೈತ ಜಮೀನು ಇಲ್ಲದ ರೈತನಾದರೆ, ಇವನ ಬದುಕಿಗೆ ಬೇರೆ ಸ್ಥಳದಲ್ಲಿ ಪರ್ಯಾಯ ಜಮೀನು ನೀಡಬೇಕು | ಅನ್ವಯಿಸುವುದಿಲ್ಲ |
| ಭೂಮಿ ಕಳೆದುಕೊಂಡ ಕುಟುಂಬಕ್ಕೆ, ಕನಿಷ್ಠ 1 ವರ್ಷವಾದರೂ ಮಾಸಿಕ 3000/ ರೂ. ನಂತೆ ಜೀವನಾಂಶ ನೀಡಬೇಕು. | |
| ಪ.ಜಾ/ಪ.ಪಂ ದವರಿಗೆ ಹೆಚ್ಚುವರಿ 50,000/- ನೀಡಬೇಕು | ಅನ್ವಯಿಸುವುದಿಲ್ಲ |
| ಭೂಮಿ ಕಳೆದುಕೊಂಡ ಕುಟುಂಬದವರು, ಇವರ ಸರಕುಗಳನ್ನು ಸಾಗಿಸಲು 50,000/- ರೂ. ಸಾರಿಗೆ ವೆಚ್ಚ ನೀಡಬೇಕು | ಅನ್ವಯಿಸುವುದಿಲ್ಲ |
| ಭೂಮಿ ಕಳೆದುಕೊಂಡ ಕುಟುಂಬದವರಿಗೆ, ಜಾನುವಾರುಗಳ ಪರಿಹಾರವೆಂದು 50,000/- ರೂ. ಗಳನ್ನು ನೀಡಬೇಕು | ಅನ್ವಯಿಸುವುದಿಲ್ಲ |
| One-time-Resettlement ಎಂದು 50,000/- ರೂ. ಗಳನ್ನು ನೀಡಬೇಕು | ಅನ್ವಯಿಸುವುದಿಲ್ಲ |
| ಪರ್ಯಾಯ ಭೂಮಿ ಮತ್ತು ಕಟ್ಟಡಗಳ ನೋಂದಣಿ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ | ಅನ್ವಯಿಸುವುದಿಲ್ಲ |

...ಬೆಳೆಯಲೂ ಸಹ 1894ರ ಭೂಸ್ವಾಧೀನ ...ಯೇ ಕಾರಣ ಎಂದು ಹಲವು ಹೇಳಲಾರಂಭಿಸಿದರು. ...ದೇ ಅವಧಿಯಲ್ಲಿ ಜಾಗತೀಕರಣ ನೀತಿಗಳ ಕಾರಣಕ್ಕೆ ... ಮತ್ತು ವಿದೇಶಗಳ ಕಾರ್ಪೊರೇಟ್ ಕಂಪನಿಗಳಿಗೆ ...ಗಳು ಹತ್ತಾರು ಸಾವಿರ ಎಕರೆಗಳನ್ನು ರೈತರಿಂದ ...ಸಿಕೊಡಲಾರಂಭಿಸಿದವು. ಸರ್ಕಾರದ ಈ ನೀತಿ ... ಜನಹೋರಾಟಗಳ ತೀವ್ರತೆ ಹೆಚ್ಚುತ್ತಲೇ ಹೋದವು. ...ಗಾಳದ ಸಿಂಗೂರು ಮತ್ತು ನಂದಿಗ್ರಾಮಗಳ ...ರಾಟ ಈ ಭೂಸ್ವಾಧೀನ ವಿರೋಧಿ ಹೋರಾಟದ ...ತ ಪ್ರತೀಕಗಳಾದವು. ಹೋರಾಟಗಳು, ಸಂಘಟನೆಗಳ ...ತಿಕ ಪ್ರತಿರೋಧ ಎಲ್ಲವೂ ಸೇರಿ, ಸರ್ಕಾರಗಳು ... ನಿಲುವನ್ನು ಬದಲಿಸಿಕೊಳ್ಳುವ ಹಂತಕ್ಕೆ ಬಂದಿತು.

... ಅಧ್ಯಯನದ ಪ್ರಕಾರ (Standard ...rtered research) 1894ರ ಕಾಯ್ದೆಯನ್ವಯ ...ಧೀನ ಮಾಡಿಕೊಳ್ಳಬೇಕಾದ ಯೋಜನೆಗಳಲ್ಲಿ ಜನರ ...ರಾಟದ ಕಾರಣಕ್ಕೆ ನಿಂತುಹೋದ ಯೋಜನೆಗಳ ...ಣ 2007ರಲ್ಲಿ ಶೇ.5.55 ಇದ್ದದ್ದು 2012-13ರ ...ಗೆ ಶೇ.11.3ಕ್ಕೆ ಏರಿತು. ಈ ಎಲ್ಲಾ ಕಾರಣಗಳಿಂದಾಗಿ, ...ಎ ಸರ್ಕಾರದ ಅವಧಿಯಲ್ಲಿ ಹೊಸದೊಂದು ...ಯ ಅಗತ್ಯ ತಲೆದೋರಿತು.

...ಯುಪಿಎ ಸಂಪುಟದಲ್ಲಿ ಜನಪರವಾದ ನೀತಿಗಳನ್ನು ...ಷ್ಟು ಮಟ್ಟಿಗಾದರೂ ತರಲೇಬೇಕು, ಆ ಮೂಲಕ ...ಕಾಲದ ಪ್ರಜಾತಾಂತ್ರಿಕ ಆಶೋತ್ತರಗಳಿಗೂ ಒಂದಷ್ಟು ...ಕೊಟ್ಟು (ಸಮಾಜವಾದದ ನಿಲುವಲ್ಲ) 'ಅಭಿವೃದ್ಧಿ' ...ವಬೇಕು ಎನ್ನುವ ಗುಂಪು ಮತ್ತು ನಿಷ್ಠುರವಾಗಿ ...ರೇಟ್ ಕಂಪನಿಗಳ ಪರವಾದ ನೀತಿ ಅನುಸರಿಸಬೇಕು ... ಗುಂಪು ಎರಡೂ ಇದ್ದವು. ಮೊದಲ ಗುಂಪಿನ ... ಮೇಲುಗೈ ಪಡೆದು 2013ರ ಸೆಪ್ಟೆಂಬರ್‌ನಲ್ಲಿ ... ಕಾಯ್ದೆ ಜಾರಿಗೆ ಬಂದಿತು. ಅದನ್ನು 'ಭೂಸ್ವಾಧೀನ, ...ರ್ಸತಿ ಮತ್ತು ಪರಿಹಾರದಲ್ಲಿ ಪಾರದರ್ಶಕತೆ ಮತ್ತು ...ಯುತ ಪರಿಹಾರವನ್ನು ಪಡೆದುಕೊಳ್ಳುವ ಹಕ್ಕು ... 2013' ಎಂದು ಕರೆಯಲಾಯಿತು. ಮಸೂದೆಯನ್ನು



...ಸಿದ ಜೈರಾಂ ರಮೇಶ್ ಪ್ರಕಾರ ಇದನ್ನು ಕೇವಲ ...ಧೀನ ಕಾಯ್ದೆ ಎಂದು ಮಾತ್ರ ಕರೆಯಲಾಗಿತ್ತು. ... ಮಸೂದೆಯೊಳಗೆ ಇದ್ದ ಜನಪರ ಅಂಶಗಳು, ...ಯನ್ನು ಕಳೆದುಕೊಳ್ಳುವ ರೈತರ ಹಕ್ಕನ್ನು ಎತ್ತಿಹಿಡಿದ ... ಇತ್ಯಾದಿಗಳ ಕಾರಣದಿಂದ ರಾಹುಲ್‌ಗಾಂಧಿಯ ...ದೆಯ ಮೇರೆಗೆ ಕಾಯ್ದೆಯ ಹೆಸರನ್ನು ಮೇಲ್ಕಂಡಂತೆ ...ಸಲಾಗಿತ್ತು.

...ಸ್ತವದಲ್ಲಿ 1894ರ ಕಾಯ್ದೆಗೆ ಹೋಲಿಸಿದರೆ, ಈ ...ಯು ಆ ರೀತಿಯ 'ಭಾರೀ' ಜನಪರ ...ವಣೆಗಳನ್ನು ಹೊಂದಿದ್ದುದು ನಿಜವಾಗಿತ್ತು. ...ಲ್ಲಿರುವ ಅಂಶಗಳನ್ನು ನೋಡಿ). ಶೇ.70 (ಸರ್ಕಾರೀ ...ಜನೆಗಳಿಗೆ) ಮತ್ತು ಶೇ.80 (ಖಾಸಗಿ ...ಜನೆಗಳಿಗೆ)ರಷ್ಟು ಭೂಸಂತ್ರಸ್ತರ ಒಪ್ಪಿಗೆ ಇಲ್ಲದೇ ...ಧೀನ ಮಾಡಿಕೊಳ್ಳುವಂತಿಲ್ಲ, ಶೇ.5ಕ್ಕಿಂತ ಹೆಚ್ಚು ...ಳಿ (multicrop) ಬೆಳೆಯುವ ಜಮೀನನ್ನು ...ಸಿಕೊಳ್ಳುವಂತಿಲ್ಲ, ಮಾರುಕಟ್ಟೆ ಬೆಲೆಗಿಂತ 2ರಿಂದ ...ಟ್ಟು ಹೆಚ್ಚು ದರ ಕೊಡಲೇಬೇಕು ಇತ್ಯಾದಿ ಒಳ್ಳೆಯ ...ಳು ಅದರಲ್ಲಿ ಇದ್ದವು.

...ದರೆ ಇದರಲ್ಲಿ ಸಮಸ್ಯೆಗಳಿರಲಿಲ್ಲವೆಂದೇನಲ್ಲ. ...ವಾಗಿ ಸಂತ್ರಸ್ತರ ಪರವಾಗಿ ಹೋರಾಡುತ್ತಿದ್ದ ...ಟನೆಗಳು ಇದರಲ್ಲಿ ಕೆಲವು ಸಮಸ್ಯೆಗಳನ್ನು ...ಸಿದವು. ಆ ಸಂದರ್ಭದಲ್ಲಿ ಭೂಸ್ವಾಧೀನ ವಿರೋಧಿ ...ಟದ ಕಾರಣಕ್ಕೂ, ಪ.ಬಂಗಾಳದಲ್ಲಿ ಗೆಲುವು ...ದ್ದ ತೃಣಮೂಲ ಕಾಂಗ್ರೆಸ್ ಈ ಕಾಯ್ದೆಯನ್ನೂ ...ಟ್ಟು, ಹಾಗೆ ನೋಡಿದರೆ, ಈ ಕಾಯ್ದೆಯನ್ನು ... ವಿರೋಧಿಸಿದ್ದ ಏಕೈಕ ಪಕ್ಷ ಅದಾಗಿತ್ತು, ಅದರ ... ಓ ಬ್ರಯಾನ್ ಮೊನ್ನೆ ಎನ್‌ಡಿಎ ಸರ್ಕಾರಕ್ಕೆ ... ಹೇಳಿದರು 'ನಾವು ಯುಪಿಎ ಕಾಯ್ದೆಯನ್ನೇ ...ದ್ದೆವು. ಈಗ ಅವರೇ ದೇವತೆಗಳಂತೆ ...ರೆ!

... ಪಕ್ಷ ತಂದಿದ್ದ, ಇದ್ದುದರಲ್ಲಿ ಜನಪರವಾಗಿದ್ದ ... ಈಗಿರುವ 'ಬೂಟ್ ಮುಬಾರಿಟ'ಯಿಂದ ... ತಿದ್ದುಪಡಿ ಹೊಸ ಕಾಯ್ದೆಯನ್ನು ತರಲು ...ರ್ಕಾರಕ್ಕೆ ಸಾಧ್ಯವಿತ್ತು, ಆದರೆ, ಅದು ಅಲ್ಲಿಯವರೆಗೆ ...ದ್ದರಲಿಲ್ಲ, ಬದಲಿಗೆ ಡಿಸೆಂಬರ್ 31ರಂದು [illegible]

[illegible]

ಪ್ರಕಾರ, ಅಂತಹ ಸುಗ್ರೀವಾಜ್ಞೆಯ ಮೂಲಕ ಬಂದದ್ದು 6 ತಿಂಗಳ ಒಳಗೆ ಸಂಸತ್‌ನ ಒಪ್ಪಿಗೆ ಪಡೆಯಬೇಕು. ರಾಜ್ಯಸಭೆಯ 245 ಸದಸ್ಯರಲ್ಲಿ ಈಗಲೂ 57 ಸದಸ್ಯರನ್ನು ಮಾತ್ರ ಎನ್‌ಡಿಎ ಹೊಂದಿದೆ. ಈ ತಿದ್ದುಪಡಿಯನ್ನು ಎನ್‌ಡಿಎ ಅಂಗಪಕ್ಷಗಳಾದ ಶಿವಸೇನೆ, ಅಕಾಲಿದಳ ಹಾಗೂ ಹೇತ್ವರಿ ಸಂಘಟನೆಗಳೂ ವಿರೋಧಿಸುತ್ತಿವೆ. ಅವುಗಳ ಬೆಂಬಲ ಪಡೆಯುವುದು ಮೊಂಬಾನಿ-ಮೊದಾನಿ ಸರ್ಕಾರಕ್ಕೇನೂ ಕಷ್ಟವಾಗಲಿಕ್ಕಿಲ್ಲ, ಆದರೆ, ಒಂದು ವೇಳೆ ರಾಜ್ಯಸಭೆಯ ಇತರೆಲ್ಲಾ ಪಕ್ಷಗಳೂ ಒಗ್ಗಟ್ಟಾಗಿ ಬಿಟ್ಟರೆ, ಎರಡೂ ಸದನಗಳ ಜಂಟಿ ಅಧಿವೇಶನ ಕರೆದು, ಅಲ್ಲಿ ಒಪ್ಪಿಗೆ ಪಡೆಯುವ ಇನ್ನೊಂದು ಒಳದಾರಿಯೂ ಸರ್ಕಾರಕ್ಕಿದೆ.

ಸಂಸತ್‌ಅನ್ನು ಬಿಟ್ಟು ನೀವು ಸುಗ್ರೀವಾಜ್ಞೆಯ ದಾರಿ ಅನುಸರಿಸಿದ್ದು ತಪ್ಪು ಎಂಬ ವಾದವನ್ನು ಮಾತ್ರ ಕೆಲವರು ಮಾಡುತ್ತಿದ್ದಾರೆ. ಇವರಲ್ಲಿ ಕಾಂಗ್ರೆಸ್‌ನವರೂ ಕೆಲವರಿದ್ದಾರೆ. ಇದು ಸರ್ಕಾರಕ್ಕೆ ಒಳ್ಳೆಯದನ್ನೇ ಮಾಡುತ್ತದೆ. ಯುಪಿಎ ಸರ್ಕಾರ ತಂದಿದ್ದ ಕಾಯ್ದೆಯನ್ನು ಕೆಲವು ಕಾಂಗ್ರೆಸ್ ಸರ್ಕಾರಗಳೂ ಒಪ್ಪಿರಲಿಲ್ಲ, ಅಂಬಾನಿ ಮತ್ತು ಇತರ ಕಾರ್ಪೊರೇಟ್ ಏಜೆಂಟರು ಕಾಂಗ್ರೆಸ್‌ನೊಳಗೂ ಇದ್ದುದಕ್ಕೆ ಅದೂ ಒಂದು ಸಾಕ್ಷಿ. ಸ್ವತಃ ಮಹಾರಾಷ್ಟ್ರದ ಒಬ್ಬ ಕಾಂಗ್ರೆಸ್ ಸಚಿವ ಕೇಂದ್ರ ಸರ್ಕಾರಕ್ಕೆ ಈ ಕುರಿತು ಪತ್ರವನ್ನೂ ಬರೆದುಬಿಟ್ಟಿದ್ದ. ಅಂತಹವರಿಗೆ ಇದು ಕೇವಲ ಸಂಸದೀಯ ವಿಧಾನದ ದೋಷ ಮಾತ್ರ.

ಅದಕ್ಕೆ ಉತ್ತರ ಕೊಡಲು ಮೋದಿ ಸರ್ಕಾರ ಸಿದ್ಧವಾಗಿ ಬಂದಿತ್ತು, ಇದುವರೆಗೆ ಬಂದಿರುವ 639 ಸುಗ್ರೀವಾಜ್ಞೆಗಳಲ್ಲಿ ಶೇ.80 ಕಾಂಗ್ರೆಸ್ ಅವಧಿಯಲ್ಲೇ ಬಂದಿವೆ ಎಂಬುದು ಹಣಕಾಸು ಸಚಿವ ಅರುಣ್ ಜೇಟ್ಲಿಯ ಅಂಬೋಣ. ಈ ದೇಶವನ್ನು ಶೇ.80ಕ್ಕೂ ಹೆಚ್ಚು ಕಾಲ ಅವರೇ ಆಳಿದ್ದಾರೆ ಎಂಬುದೂ ಇವರದ್ದೇ ಮಾತು. ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಕಾಲದಲ್ಲಿ 70 ಸುಗ್ರೀವಾಜ್ಞೆಗಳನ್ನು ಹೊರಡಿಸಲಾಗಿತ್ತು ಎಂತಲೂ ಜೇಟ್ಲಿ ಹೇಳಿದರು. ಈ ದೇಶದ ಹಿಂದಿನ ನಾಯಕರಲ್ಲಿ ಕೆಲವರನ್ನು ಅಮಾನ್ಯಗೊಳಿಸುತ್ತಾ ಸಾಗಿರುವ ಸಂಘಪರಿವಾರದ ಸದ್ಯದ ಪ್ರಧಾನ ಟಾರ್ಗೆಟ್ ಜವಾಹರಲಾಲ್ ನೆಹರೂ ಅವರಾಗಿದ್ದಾರೆ. ಗಾಂಧಿಯೂ ಪಕ್ಕದಲ್ಲೇ ಇದ್ದಾರೆ. ನಂತರ ಅಂಬೇಡ್ಕರರನ್ನೂ, ಆ ನಂತರ ಭಗತ್‌ಸಿಂಗ್‌ನನ್ನೂ ಮುಗಿಸಿಬಿಟ್ಟರೆ ಹೆಗಡೇವಾರ್, ಗೋಲ್ವಾಲ್ಕರ್ ಮತ್ತು ಸಾವರ್ಕರ್‌ಗಳನ್ನು ಮಾತ್ರ ಕೂರಿಸುವುದು ಅವರಿಗೆ ಸುಲಭವಾಗುತ್ತದೆ. ಸಂದರ್ಭದ ಕಾರ್ಯಕಾರಣ ಔಚಿತ್ಯಗಳನ್ನು ಹೊರಗಿಟ್ಟು, ಮೊದಲ 15 ವರ್ಷಗಳ ನೆಹರೂ ಅವರನ್ನೂ ಎಳೆದು ತಂದು ಸುಗ್ರೀವಾಜ್ಞೆಯನ್ನು ಸಮರ್ಥಿಸಿಕೊಳ್ಳಲು ಬಿಜೆಪಿ ಹೊರಟಿತು. ಜೆಡಿಯು ಸಂಸದ 'ಕಾಂಗ್ರೆಸ್ ಮಾಡಿದ ತಪ್ಪಿಗೆ, ಅದು ಇಂದು ಎಲ್ಲಿರಬೇಕಿತ್ತೋ ಅಲ್ಲಿದೆ. ನಿಮ್ಮನ್ನು ಜನರು ಯಾಕೆ ಅಧಿಕಾರಕ್ಕೆ ತಂದಿದ್ದು? ಕಾಂಗ್ರೆಸ್ ಮಾಡಿದ ತಪ್ಪುಗಳನ್ನು ಪುನರಾವರ್ತನೆ ಮಾಡಲಿಕ್ಕಾ?' ಎಂಬ ಪ್ರಶ್ನೆಯನ್ನು ಕೇಳುವವರೆಗೂ ಜೇಟ್ಲಿವಾದ ನಿಲ್ಲಲಿಲ್ಲ.

2005ರ ಮಾಹಿತಿ ಹಕ್ಕು ಕಾಯ್ದೆ, 2005ರ ನರೇಗಾ ಕಾಯ್ದೆ, 2006ರ ಅರಣ್ಯ ಹಕ್ಕು ಕಾಯ್ದೆ, 2009ರ ಶಿಕ್ಷಣ ಹಕ್ಕು ಕಾಯ್ದೆ, 2013ರ ಆಹಾರ ಭದ್ರತಾ ಕಾಯ್ದೆಗಳು ತನ್ನ ಕಿರೀಟದ ಗರಿಗಳೆಂದು ಯುಪಿಎ ಹೇಳಿಕೊಳ್ಳುತ್ತದೆ. ಇದರಲ್ಲಿ ಹೆಚ್ಚೆಂದರೆ ಶೇ.25ರಷ್ಟು ಜನಪರವಾಗಿರುವುದರಲ್ಲಿ ಅನುಮಾನವಿಲ್ಲ, ಉದಾಹರಣೆಗೆ ಶಿಕ್ಷಣ ಹಕ್ಕು ಕಾಯ್ದೆಯು ಶಿಕ್ಷಣದ ಖಾಸಗೀಕರಣಕ್ಕೆ ಅನುವು ಮಾಡಿಕೊಡುವ ಕಾಯ್ದೆ ಎಂಬ ವ್ಯಾಪಕ ಟೀಕೆ ಈಗಾಗಲೇ ಎದುರಿಸುತ್ತಿದೆ. ಆದರೂ ಎನ್‌ಡಿಎ ಸರ್ಕಾರ ಶೇ.100 ಜನವಿರೋಧಿ ಕಾಯ್ದೆಗಳನ್ನು [illegible]ರಿಗೆ ತರಲು ಹೊರಟಾಗ ಪ್ರಮುಖ ವಿರೋಧಪಕ್ಷ ಕಾಂಗ್ರೆಸ್‌ಗೆ ಅದನ್ನು ಸಮರ್ಥವಾಗಿ ಎದುರಿಸುವ ದಮ್ಮೇ ಇಲ್ಲದಂತಾಗಿದೆ. ಅದರ ಹುರಿಯಾಳು ರಾಹುಲ್ ಗಾಂಧಿ ಪತ್ತೆಯೇ ಇಲ್ಲದಂತೆ ಅಡಗಿ ಕೂತಿದ್ದಾರೆ.

ಬ್ರಿಟಿಷರ ಕಾಯ್ದೆಗಿಂತಲೂ ಕರಾಳವಾದ ಸುಗ್ರೀವಾಜ್ಞೆಯನ್ನು ಹೊರಡಿಸಿದ ಮೋದಿ ಸರ್ಕಾರ ಈಗ ಅದನ್ನು ಕಾಯ್ದೆ ಮಾಡಿಕೊಳ್ಳಲು ಕಟಿಬದ್ಧವಾಗಿದೆ. ಸಂಸತ್ತಿನೊಳಗೆ ಇದರ ವಿರುದ್ಧ ನಡೆಸಬೇಕಾದ ಹೋರಾಟದ ಮುಂಚೂಣಿ ತಲೆಯಾಳು ಪತ್ತೆಯಿಲ್ಲ. ಹೊರಗೆ ಜಂತರ್‌ಮಂತರ್‌ನ ಅಣ್ಣಾ ಹಜಾರೆ ನೇತೃತ್ವದ ಹೋರಾಟಕ್ಕೆ ಕಾರ್ಪೊರೇಟ್ ಮಾಧ್ಯಮಗಳ ಬೆಂಬಲ ಎಷ್ಟರಮಟ್ಟಿಗೆ ಸಿಗುತ್ತೋ ಗೊತ್ತಿಲ್ಲ. ವಾಸ್ತವದಲ್ಲಿ ಜನಪರ ವಿರುದ್ಧ ನಡೆಸಿದ ಸ್ವಾತಂತ್ರ್ಯ ಸಂಗ್ರಾಮದಷ್ಟೇ ತಾಕತ್ತು ಹೊಂದಿರುವ ಹೋರಾಟ ಇದಾಗಿದೆ. ನಾವೆಲ್ಲರೂ ಎಷ್ಟರಮಟ್ಟಿಗೆ ಸಿದ್ಧರಿದ್ದೇವೆ ಎನ್ನುವುದೇ ಪ್ರಶ್ನೆ. ■

# ದಾಸೋಹ ಧರ್ಮದ ಶರಣಬಸವೇಶ್ವರರು





ಹನ್ನೆರಡನೆಯ ಶತಮಾನದ ಶರಣರು ತಮ್ಮನ್ನು ತಾವು ನೋಡಿಕೊಳ್ಳಲು ಆತ್ಮಮುಖಿಗಳಾದರು. ತಮ್ಮನ್ನು ಸಕಲ ಜೀವರಾಶಿಯಲ್ಲಿ ನೋಡುವುದಕ್ಕಾಗಿ ಜೀವಾತ್ಮಮುಖಿಗಳಾದರು. ತಮ್ಮನ್ನೇ ಸಮೂಹದಲ್ಲಿ ಕಾಣುವುದಕ್ಕಾಗಿ ಸಂಗಾತ್ಮ ಮುಖಿಗಳಾದರು. ತಮ್ಮನ್ನು ತಾವು ಅನಂತವಾಗಿ ಕಾಣುವುದಕ್ಕಾಗಿ ಪರಮಾತ್ಮಮುಖಿಯಾದರು. ಅಹಂಕಾರವು ಮಾನವನನ್ನು ವಿನಾಶದ ಕಡೆಗೆ ಒಯ್ಯುವುದು; ದಯೆಯಿಂದ ಮಾತ್ರ ಈ ಲೋಕ ಮುನ್ನಡೆಯಲು ಸಾಧ್ಯ ಎಂಬುದನ್ನು ಲೋಕಕ್ಕೆ ಸಾರಿದರು.

ಶರಣಬಸವೇಶ್ವರರು (1746-1822) ಈ ಪರಂಪರೆಯೊಂದಿಗೆ ಮುನ್ನಡೆದು ಆದರ್ಶಮೂರ್ತಿಗಳಾದರು. ಶರಣರ ತತ್ತ್ವದ ಮೂಲ ಸೆಲೆ ಕಾಯಕ ಮೂಲದಿಂದ ಬರುವ ದಾಸೋಹದಲ್ಲಿರುವುದನ್ನು ಶರಣಬಸವೇಶ್ವರರು ನಡೆನುಡಿಗಳ ಮೂಲಕ ಸಾರಿದರು. ದಾಸೋಹ ತತ್ತ್ವದಲ್ಲಿ ಅಹಂಕಾರವಿಲ್ಲ, ಸ್ವಾರ್ಥ ಇಲ್ಲ, ಮಾನವ ಕುಲದ ಸೇವೆಯೇ ದೇವರ ಸೇವೆ ಎಂಬುದು ದಾಸೋಹ ತತ್ತ್ವದ ಆತ್ಮವಾಗಿದೆ. ಅನ್ನ ದಾಸೋಹ, ಜ್ಞಾನ ದಾಸೋಹ, ಒಟ್ಟಾರೆ ಜೀವಕಾರುಣ್ಯದ ದಾಸೋಹ ಶರಣ ಬಸವೇಶ್ವರರು ನೀಡಿದ ಬಳುವಳಿಗಳಾಗಿವೆ.

ಶರಣ ಬಸವೇಶ್ವರರು ಜೇವರಗಿ ತಾಲ್ಲೂಕಿನ ಅರಳಗುಂಡಿಗೆಯಲ್ಲಿ ಲಿಂಗವಂತರ ಮನೆಯಲ್ಲಿ ಜನಿಸಿದರು. ತಾಯಿ ಸಂಗಮ್ಮ, ತಂದೆ ಮಲಕಪ್ಪ ಮನೆತನದ ಗುರುಗಳಾದ ಕಲಕೇರಿಯ ಮರುಳಸಿದ್ಧರ ಅಪ್ಪಣೆಯಂತೆ ಮಗುವಿಗೆ ಶರಣಬಸವಪ್ಪ ಎಂದು ನಾಮಕರಣ ಮಾಡಲಾಯಿತು.

ಅವರ ದೊಡ್ಡಪ್ಪ ಆದಪ್ಪ ಶರಣರು ಬಾಲ ಶರಣಬಸವೇಶ್ವರರಿಗೆ ಲಿಂಗಾಯತ ಮಠದಲ್ಲಿ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದರು. ಅಲ್ಲಿ ಅವರಿಗೆ ಶರಣ ಸಂಕುಲದ ಚಿಂತನಮಂಥನದ ಪರಿಚಯವಾಯಿತು. ಅವರು ಸಹಜವಾಗಿಯೇ ಅಧ್ಯಾತ್ಮದ ಕಡೆಗೆ ಹೊರಳಿದರು. ಸಂಸಾರದಲ್ಲಿದ್ದುಕೊಂಡೇ ಅನುಭಾವಿಗಳಾಗುವ ದಾರಿಯನ್ನು ಶರಣರು ತೋರಿಸಿಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಗುರು ಮರುಳಸಿದ್ಧರು ಮದುವೆ ಮಾಡಿಕೊಳ್ಳಲು ಸೂಚಿಸಿದರು. ಗುರುಗಳ ಮಾತನ್ನು ಶರಣಬಸವೇಶ್ವರರು ಪಾಲಿಸಿದರು. ಅವರ ಧರ್ಮಪತ್ನಿ ಮಹಾದೇವಮ್ಮನವರು ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮದ ಬಾವಿಮನೆ ಶಾಂತಲಿಂಗಪ್ಪನವರ ಮಗಳು. ಮದುವೆ ಸಂದರ್ಭದಲ್ಲಿ ಶರಣಬಸವೇಶ್ವರರಿಗೆ 12 ವರ್ಷ. ಮಹಾದೇವಮ್ಮನವರಿಗೆ 4 ವರ್ಷ. ಶರಣಬಸವೇಶ್ವರರು ಸದಾ ದಾಸೋಹ ಕಾರ್ಯದಲ್ಲಿ ತಲ್ಲೀನರಾಗಿರುತ್ತಿದ್ದರು. ಸಹೋದರರು ಕೊನೆಗೆ ಪಾಲು ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದರು. ಪಾಲಾದಾಗ ಹಾಳು ಮನೆ ಮತ್ತು ಕರಿಕೆ ಹೊಲ ಈ ಶರಣದಂಪತಿಗೆ ಬಂದವು. ಆದರೆ ಶರಣಬಸವೇಶ್ವರರ ಮಹಾದಾಸೋಹಕ್ಕೆ ಕುಂದುಂಟಾಗಲಿಲ್ಲ.

ದಾಸೋಹಕ್ಕಾಗಿ ಅವರು ಮನೆತನದ ಕೃಷಿ ಕಾಯಕವನ್ನೇ ಮುಂದುವರಿಸಿದರು. ಕಾಯಕ ಜೀವಿಗಳಾದ ರೈತಾಪಿ ಜನರನ್ನೆಲ್ಲ ಶರಣರಂತೆ ಕಾಣತೊಡಗಿದರು. ಅವರ ಕಾಯಕನಿಷ್ಠೆಯಿಂದಾಗಿ ಕರಿಕೆ ಹೊಲ ಸ್ವಚ್ಛಗೊಂಡು ಫಲವತ್ತಾದ ಹೊಲವಾಯಿತು. ಅವರು ತಮ್ಮ ಹೊಲದ ರಕ್ಷಣೆಗೆ ಬೇಲಿ ಹಾಕಲಿಲ್ಲ, ಕಾಳು ತಿನ್ನುವ ಹಕ್ಕಿಗಳನ್ನು ಕವಣೆಯಿಂದ ಓಡಿಸಿ ತೆನೆಗಳ ರಕ್ಷಣೆ ಮಾಡಲಿಲ್ಲ, ಹಕ್ಕಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆಯನ್ನೂ ಮಾಡಿದರು. ಅವರು ಲಿಂಗಾರ್ಚನೆಗಾಗಿ ಉದುರಿ ಬಿದ್ದ ಬಿಲ್ವಪತ್ರಿಗಳನ್ನು ಆಯ್ದು ತರುತ್ತಿದ್ದರು. ನಿಸರ್ಗ ರಕ್ಷಣೆ ಹೇಗೆ ಮಾಡಬೇಕು ಮತ್ತು ನಿಸರ್ಗದಿಂದ ಹೇಗೆ ಪಡೆಯಬೇಕು ಎಂಬುದನ್ನು ಇಂಥ ಜೀವಕಾರುಣ್ಯದ ಮನಸ್ಸು ಮಾತ್ರ ಅರಿಯಬಲ್ಲದು. ಅವರು ತಮ್ಮ ತ್ಯಾಗ ಮನೋಭಾವದಿಂದ ಕಳ್ಳರ ಮನಸ್ಸನ್ನೂ ಪರಿವರ್ತಿಸಿದರು.

## ಮಡಿವಾಳಪ್ಪನವರಿಗೆ ಅಯ್ಯಾಚಾರ

ಅಫಜಲಪುರ ತಾಲ್ಲೂಕಿನ ಬಿದನೂರಿನಲ್ಲಿ ಮಲ್ಲಿಕಾರ್ಜುನಪ್ಪಗೌಡ ಎಂಬ ಸದ್ಭಕ್ತರಿದ್ದರು. ಮಡಿವಾಳಪ್ಪನವರು ಹುಟ್ಟುವ ಮೊದಲೇ ಅವರ ವಿಧವಾ ತಾಯಿ ಗಾಣಿಗೇರ ಗಂಗಮ್ಮ ಮತ್ತು ಅಜ್ಜ, ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣದಿಂದ ಬಿದನೂರಿಗೆ ಬಂದಿದ್ದರು. ಬರಗಾಲದಿಂದ ಬೇಸತ್ತು ಬಂದ ಅವರಿಗೆ ಮಲ್ಲಿಕಾರ್ಜುನಪ್ಪಗೌಡರು ಆಸರೆ ನೀಡಿದರು. ಮುಂದೆ ಗಂಗಮ್ಮನ ತಂದೆ ತೀರಿಕೊಂಡನಂತರ ಅವರನ್ನು ಚಿಣಮಗೇರಿಯ ಶಾಖಾ ಮಠವಾದ ಬಿದನೂರಿನ ಮಠದಲ್ಲಿ ಇರಿಸಿದರು. ಯೌವನದಿಂದ ತುಂಬಿದ ವಿಧವೆ ಗಂಗಮ್ಮ ಒಂಟಿಯಾಗಿ ಮನೆಯಲ್ಲಿರಬಾರದು ಎಂಬ ಉದ್ದೇಶ ಅವರದಾಗಿತ್ತು. ಆಗ ವಿರೂಪಾಕ್ಷಸ್ವಾಮಿ ಬಿದನೂರಿನ ಮಠಾಧಿಪತಿಯಾಗಿದ್ದ. ಆಕೆ ಮಠದಲ್ಲಿದ್ದ ಸಂದರ್ಭದಲ್ಲೇ ಕಡಕೋಳ ಮಹಾದೇವಪ್ಪನವರ ಜನನವಾಯಿತು!

ಚಿಣಮಗೇರಿಯ ಗುರುಬಸವದೇವರು ಮಡಿವಾಳಪ್ಪನವರಿಗೆ ಲಿಂಗದೀಕ್ಷೆ ಮಾಡಿದರು.


ಮಡಿವಾಳಪ್ಪನವರು ದೀಕ್ಷೆಯ ವಯಸ್ಸಿಗೆ ಬಂದಾಗ ದೀಕ್ಷೆ ಕೊಡಲು ಯಾವ ಸ್ವಾಮಿಯೂ ಮುಂದೆ ಬರಲಿಲ್ಲ. ಮಡಿವಾಳಪ್ಪನವರ ತಾಯಿ ಗಾಣಿಗಳು. ತಂದೆ ಜಂಗಮ ಆಗಿರುವುದರಿಂದ ಅವರಿಗೆ ಅಯ್ಯಾಚಾರ ಮಾಡಲು ಸಾಧ್ಯವಿಲ್ಲ. ಜಂಗಮದೀಕ್ಷೆಯಾದರೆ ಮಡಿವಾಳಪ್ಪ ಮಠದ ಸ್ವಾಮಿಯಾಗುವ ಅರ್ಹತೆ ಪಡೆಯುವುದರಿಂದ ಅವರಿಗೆ ದೀಕ್ಷೆ ನೀಡಬಾರದು ಎಂಬುದೇ ಅವರೆಲ್ಲರ ಇಚ್ಛೆಯಾಗಿತ್ತು. ಆದರೆ ಮಡಿವಾಳಪ್ಪನವರನ್ನು ಬಿದನೂರಿನ ಮಠದ ಸ್ವಾಮಿ ಮಾಡುವ ಆಶಯ ಹೊಂದಿದ್ದ ಮಲ್ಲಿಕಾರ್ಜುನಪ್ಪಗೌಡರು ಕಡಕೋಳ ಮಡಿವಾಳಪ್ಪನವರನ್ನು ಶರಣಬಸವೇಶ್ವರರ ಬಳಿ ಕರೆದುಕೊಂಡು ಬಂದರು. ಶರಣಬಸವೇಶ್ವರರು ತಮ್ಮ ಗುರುಗಳಾದ ಮರುಳಸಿದ್ಧರಿಂದ ಮಡಿವಾಳಪ್ಪನವರಿಗೆ ಅಯ್ಯಾಚಾರದ ದೀಕ್ಷೆ ಕೊಡಿಸಲು ಪ್ರಯತ್ನಿಸಿದರು. ಆದರೆ ಹಳಪ್ಯಾಟಿ ಬಸಯ್ಯಾ ಮತ್ತು ಅರಳಗುಂಡಗಿ ಮಲ್ಲನಗೌಡ ಈ ಅಯ್ಯಾಚಾರ ದೀಕ್ಷೆಯನ್ನು ವಿರೋಧಿಸಿದರು. ಕೊಲೆಯ ಬೆದರಿಕೆ ಹಾಕಿದರು. ಹೀಗಾಗಿ ಮಡಿವಾಳಪ್ಪನವರಿಗೆ ಕೊನೆಯವರೆಗೂ ಜಂಗಮದೀಕ್ಷೆಯಾಗಲೇ ಇಲ್ಲ. ಆದರೆ ಮಹಾ ಮೇಧಾವಿ ಆದರೆ ಕಡಕೋಳ ಮಡಿವಾಳಪ್ಪನವರು ತತ್ತ್ವಪದಕಾರರ ಮಧ್ಯೆ ಮಹಾರಾಜರಂತೆ ಕಂಗೊಳಿಸಿದರು. ಅವರು ನೇರ ಭಾಷೆ ಎಲ್ಲ ರೀತಿಯ ಕಂದಾಚಾರಗಳನ್ನು ನಿರ್ನಾಮ ಮಾಡುವ ಶಕ್ತಿಯನ್ನು ಹೊಂದಿದೆ.

## ಮರು ಮದುವೆ

ಶರಣಬಸವೇಶ್ವರರಿಗೆ ಒಂದು ಮಗು ಜನಿಸಿತು. ಆದರೆ ಮಗು ಬದುಕುಳಿಯಲಿಲ್ಲ. ಪತ್ನಿ ಮಹಾದೇವಮ್ಮನವರು ಕೂಡ ಲಿಂಗೈಕ್ಯರಾದರು. ನೀವಿನ್ನೂ ತರುಣನಾಗಿರುವಿರಿ ನಿಮ್ಮದು ದಾಸೋಹ ಧರ್ಮ. ಈ ಧರ್ಮ ಕಾರ್ಯಕ್ಕೆ ಸಹಧರ್ಮಿಣಿಯ ಅವಶ್ಯಕತೆ ಇದೆ ಎಂದು ಹಿರಿಯರು ಮನವೊಲಿಸಿದರು. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಯಳ ಮೇಲಿಯ ನಾಸಿ ಅವರ ಮನೆತನದ ಚೆನ್ನಬಸವಮ್ಮನವರು ಶರಣಬಸವೇಶ್ವರರ ಎರಡನೆಯ ಧರ್ಮಪತ್ನಿಯಾದರು.ಊರಲ್ಲಿನ ದುಷ್ಟ ಶಕ್ತಿಗಳಿಂದಾಗಿ ಶರಣಬಸವೇಶ್ವರರು ಅರಳಗುಂಡಿಗೆಯನ್ನು ಬಿಡಬೇಕಾಯಿತು. ಅವರು ಕಲ್ಯಾಣಕ್ಕೆ ಹೊರಟರು. ಆಗ ದೊಡ್ಡಪ್ಪ ಶರಣರು ಕಲ್ಬುರ್ಗಿಯ ಬ್ರಹ್ಮಪುರ ಪ್ರದೇಶದ ಗೌಡರಾಗಿದ್ದರು. ಅವರು ದಾಸೋಹಿ. ದೊಡ್ಡಪ್ಪ ಶರಣರಿಂದಾಗಿ ಶರಣಬಸವೇಶ್ವರರಿಗೆ ಕಲ್ಬುರ್ಗಿ ಪವಿತ್ರವಾದ ಕ್ಷೇತ್ರವೆನಿಸಿತು. ಇಲ್ಲಿಯೇ ದಾಸೋಹ ಪರಂಪರೆಯನ್ನು ಮುಂದುವರಿಸಿದರು. ಮಾನವತೆಯ ಪವಾಡ ಪುರುಷರಾಗಿ ಪ್ರಸಿದ್ಧರಾದರು. ಗುಲ್ಬರ್ಗದಲ್ಲಿನ ಸೂಫಿ ಸಂತ ಬಂದಾ ನವಾಜ್ ಅವರ ದರ್ಗಾಕ್ಕೆ ಭೇಟಿ ನೀಡಿ ಭಾವೈಕ್ಯಕ್ಕೆ ನಾಂದಿಹಾಡಿದರು. ಶರಣಬಸವೇಶ್ವರರು ತಮ್ಮ 76ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು. ಕಲಬುರ್ಗಿಯಲ್ಲಿ ಶರಣಬಸವೇಶ್ವರರ ಕರ್ತೃ ಗದ್ದುಗೆ ಹಾಗೂ ದಾಸೋಹಮನೆ ಇರುವ ಸ್ಥಳವನ್ನು ಅಲ್ಲಿನ ದೇಶಮುಖ ಮನೆತನದವರು ಕೊಟ್ಟಿದ್ದು ಕೂಡ ವಿಶೇಷವಾಗಿದೆ.

ಅವರು ಹಚ್ಚಿದ ದೀಪವು ಗುಲ್ಬರ್ಗದ ಶರಣಬಸವೇಶ್ವರ ಸಂಸ್ಥಾನದ ಮಹಾಮನೆಯಲ್ಲಿ ಇಂದಿಗೂ ಬೆಳಗುತ್ತಿದೆ. ಸಕಲ ಜೀವಾತ್ಮರಿಗೆ ಲೇಸನ್ನೇ ಸಾರುತ್ತಿದೆ.

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿ ಶರಣಬಸವೇಶ್ವರರ 500 ರಷ್ಟು ತೋರುಗದ್ದುಗೆಗಳಿವೆ. ಇವರು ಈ ರಾಜ್ಯಗಳ ರೈತಸಮುದಾಯದ ಆರಾಧ್ಯ ದೈವವಾಗಿದ್ದಾರೆ. ಏನೂ ಬರೆಯದ ಈ ರೈತ, ನಡೆಯ ಮೂಲಕ ಶರಣ ತತ್ತ್ವದ ಮಹತ್ವವನ್ನು ಸಾರಿದರು. ದೇಶದ ಆರು ಲಕ್ಷ ಹಳ್ಳಿಗಳ ಅಭಿವೃದ್ಧಿ ಹೇಗೆ ಮಾಡಬೇಕು ಎಂಬ ರಹಸ್ಯ ಶರಣ ಬಸವೇಶ್ವರರ ರೈತಾಪಿ ಸಂಸ್ಕೃತಿಯಲ್ಲಿ ಅಡಕವಾಗಿದೆ. ರೈತರಿಂದ ಭೂಮಿಯನ್ನು ಕಸಿದುಕೊಂಡು ಉದ್ದಿಮೆಗಳನ್ನು ಸ್ಥಾಪಿಸಲೆತ್ನಿಸುವವರು ದೇಶವನ್ನು ಅಧೋಗತಿಗೆ ಒಯ್ಯುವುದರಲ್ಲಿ [illegible]. ಇಂಥ [illegible] ಶರಣ ಬಸವೇಶ್ವರರ ರೈತ [illegible]



■ ರಂಜಾನ ದರ್ಗಾ




# 'ಪಾಪಿ'ಗಳ ಸ್ನೇಹದಲ್ಲಿ

ನ.ರಾ.ಪುರ ಜೈಲಿಗೆ ತದ್ವಿರುದ್ಧ ಚಿಕ್ಕಮಗಳೂರು ಜೈಲು. ಅದು ಖಾಲಿ ಹೊಡೆಯುತ್ತಿದ್ದರೆ ಇದು ತುಂಬಿ ತುಳುಕುತ್ತಿರುತ್ತದೆ. 3 ದೊಡ್ಡ ಬ್ಯಾರಕ್ಕುಗಳು, ನಾಲ್ಕೈದು ಮಂದಿ ಇರುವ 2 ಮೀಡಿಯಂ ಸೆಲ್‌ಗಳು, 8 ಸಿಂಗಲ್ ಸೆಲ್‌ಗಳು ಇವೆ. ನಾನು ಬ್ಯಾರಿಕ್ಕಿನಲ್ಲೇ ಇರುತ್ತೇನೆ ಎಂದೆ. ಬೇಡ, ಸಿಂಗಲ್ ಸೆಲ್‌ನಲ್ಲಿಯೇ ಇರಿ ಎಂದರು. ಸಿಂಗಲ್ ಸೆಲ್ ಎಂದರೆ ಅದೊಂದು ಶಿಕ್ಷೆ ಎಂದುಕೊಂಡಿದ್ದೆ. ಆದರೆ ಇಲ್ಲಿ ಅದೊಂದು ಲಕ್ಷುರಿ. ಏಕೆಂದರೆ ಬ್ಯಾರಕ್‌ಗಳು ತುಂಬಿ ತುಳುಕುತ್ತಿರುತ್ತವೆ. ಒಂದೊಂದರಲ್ಲಿ 50ರಿಂದ 70 ಜನ ಇದ್ದಾರೆ. ಸಿಂಗಲ್ ಸೆಲ್‌ನಲ್ಲಿ ಒಳಗಡೆಯೇ ಟಾಯ್ಲೆಟ್ ಇದೆ.

ಸಿಂಗಲ್ ಸೆಲ್‌ಗಳ ಲೈನನ್ನು ಕಮರ್ಷಿಯಲ್ ಸ್ಟ್ರೀಟ್ ಎನ್ನುತ್ತಾರೆ; ಮಿಕ್ಕ ಮೂರು ಬ್ಯಾರಕ್‌ಗಳನ್ನು ಶಿವಾಜಿನಗರ, ಕಲಾಸಿಪಾಳ್ಯ ಹಾಗೂ ಮೆಜೆಸ್ಟಿಕ್ ಎನ್ನುತ್ತಾರೆ (ಬೆಂಗಳೂರಿನ ಈ ಹೆಸರಿನ ಏರಿಯಾಗಳಿಗೆ ಹೋಲಿಕೆ ಮಾಡಿ ಹಾಗನ್ನುತ್ತಾರೆ). ಕಮರ್ಷಿಯಲ್ ಸ್ಟ್ರೀಟ್ ಏಕೆಂದರೆ ಇಲ್ಲಿ ಹಣದ ಓಡಾಟ ಹೆಚ್ಚು; ಶಿವಾಜಿನಗರ ಬ್ಯಾರಕ್ಕಿನಲ್ಲಿ ಎಂಥ ಮಾಲು ಬೇಕಿದ್ದರೂ ಸಿಗುತ್ತದೆ; ಕಲಾಸಿಪಾಳ್ಯ ಲೋಡ್ ಜಾಸ್ತಿಯಾಗಿ ಗಿಜಿಗುಡುತ್ತಿರುತ್ತದೆ; ಮೆಜೆಸ್ಟಿಕ್‌ನಲ್ಲಿ ಬಂದು ಹೋಗುವವರು ಹೆಚ್ಚು.

ಜೈಲಿನಲ್ಲಿ ನಾನಿದ್ದಾಗ 'ದಾದಾ'ಗಳು ಯಾರೂ ಇರಲಿಲ್ಲ. ಇದರ ಹಿಂದಿನ 5 ವರ್ಷ ಮೂಡಿಗೆರೆಯ ಸ್ವಾಮೀಜಿ ಆಳಿದರಂತೆ (ಈಗ ಅವರಿಗೆ ಜೀವಾವಧಿ ಶಿಕ್ಷೆಯಾಗಿ ಧಾರವಾಡಕ್ಕೆ ಕಳಿಸಿದ್ದಾರೆ). ಹಣವಿದ್ದವರಿಗೆ ಬೇಕಿರುವುದು ಸುಲಭವಾಗಿ ಸಿಕ್ಕುತ್ತದಾದರೂ ಈಗ ದೊಡ್ಡ ಗೋಲ್‌ಮಾಲ್ ಇಲ್ಲ. ಈಗಿರುವ ಜೈಲರ್ ತುಂಬಾ ಲೂಸೂ ಬಿಡದೆ, ತುಂಬಾ ಟೈಟೂ ಮಾಡದೆ, ಸಾಧ್ಯವಾದಷ್ಟೂ ನಿಯಮಗಳ ಚೌಕಟ್ಟಿನಲ್ಲಿ ನಡೆಸಿಕೊಂಡು ಹೋಗುವವರು. ಹಾಗಾಗಿ ಜೈಲಲ್ಲಿ ಲೀಡರ್‌ಗಳಿದ್ದಾರೆ, ಆದರೆ ದಾದಾಗಿರಿ ಇಲ್ಲ.

ತಿಂಡಿ-ಕಾಫಿ ಬೆಳಗ್ಗೆ 7ಕ್ಕೆ, 10 ಮತ್ತು 4 ಗಂಟೆಗೆ ಊಟ-ಇದು ದಿನಚರಿ. ವಾರಕ್ಕೊಮ್ಮೆ ಚಿಕನ್, ಮತ್ತೊಂದು ದಿನ ಮೊಟ್ಟೆ. ಇಲ್ಲಿ ಅಡುಗೆಯನ್ನು ಕೈದಿಗಳೇ ಮಾಡುತ್ತಾರೆ. ಅವರು ಬೆಳಗ್ಗೆ 5 ಗಂಟೆಗೆ ಎದ್ದು ಕೆಲಸ ಪ್ರಾರಂಭಿಸಿದರೆ ಹೆಚ್ಚೂಕಮ್ಮಿ ರಾತ್ರಿ 8ರ ತನಕ ಮಾಡುತ್ತಲೇ ಇರುತ್ತಾರೆ. ಈ ಕೆಲಸಕ್ಕೆ ಅವರಿಗೆ ಸಿಗುವ ಅಡ್ವಾಂಟೇಜ್ ಎಂದರೆ ಸಂಜೆ ಎಲ್ಲರಿಗೂ ಊಟ ಕೊಟ್ಟ ಮೇಲೆ ಎಣ್ಣೆ ಉಪ್ಪು ಖಾರ ಸ್ವಲ್ಪ ಜಾಸ್ತಿ ಹಾಕಿ ಸಾರನ್ನು ಸ್ವಲ್ಪ ರುಚಿಯಾಗಿ ಮಾಡಿಕೊಳ್ಳುತ್ತಾರೆ. ತಾವು ಮಾಡಿಕೊಂಡಿದ್ದನ್ನು ಕೆಲ ಸೆಲ್‌ನವರಿಗೂ ಸಪ್ಲೈ ಮಾಡುತ್ತಾರೆ. ಅದಕ್ಕಿಷ್ಟು ಟಿಪ್ಸ್ ಆಗಾಗ ಸಿಗುತ್ತದೆ. ಅಲ್ಲದೆ ಒಬ್ಬ ಹೆಡ್‌ಕುಕ್ಕಿಗೆ ದಿನಕ್ಕೆ 30 ರೂ. ಸಿಗುತ್ತದೆ.

ಇಲ್ಲಿ ಊಟ ತುಂಬಾ ಚೆನ್ನಾಗಿಯೂ ಇಲ್ಲ, ಅಷ್ಟು ಕೆಟ್ಟದಾಗಿಯೂ ಇಲ್ಲ. ತೆಂಗಿನಕಾಯಿ, ಧನಿಯ, ಖಾರಪುಡಿ ಕೊಟ್ಟರೆ ಇನ್ನೂ ಚೆನ್ನಾಗಿ ಮಾಡಬಹುದು. ಏನು ಮಾಡುವುದು, ಅದರ ಸಪ್ಲೈ ಕಡಿಮೆ ಎನ್ನುತ್ತಾರೆ. ಅಲ್ಲದೆ ಊಟದ ಸಮಯ ಬೆಳಗ್ಗೆ 10 ಮತ್ತು ಸಂಜೆ 4ಕ್ಕೆ ಇರುವುದರಿಂದ ಹಲವರಿಗೆ ತಿನ್ನಲಾಗದೆ ಹಾಗೇ ಇಟ್ಟುಕೊಂಡು ನಂತರ ತಣ್ಣಗಾದುದನ್ನೇ ತಿನ್ನುತ್ತಾರೆ. ಅದು ಸ್ವಲ್ಪ ಕಷ್ಟವೇ. ಈ ಕೆಲವು ಸಮಸ್ಯೆಗಳಿದ್ದರೂ ಊಟ ಓಕೆ.

ಜೈಲಲ್ಲಿ ಲೈಬ್ರರಿ ಇದೆ. ಕೆಲವರು ಮಾತ್ರ ಅದರ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಸುಮಾರು ಹೊಸ ಪುಸ್ತಕಗಳು ಬಂದಿದ್ದವು. ಆದರೆ ಬಂಡಲ್‌ಗಳನ್ನೂ ಬಿಚ್ಚಿರಲಿಲ್ಲ. ನಾವೇ ಜೋಡಿಸುತ್ತೇವೆಂದು ಕೇಳಿ, ನಾನು ಮತ್ತು ಮತ್ತೊಬ್ಬ ಹಿರಿಯ ಮಿತ್ರರು ಸೇರಿಕೊಂಡು ಪುಸ್ತಕಗಳನ್ನು ಎಂಟ್ರಿ ಮಾಡಿ ಸೀಲ್ ಹಾಕಿ, ರ್‍ಯಾಕಿಗೆ ಜೋಡಿಸಿದೆವು. ಒಳ್ಳೊಳ್ಳೆ ಪುಸ್ತಕಗಳೂ ಇವೆ. ಆದರೆ ಇಲ್ಲಿ ಕಡಿಮೆ ಓದಿದವರೇ ಹೆಚ್ಚಾಗಿರುವುದರಿಂದ ದೊಡ್ಡ, ಕ್ಲಿಷ್ಟ ಕೃತಿಗಳಿಗಿಂತ, ಪುಟ್ಟ ಹಾಗೂ ಸರಳ ಪುಸ್ತಕಗಳು ಹೆಚ್ಚಾಗಿ ಬರಬೇಕಿದೆ. ಆಫೀಸಿಗೆ ಪೇಪರ್ ಬರುತ್ತದೆ, ಆದರೆ ವ್ಯವಸ್ಥಿತವಾಗಿ ಬಂದಿಗಳಿಗೆ ತಲುಪುವುದಿಲ್ಲ. ವಾರಕ್ಕೆ 3 ದಿನ (ಗುರು, ಶುಕ್ರ, ಶನಿವಾರ) ಕ್ಷೌರ ಮಾಡಲು ಒಬ್ಬರು ಬರುತ್ತಾರೆ.

ಈ ರೀತಿ ಅಗತ್ಯಗಳ ದೃಷ್ಟಿಯಿಂದ ಜೈಲ್ ಅಷ್ಟು ಕೆಟ್ಟದಾಗಿಲ್ಲ, ಆದರೆ ಇದೇ ಒಂದು ಸಮಸ್ಯೆಯಾಗಿದೆ. "ಎಲ್ಲಾ ವ್ಯವಸ್ಥೆ ಇದೆಯಲ್ಲಾ, ಇನ್ನೇನು?" ಎಂಬ ಧೋರಣೆ ಅಧಿಕಾರಿಗಳಲ್ಲಿದೆ. ಕುಂದುಕೊರತೆ ಕೇಳಲು ಬರುವ ಮ್ಯಾಜಿಸ್ಟ್ರೇಟ್ ಹಾಗೂ ಸಂಬಂಧಪಟ್ಟ ಸದಸ್ಯರೂ ಸಹ ಊಟ, ವ್ಯವಸ್ಥೆಯ ಬಗ್ಗೆಯೇ ವಿಚಾರಿಸುತ್ತಾರಂತೆ. ಕೇಸಿನ ವಿಚಾರ ತೆಗೆದರೆ "ಅದರ ಬಗ್ಗೆ ನಮ್ಮ ಬಳಿ ಮಾತನಾಡಬೇಡಿ, ನಿಮ್ಮ ಲಾಯರ್ ಬಳಿ ಮಾತಾಡಿಕೊಳ್ಳಿ" ಎನ್ನುತ್ತಾರಂತೆ. "ನಾವಿಲ್ಲಿ ತಿನ್ನಲು ಬಂದಿಲ್ಲ, ಹೊರಹೋಗಲು ಬಯಸುವವರು. ಅದಕ್ಕೆ ನೆರವಿಲ್ಲ ಎಂದಮೇಲೆ ಇವರ ನೆರವನ್ನು ಕಟ್ಟಿಕೊಂಡು ಏನು ಮಾಡಬೇಕು?" ಎಂದು ಎಲ್ಲರೂ ಸಿಡಿಮಿಡಿಗೊಳ್ಳುತ್ತಾರೆ. ಅದು ವಾಸ್ತವವಾಗಿದೆ. ಇಲ್ಲಿ ಒಬ್ಬೊಬ್ಬರ ಕತೆ ಕೇಳುತ್ತಾ ಹೋದರೆ ಈ ಇಡೀ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಮೈ ಉರಿಯುತ್ತದೆ.

ಇಲ್ಲಿರುವ ಹೆಚ್ಚಿನವರು ರೇಪ್, ಕಳ್ಳತನ, ಕೊಲೆ, ದರೋಡೆ ಹಾಗೂ ವರದಕ್ಷಿಣೆ ಹತ್ಯೆ ಆರೋಪಗಳ ಕೆಳಗೆ ಬಂದವರು. ಖೋಟಾನೋಟು, ಚೀಟಿಂಗ್ ಕೇಸ್‌ನಲ್ಲಿರುವವರೂ ಕೆಲವರಿದ್ದಾರೆ. ಇದರಲ್ಲಿ ಹೆಚ್ಚೆಂದರೆ ಶೇ. 5ರಿಂದ 10ರಷ್ಟು ಜನ ಮಾತ್ರ ಕಳ್ಳತನ, ರೌಡಿಸಂ ಇತ್ಯಾದಿ ಕ್ರಿಮಿನಲ್ ಚಟುವಟಿಕೆಯ ಹಿನ್ನೆಲೆಯವರು, ಪ್ರೊಫೆಶನಲ್ಸ್. (ಇವರ ವೃತ್ತಿ ಪ್ರವೇಶದ ಮೂಲಕ್ಕೆ ಹೋಗಿ ನೋಡಿದರೂ ಮೂರು ಕಾರಣಗಳಲ್ಲೊಂದು ಸಿಗುತ್ತದೆ: ಹಣದ ಬಿಕ್ಕಟ್ಟು, 'ಫ್ರೆಂಡ್‌ಶಿಪ್', ಪೊಲೀಸರ ಬಳುವಳಿ. ಆಕಸ್ಮಾತ್ತಾಗಿ ಎಂಟ್ರಿ ಪಡೆದವರಿಗೆ ಶಾಶ್ವತ ಸದಸ್ಯತ್ವ ನೀಡಿರುವುದು ಮಾತ್ರ ಪೊಲೀಸರೇ.) ಮಿಕ್ಕವರೆಲ್ಲಾ ಅವರ ಪಾಡಿಗೆ ಅವರು ದುಡಿಮೆ ಮಾಡಿಕೊಂಡು ಬದುಕುತ್ತಿದ್ದವರು. ಒಂದು ನಿರ್ದಿಷ್ಟ ಸಂದರ್ಭದಲ್ಲಿ ತಪ್ಪು ಮಾಡಿದ್ದಾರೆ ಅಥವಾ ತಪ್ಪು ನಡೆದುಹೋಗಿದೆ ಅಥವಾ ತಪ್ಪೇ ಮಾಡಿಲ್ಲ ಅಂಥವರು. ಕೆಲವು ಉದಾಹರಣೆ ಹೇಳುತ್ತೇನೆ:

ಹೇಮಂತ್, 21 ವರ್ಷ. ಚುರುಕು ಹಾಗೂ ಜಾಣ ಹುಡುಗ. ಐಟಿಐ ಮಾಡಿದ್ದಾನೆ. ಅಕ್ಕನಿಗೆ ಮದುವೆಯಾಗಿ ಮಗುವಾಗಿದೆ. ಆಕೆಯ ಗಂಡನಿಗೆ ಮದುವೆಯ ಮೊದಲೇ



ಬೇರೆ ಸಂಬಂಧವಿತ್ತು, ಈಗವನು ಆಕೆಯ ಜೊತೆ
ಇರುತ್ತಿದ್ದಾನೆ. ಪಕ್ಕದ ಮನೆಯಲ್ಲೂ ಇಂತಹದೇ
ನಡೆದಿದೆ. ಅಕ್ಕನ ಸಂಸಾರವನ್ನು ಸರಿಮಾಡಲು
ಒದ್ದಾಟ ನಡೆಸಿದರೂ ಏನೂ ಪ್ರಯೋಜನವಾಗಿಲ್ಲ.
ಬಿಡಬಾರದೆಂದು ಹೇಮಂತ್ ಮತ್ತು ಅವನ ಸ್ನೇಹಿ
ಸೇರಿಕೊಂಡು ಹೋಗಿ ಅವನನ್ನು ಥಳಿಸಿದ್ದಾರೆ.
ಕಂಪ್ಲೇಂಟ್ ಕೊಟ್ಟಿದ್ದಾನೆ. ಪೊಲೀಸರು ಕೊಲೆ ಯ
ಕೇಸ್ ಹಾಕಿದ್ದಾರೆ. ನಮ್ಮ ಕುಟುಂಬದ ವಿಚಾರಕ್ಕೆ
ಮನೆಯ ಹುಡುಗರೇಕೆ ಜೈಲಿಗೆ ಹೋಗಬೇಕೆ
ಹೇಮಂತನ ತಂದೆ "ನಾನು ಮತ್ತು ನನ್ನ ಮಗ ಹೊ
ಹೊಡೆದೆವೆಂದು" ಹೇಳಿ ಜೈಲಿಗೆ ಬಂದಿದ್ದಾರೆ.
ಸದಾ ಮಗನ, ಮನೆಯ ಹಾಗೂ ಹೊಲದ್ದೇ ಚಿಂ

ವೆಂಕಟಗೌಡ್ರು: ರೈತ ಸಂಘದ ಸ್ಥಳೀಯ ಮುಖಂ
ಇವರೂ ಸಹ ತಂದೆ-ಮಗ ಇಬ್ಬರೂ ಜೈಲಿನಲ್ಲಿ
ಊರ ಮುಂದಾಳುಗಳಿಗೂ ವೆಂಕಟಗೌಡರಿಗೂ ಆಗುವು
ಅವರ ಪುಢಾರಿ ರಾಜಕೀಯ, ಪುಂಡ ಬದುಕು ಇ
ಹಿಡಿಸುವುದಿಲ್ಲ, ಇವರು ಹತ್ತಿರದ ದಲಿತ ಕೇರಿಯ
ಬೆಂಬಲವಾಗಿರುವುದು ಅವರಿಗೆ ಹಿಡಿಸುವುದಿಲ್ಲ.
ಇವರ ಹಳ್ಳಿಗೆ ಅಂಟಿಕೊಂಡು ಹರಿಯುವ ಹೇಮಾ
ನದಿಯ ಮರಳು ದೋಚುವಿಕೆಯನ್ನು ರೈತಸಂ
ನೇತೃತ್ವದಲ್ಲಿ ಹೋರಾಡಿ ನಿಲ್ಲಿಸಿದರು. ಇದರಿಂದ ರೊಚ್ಚಿ
ಪುಢಾರಿಗಳು ಒಂದಲ್ಲ ಒಂದು ರೂಪದಲ್ಲಿ ಇ
ಕಿರುಕುಳ ನೀಡುತ್ತಲೇ ಬಂದಿದ್ದಾರೆ. ಈ ಎಲ್ಲಾ ಹಿನ್ನೆಲೆ
ಸಮುದಾಯ ಭವನವೊಂದರ ನೆಪದಲ್ಲಿ ಜ
ತೆಗೆದುಕೊಂಡು, 15-20 ಜನ ಸೇರಿಕೊಂಡು ಗೌ
ಮನೆಗೆ ನುಗ್ಗಿ ಹೊಡೆಯಲು ಬಂದಿದ್ದಾರೆ. ಅವರ ಕೈ
ದೊಣ್ಣೆ ಬಂದೂಕುಗಳಿವೆ. ಇವರು ಮೂವರೇ ಇ
ಮನೆಯಲ್ಲಿದ್ದ ಕೋವಿ ತೆಗೆದುಕೊಂಡು ಗೌಡರು '
ಬರಬೇಡಿ' ಎಂದು ಹೆದರಿಸಲು ಹೋಗಿದ
ಎಳೆದಾಟದಲ್ಲಿ ಅಕಸ್ಮಾತ್ ಅದು ಹಾರಿಯೇ ಬಿ
ಒಬ್ಬ ಸತ್ತಿದ್ದಾನೆ. ಬೇಲ್ ಸಿಗದೆ ತಂದೆ-ಮಗ ಇಬ್ಬ
ಒಂದು ವರ್ಷದಿಂದ ಒಳಗಿದ್ದಾರೆ. ಮರಳು ಧಂಧೆ
ಸಾಂಗವಾಗಿ ನಡೆಯುತ್ತಿದೆ.

ರವಿ, ನಮ್ಮ ಜೈಲಿನ ಹೆಡ್ ಕುಕ್: ಸಣ್ಣ ವಯ
ಚುರುಕು ಹುಡುಗ. ಹಳ್ಳಿಯಲ್ಲಿ ಅಣ್ಣನೊಂ
ಜಗಳವಾಡಿಕೊಂಡು ಮನೆಬಿಟ್ಟು ಹೋಗಿದ್ದಾನೆ. ಕಡೂ
ಹೋಗಿ ಕ್ಯಾಟರಿಂಗ್ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಅವ
ಅವನ ಜೊತೆಗಾರರೂ ಅರಸೀಕೆರೆ ಚೌಲ್ಟ್ರಿಯಲ್ಲಿ ಕೆಲ
ಹೋಗಿದ್ದವರು ರೈಲು ಬರುವುದು ಮಧ್ಯರಾತ್ರಿಯ
ಅಲೆದಾಡಿಕೊಂಡಿದ್ದಾರೆ. 'ಎಣ್ಣೆ' ಕೂಡ ಹಾಕಿದ
ಪೊಲೀಸರು ಹಿಡಿದುಕೊಂಡು ಬಂದು ಅನುಮಾ
ಮೇಲೆ ಸಿಕ್ಕಾಬಟ್ಟೆ ಹೊಡೆದಿದ್ದಾರೆ. 8 ದಿನ ಪೊಲಿ
ಸ್ಟೇಶನ್ನಿನಲ್ಲಿ ಕೂಡಿಟ್ಟುಕೊಂಡು, ಇಲ್ಲದ ಚಿತ್ರಹಿ
ನೀಡಿದ್ದಾರೆ. ಕೊನೆಗೆ ಈ ಚಿತ್ರಹಿಂಸೆ ತಾಳಲಾ
ಪೊಲೀಸರು ಹೇಳಿದ್ದಕ್ಕೆಲ್ಲಾ 'ಹೌದು, ಮಾಡಿದ್ದೆ
ಎಂದಿದ್ದಾರೆ. 'ದರೋಡೆ ಮಾಡಲು ಹೊರಟಿದ್ದರು' ಎ
ಕೇಸು ಹಾಕಿ ಕಳಿಸಿದ್ದಾರೆ. ಊರಿಗೆ ಗೊತ್ತಾ
ಅವಮಾನವೆಂದು ಸುದ್ದಿ ತಿಳಿಸಿಲ್ಲ. 9 ತಿಂಗಳಿಂದ ಜೈ
ಮನೆಯಾಗಿದೆ. (ನಮ್ಮ ಸ್ನೇಹಿತರ ಸಹಕಾರದಿಂದ
ಈಗವರು ಹೊರಬಂದಿದ್ದಾರೆ).

ಪ್ರಶಾಂತ್: ಟ್ಯಾಕ್ಸಿ ಇಟ್ಟುಕೊಂಡಿದ್ದಾರೆ. ಮಧ್ಯ
ವರ್ಗ. ಬೇಕೆಂದೇ ಬಡ ಕುಟುಂಬದಲ್ಲಿ ಮದ
ಮಾಡಿಕೊಂಡಿದ್ದಾರೆ. ಗಂಡ-ಹೆಂಡತಿ ಚೆನ್ನಾಗಿಯೇ ಇದ್ದ
4 ವರ್ಷದ ಮಗನಿದ್ದಾನೆ. ಬೇರೆ ಮನೆ ಮಾಡೋಣವೆಂ
ಗಂಡನನ್ನು ಹೆಂಡತಿ ಒತ್ತಾಯಿಸಿದ್ದಾಳೆ (ಕಾರಣವೇನ
ಗೊತ್ತಿಲ್ಲ). ಗಂಡ ಒಪ್ಪಿಲ್ಲ. ಒಮ್ಮೆ ಹೊ
ತವರುಮನೆಯವರನ್ನು ಭೇಟಿಯಾಗಿ ಬಂದಾಕೆ, ಸ್ನಾನ ಮ
ನಂತರ ಬಚ್ಚಲಲ್ಲೇ ನೇಣು ಹಾಕಿಕೊಂಡಿದ್ದಾಳೆ. ಆತ್ಮ
ಮಾಡಿಕೊಳ್ಳುವ ಪರಿಸ್ಥಿತಿಗೆ ತಳ್ಳಿದನೆಂದು ತವರಿನ
ಕೇಸ್ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟಿನ ತನಕ ಹೋದ
ಬೇಲ್ ಸಿಕ್ಕಿಲ್ಲ. 15 ತಿಂಗಳಿಂದ ಒಳಗೇ ಇದ
ಹೆಚ್ಚುಕಡಿಮೆ ಈ ರೀತಿಯ ಇನ್ನೂ 8-10 ಪ್ರಕರಣಗ

ಮಲ್ಲೇಶ್: ಸದ್ಯಕ್ಕೆ ಜೈಲಿನಲ್ಲಿರುವ ದೇವಸ್ಥಾನ
ಅರ್ಚಕರು. ಮಧ್ಯಮ ರೈತರು. ಕಷ್ಟದ ಹಾದಿಯಲ್ಲಿ
ಬಂದಿರುವುದರಿಂದ ಅಪಾರ ಜೀವನಾನುಭವ ಇದೆ. ಭೂ
ವಿಚಾರವೊಂದಕ್ಕೆ ಸಂಬಂಧಪಟ್ಟು ನೆರೆಯವರೊಂದಿಗೆ ತ
ಇತ್ತು. ಅವರು ಜಾತಿಯಲ್ಲೂ ರಾಜಕೀಯದಲ್ಲ
ಬಲಾಢ್ಯರಾಗಿರುವವರು. ಕೇಸು ಕೋರ್ಟಿಗೂ ಹೋ
ಇವರ ಪರವಾಗಿಯೇ ತೀರ್ಪು ಬಂದಿದೆ. ಅದರ ಸಿ
ಬೇರೊಬ್ಬರನ್ನು ಇವರ ವಿರುದ್ಧ ಎತ್ತಿಕಟ್ಟಿ ಜಗಳವಾಡಿಸಿದ
ಗಲಾಟೆಯಲ್ಲಿ ಆಕಸ್ಮಾತ್ತಾಗಿ ಬಿದ್ದ ಹೊಡೆತದಿಂದ
ಸತ್ತಿದ್ದಾನೆ. 20 ತಿಂಗಳಿಂದ ಇವರು ಜೈಲಲ್ಲಿದ್ದಾರೆ. ಮಕ್ಕ
ಹಾಸ್ಟೆಲಿಗೆ ಸೇರಿಸಿದ್ದಾರೆ. ಸಹಿಸಲಾರದ ಉಪಟಳಗಳನ್ನ
ಸಹಿಸುತ್ತಾ ಹೆಂಡತಿ ಒಬ್ಬರೇ ಮನೆಯಲ್ಲಿದ್ದಾರೆ. ವಿವಾದದ
ಜಾಗವನ್ನೀಗ ವಿರೋಧಿಗಳು ವಶಪಡಿಸಿಕೊಂಡಿದ್ದಾರೆ.

ವಿನಯ್: ಭದ್ರಾವತಿಯ ಕಬ್ಬಿಣ-ಉ
ಕಾರ್ಖಾನೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡು

## ಜೈಲು ಮತ್ತು ಸೌಹಾರ್ದತೆ

ಚಿಕ್ಕಮಗಳೂರು ಎಂದರೆ 'ಗಿರಿ' ವಿವಾದ ಜ್ಞಾಪಕಕ್ಕೆ ಬರುತ್ತದೆ. ತಾತ್ವಿಕ ಮಿತ್ರರಾಗಿದ್ದ ಬಾಬಾ ಬುಡೇನ್ ಹಾಗೂ ದತ್ತಾತ್ರೇಯರನ್ನು ಪರಸ್ಪರ ಶತ್ರುಗಳನ್ನಾಗಿ ಚಿತ್ರಿಸಿ ಜನರನ್ನು ಒಡೆದು ಹೊಡೆದಾಡಿಸಿ ಪಟ್ಟಭದ್ರರು ಅಧಿಕಾರ ಹಿಡಿದಿದ್ದು ಎಲ್ಲರಿಗೂ ಗೊತ್ತಿರುವ ವಿಚಾರವೇ. 'ಹಿಂದೂ-ಮುಸ್ಲಿಂ ಜಗಳದ ಈ ಅಭಿವ್ಯಕ್ತಿ ಜೈಲಲ್ಲಿರುವ ಯುವಕರ ನಡುವೆಯೂ ತೀವ್ರ ಸ್ವರೂಪದಲ್ಲಿರಬಹುದು, ನಾನು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು' ಎಂದೆಲ್ಲಾ ಅಂದುಕೊಂಡು ಹೋದೆ. ಆದರೆ ನನಗಲ್ಲಿ ಆಶ್ಚರ್ಯ ಕಾದಿತ್ತು. ಒಳಗಡೆ ಪರಿಸ್ಥಿತಿ ತದ್ವಿರುದ್ಧ. ಹಿಂದೂ-ಮುಸ್ಲಿಂ ವೈರುಧ್ಯದ ಸಣ್ಣ ಎಳೆಯೂ ಎಲ್ಲೂ ಕಾಣಲಿಲ್ಲ. (ಯಾರೋ ಎಂದೋ ಅಂಟಿಸಿ ಹೋದ, ದತ್ತಾತ್ರೇಯನನ್ನು ಕುರಿತ ಬಜರಂಗದಳದ ಮಾಸಿಹೋಗಿರುವ ಸ್ಟಿಕರ್ ತುಂಡು ಮಾತ್ರ ಒಂದೆಡೆ ಕಣ್ಣಿಗೆ ಬಿತ್ತು). ಹಿಂದೂ-ಮುಸ್ಲಿಮರಿಬ್ಬರೂ ಅಷ್ಟು ಅನ್ಯೋನ್ಯವಾಗಿದ್ದಾರೆ. ಜೈಲಿನ ಮಧ್ಯದಲ್ಲಿರುವ ದೇವಸ್ಥಾನದಲ್ಲಿ ನಿತ್ಯ ಬೆಳಗ್ಗೆ ಪೂಜೆ ನಡೆಯುತ್ತದೆ. ಆಗಾಗ ವಿಶೇಷ ಪೂಜೆ ನಡೆಯುತ್ತದೆ. ಆಗ ಮುಸ್ಲಿಂ ಹುಡುಗರೂ ನಿಂತು ಹಣ ಸಂಗ್ರಹಿಸಿ ಅಗತ್ಯ ವ್ಯವಸ್ಥೆ ಮಾಡಿಕೊಡುತ್ತಾರೆ. ಪ್ರತಿದಿನ ಕೆಲವು ಮುಸ್ಲಿಂ ಯುವಕರು 3ನೇ ಬ್ಯಾರಕ್ಕಿನಲ್ಲಿ ನಮಾಜು ಮಾಡುತ್ತಾರೆ. ಪ್ರತಿ ಶುಕ್ರವಾರ ಎಲ್ಲಾ ಮುಸ್ಲಿಮರು ಸೇರಿ ನಮಾಜು ಮಾಡುತ್ತಾರೆ. ಆ ಅವಧಿಗಳಲ್ಲಿ ಅವರಿಗೆ ತೊಂದರೆಯಾಗದಂತೆ ಹಿಂದೂ ಯುವಕರೆಲ್ಲಾ ಎಚ್ಚರಿಕೆ ವಹಿಸುತ್ತಾರೆ. ಹೊರಗಿನ ಮುಸ್ಲಿಂ ಸಂಘಟನೆಗಳು ಕೆಲವು ವಿಶೇಷ ಸಂದರ್ಭಗಳಲ್ಲಿ ಬಂದು ಇಡೀ ಜೈಲಿಗೆ ಹಣ್ಣು-ಸಿಹಿಯನ್ನು ಹಂಚಿಹೋಗುತ್ತವೆ. ನಾನಿದ್ದಾಗ ಕ್ರಿಸ್‌ಮಸ್ ಅಂಗವಾಗಿ ಚರ್ಚಿನವರು ಬಂದು ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಕೇಕ್ ಹಂಚಿ ಹೋದರು. ಇಂತಹ ಸಂದರ್ಭಗಳಲ್ಲಿ ಮುಂದಾಗಲಿ ಹಿಂದಾಗಲಿ ಒಂದೇ ಒಂದು ಕುಹಕದ ಮಾತೂ ಕಿವಿಗೆ ಬೀಳಲಿಲ್ಲ.

ಹಲವು ಕೇಸುಗಳಲ್ಲಿರುವ ಆನಂದಣ್ಣ, ಕಬೀರ್ ನೋಡಲು 'ದಾದಾ'ಗಳಂತೆ ಕಾಣುತ್ತಾರೆ. ಆದರೆ ಇಬ್ಬರೂ ಅಷ್ಟೇ ಸಹೃದಯರು. ಆನಂದ್ ಸೌಮ್ಯ, ಕಬೀರ್ ತುಂಟ. ಇಬ್ಬರೂ ಎಲ್ಲರಿಗೂ ಇಷ್ಟ. ಸಾದಿಕ್ ಜೈಲಿನ ಒಬ್ಬ ಮುಖ್ಯ ಲೀಡರ್. 3ನೇ ಬ್ಯಾರಕ್ಕಿನಲ್ಲಂತೂ ಎಲ್ಲಾ ವಿಚಾರಗಳೂ ಇವರ ಆಣತಿಯಂತೆ ನಡೆಯುತ್ತವೆ. ಆದರೆ ಅದಕ್ಕೆ ಕಾರಣ ಗೂಂಡಾಗಿರಿಯಲ್ಲ. ಸಾದಿಕ್‌ನಲ್ಲಿ ಇರುವ, ಎಲ್ಲಾ ಕೆಲಸಕ್ಕೂ ಮುಂದೆ ಬಿದ್ದು ಧೈರ್ಯವಾಗಿ ಮಾತುವ ಸಹಜ ನಾಯಕತ್ವ ಗುಣ ಕಾರಣ. ಅವರ ನಾಯಕತ್ವವನ್ನು ಎಲ್ಲರೂ ಗೌರವಿಸುತ್ತಾರೆ.

ಧರ್ಮದ ಹೆಸರಿನಲ್ಲಿ ಭಾರತದಲ್ಲಿ ಹಾಗೂ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಹಿಂದೂ-ಮುಸ್ಲಿಮರಿಬ್ಬರೂ ಕಟುವಾಗಿ ಖಂಡಿಸಿ ಮಾತನಾಡುತ್ತಾರೆ. ಕಬೀರ್ ಮುಸ್ಲಿಂ ಮೂಲಭೂತವಾದಿಗಳ ಹುಚ್ಚಾಟಗಳನ್ನು ಹೀಯಾಳಿಸಿದರೆ, ಮಲ್ಲೇಶ್-ಪ್ರಶಾಂತ್ ಗಿರಿ ವಿವಾದವನ್ನು ಬಳಸಿಕೊಂಡು ಸಿ.ಟಿ.ರವಿ ಬೆಳೆದ ಕುತಂತ್ರದ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

ಎಲ್ಲವನ್ನೂ ಗಮನಿಸುವ ಹಿರಿಯರಾದ ಬ್ರಾಹ್ಮಣ ಹಿನ್ನೆಲೆಯ ನಾರಾಯಣ್ ಹೇಳಿದರು, "ಶ್ರೀಧರ್, ಈ ವಿಚಾರದಲ್ಲಿ ಇಲ್ಲಿ ಬಂದು ನಾನು ಸಾಕಷ್ಟು ಕಲಿತೆ, ಸಾಕಷ್ಟು ಬದಲಾದೆ." ಈ ಮಾತು ಇಲ್ಲಿನ ವಾತಾವರಣದ ಸಮ್ಮಿಂಗಪ್ ರೀತಿಯಲ್ಲಿತ್ತು, ಮನಸ್ಸು ಸಂತಸಪಟ್ಟಿತು.

ಆದರೆ ವಿವಿಧ ಜೈಲುಗಳ ಅನುಭವ ಇರುವ ಕಬೀರ್ ಮಂಗಳೂರು ಜೈಲಿನ ಕತೆ ಹೇಳಿದಾಗ ಮನಸ್ಸು ಮತ್ತೆ ಪರಿತಪಿಸಿತು. ಅಲ್ಲಿ ಜೈಲೊಳಗೆ ಎರಡು ಜೈಲುಗಳಂತೆ. ಅಂದರೆ ಪರಸ್ಪರ ಸಂಬಂಧವಿಲ್ಲದ ಎರಡು ಪ್ರತ್ಯೇಕ ಬ್ಯಾರಕ್ಕುಗಳು. ಜೊತೆಗಿಟ್ಟರೆ ಕೊಲೆಗಳಾಗುತ್ತವಂತೆ. ಅಲ್ಲಿ ಇದ್ದು ಬಂದ ಜೈಲರ್ ಸಹ ಹೇಳುತ್ತಿದ್ದರು ಪರಿಸ್ಥಿತಿ ಹಾಗಿರುವಾಗ ನಾವೇನೂ ಮಾಡಲು ಸಾಧ್ಯವಿಲ್ಲ. ಅದು ಕರಾವಳಿಯಲ್ಲಿ ಕೋಮುವಾದ ಕಟ್ಟಿ ನಿಲ್ಲಿಸಿರುವ ಶಾಶ್ವತ ಗೋಡೆಯ ಪರಿಣಾಮವಾಗಿದೆ.

ಒಮ್ಮೆ ಮಧ್ಯರಾತ್ರಿ ಎಚ್ಚರವಾದಾಗ ಅನಿಸಿತು, "ಚಿಕ್ಕಮಗಳೂರು ಜೈಲಿನ ಸೌಹಾರ್ದದ ಕಂಪು ನಮ್ಮ ನಾಡಿನುದ್ದಕ್ಕೂ ಪಸರಿಸಲಿ, ಆದರೆ ಮಂಗಳೂರು ಜೈಲಿನ ಶಾಶ್ವತ ಗೋಡೆ ಕರುನಾಡಿನಲ್ಲೆಂದೂ ಏಳದಿರಲಿ!"

# ...ಕೈದಿಗಳ ಕುಟುಂಬದವರಿಗೂ ಶಿಕ್ಷೆ

...ಸಾಮಾನ್ಯವಾಗಿ ಜೈಲೆಂದರೆ ಎಲ್ಲರ ತಲೆಗೆ ಹೋಗುವುದು ಅಪರಾಧಿ ಅಥವಾ ಆರೋಪಿಗಳಿಗೆ ಶಿಕ್ಷೆ. ವಾಸ್ತವದಲ್ಲಿ ...ರಿಗಿಂತ ಮೂರು ಪಟ್ಟು ಹೆಚ್ಚು ಶಿಕ್ಷೆ ಅನುಭವಿಸುವವರು ಅವರ ಕುಟುಂಬದವರು. ಇಲ್ಲಿರುವ ಕೈದಿಗಳಲ್ಲಿ ...ಪಾಲು ಜನರು ಅವರ ಕುಟುಂಬದ ಏಕೈಕ ದುಡಿವ ಕೈ. ದುಡಿಯುವ ಕೈ ಇಲ್ಲಿ ಲಾಕ್ ಆದೊಡನೆ ...ಂಬಗಳ ಪರಿಸ್ಥಿತಿ ಅಧೋಗತಿ. ಅಲ್ಲದೆ ಪೊಲೀಸರಿಗೆ, ವಕೀಲರಿಗೆ, ಕೋರ್ಟ್‌ಗೆ, ಜೈಲಲ್ಲಿರುವವರಿಗೆ, ಓಡಾಡಲಿಕ್ಕೆ ...ದಕ್ಕೂ ಹಣ ಹೊಂದಿಸಬೇಕು. ಇವರ ಮನೆಯವರು ಜೈಲಿಗೆ ಹೋಗಿದ್ದಾರಂತೆ ಎಂಬ ಅವಮಾನವನ್ನು ಪ್ರತಿನಿತ್ಯ ...ಭವಿಸಬೇಕು. ಜೈಲಿನ ಹೊರಗೆ ಅವರೂ ಅಪರಾಧಿಗಳಂತೆ ಕಾಯುತ್ತಾ ಕೂರಬೇಕು. ಪೊಲೀಸ್, ವಕೀಲ, ...ವಾರ್ಡರ್, ಕೋರ್ಟ್ ಗುಮಾಸ್ತ ಎಲ್ಲರ ಬಳಿಯೂ ಬೈಸಿಕೊಳ್ಳಬೇಕು. ಇದೊಂದು ನರಕ. ನಿರಪರಾಧಿ ...ಂಬಗಳಿಗೆ ಆಗುತ್ತಿರುವ ಕ್ರೂರಾತಿಕ್ರೂರ ಶಿಕ್ಷೆಗೆ ಯಾರು ಜವಾಬ್ದಾರರು? ಒಳಗಿರುವ ಆರೋಪಿ ಮಾತ್ರವೆ?

...ರ ಮನೆ ಬಳಿಯಿಂದ ಇದೇ ಕಂಪನಿಗೆ ಬರುವ ...ನ ಪರಿಚಯವಾಗಿ ಅವನ ಗಾಡಿಯಲ್ಲಿ ಕೆಲಸಕ್ಕೆ ಬಂದು ...ಗುವುದು ಮಾಡುತ್ತಿದ್ದ. ಆ ಗಾಡಿಯ ಹುಡುಗ ...ರೋ ಹುಡುಗಿಯನ್ನು ಕೊಲೆ ಮಾಡಿ, ಪೊಲೀಸರಿಗೆ ...ವು ಸಿಕ್ಕೇನೆಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ...ನಂತೆ ಪಿಕಪ್ ಮಾಡಲು ಬರುತ್ತಿಲ್ಲವಲ್ಲ ಎಂದು ...ಯ್ ಅವನಿಗೆ ಫೋನ್ ಮಾಡಿದ್ದಾನೆ. ಅದರ ಆಧಾರದ ...ಲೆ ಪೊಲೀಸರು ವಿನಯ್‌ನನ್ನು ಬಂಧಿಸಿದ್ದಾರೆ. ಚೆನ್ನಾಗಿ ...ದೆದು ಖಾಲಿ ಪೇಪರ್‌ಗೆ ಸಹಿ ಹಾಕಿಸಿಕೊಂಡು, ...ಲೆಗೆ ಸಹಾಯ ಮಾಡಿದ್ದಾಗಿ ಒಪ್ಪಿಕೊಂಡಂತೆ ಬರೆದು ...ಗೆ ತಳ್ಳಿದ್ದಾರೆ.

...ವೆಂಕಟಗೌಡರು ತಮ್ಮ ಸಾಮಾಜಿಕ ಕಾಳಜಿಯಿಂದಾಗಿ ...ರ ಪುಂಡರನ್ನು ಎದುರುಹಾಕಿಕೊಂಡು ಜೈಲಲ್ಲಿದ್ದಾರೆ. ...ಮಂತ್ ತನ್ನ ಕುಟುಂಬಕ್ಕಾಗಿರುವ ಅನ್ಯಾಯವನ್ನು ...ಭಟಿಸಲು ಹೋಗಿ ತನ್ನ ತಂದೆಯ ಸಮೇತ ...ನಲ್ಲಿದ್ದಾನೆ. ಮಲ್ಲೇಶ್ ಬಲಾಢ್ಯರ ದೌರ್ಜನ್ಯಕ್ಕೆ ರೋಸಿ ...ಗಿಬಿದ್ದ ಕಾರಣಕ್ಕೆ, ರವಿ ಮತ್ತು ಸ್ನೇಹಿತರು ನೆಲೆ ...ದೆ ನಿರ್ಗತಿಕರಾಗಿದ್ದಕ್ಕೆ, ಪ್ರಶಾಂತ್ ಕೌಟುಂಬಿಕ ...ಸಮ್ಯದ ಸುಳ್ಳು ಹಾಗೂ ಪೊಲೀಸರ ಸಂವೇದನಾ ...ಂತ್ಯಕ್ಕೆ, ನವೀನ್ ಪೊಲೀಸರ ರೆಕಾರ್ಡ್ ಫಿಲ್ ...ಡುವುದಕ್ಕೆ ಜೈಲಿನಲ್ಲಿದ್ದಾರೆ. ಇವರದಷ್ಟೇ ಅಲ್ಲ, ಇಲ್ಲಿರುವ ...ಲ್ಲೊಬ್ಬರ ಕಥೆಯೂ ಚಿತ್ರವಿಚಿತ್ರ. ಜೈಲಲ್ಲಿ ನಡೆದ ಪುಟ್ಟ ...ರ್ಯಕ್ರಮವೊಂದರಲ್ಲಿ ಜೈಲರ್ ಚವ್ಹಾಣ್ ಅವರೇ ...ಳಿದಂತೆ "ಇಲ್ಲಿರುವ ಶೇ. 80 ಮಂದಿ ನಿರಪರಾಧಿಗಳು ...ವಾ ಸಣ್ಣಪುಟ್ಟ ತಪ್ಪು ಮಾಡಿದವರು. 20% ...ರಾಧಿಗಳು ಸಹ ಸಿಕ್ಕಿಬಿದ್ದರು ಎಂಬ ಕಾರಣಕ್ಕೆ ...ಗಿದ್ದಾರೆ. ಇದಕ್ಕಿಂತ ಎಷ್ಟೋ ದೊಡ್ಡ ತಪ್ಪುಗಳನ್ನು ...ಡಿದ ಎಷ್ಟೋ ಮಂದಿ ಅಪರಾಧಿಗಳು ಹೊರಗಿದ್ದಾರೆ."

...ಹೊರಗಿರುವ ಹಾಗೂ ಒಳಗಿರುವುದರ ಹಿಂದೆ ...ರವರ ಆರ್ಥಿಕ, ಸಾಮಾಜಿಕ, ರಾಜಕೀಯ ಹಿನ್ನೆಲೆಗಳು ...ರ್ಣಾಯಕ ಪಾತ್ರ ವಹಿಸುತ್ತವೆ.

...ಜೈಲಿನಲ್ಲಿ ಸುಮಾರು 170 ಕೈದಿಗಳಿದ್ದು ಇದರಲ್ಲಿ ...50ರಷ್ಟು ಆರೋಪಿಗಳು 6 ತಿಂಗಳಿಗಿಂತಲೂ ಹೆಚ್ಚು ...ದಿಂದ ಜಾಮೀನು ಸಿಗದೆ ಜೈಲಲ್ಲೇ ಇದ್ದಾರೆ. ಒಮ್ಮೆ ...ಎಲ್ಲರ ಮುಖಗಳತ್ತ ಕಣ್ಣು ಹಾಯಿಸಿದರೆ ಸಾಕು, ಅವರ ವರ್ಗ ಹಿನ್ನೆಲೆ ಎದ್ದು ಕಾಣುತ್ತದೆ. ಶೇ. 80ರಷ್ಟು ಮಂದಿ ಬಡತನದ ಹಿನ್ನೆಲೆಯವರು. 20% ಮಧ್ಯಮ ವರ್ಗದವರು. ಶ್ರೀಮಂತ ಹಿನ್ನೆಲೆಯವರು ಒಬ್ಬರೂ ಇಲ್ಲ ಎಂದೇ ಹೇಳಬೇಕು. ಅಂಥವರು ಆಗಾಗ ಬಂದರೂ ಒಂದು ಅಥವಾ ಎರಡು ದಿನದಲ್ಲೇ ಜಾಮೀನು ಮಾಡಿಸಿಕೊಂಡು ಹೊರಟುಹೋಗುತ್ತಾರೆ.



ಬಡವರೇ ಏಕೆ ಹೆಚ್ಚಾಗಿದ್ದಾರೆ? ಬಡವರಿಗೇ ಏಕೆ ಬೇಲ್ ಸಿಗುತ್ತಿಲ್ಲ? ಬಡವರಿಗೇ ಏಕೆ ಶಿಕ್ಷೆಯಾಗುತ್ತದೆ? ಎಂಬ ಪ್ರಶ್ನೆ ಏಳುವುದು ಸಹಜ. ಇದರ ಸುತ್ತ ನಾನಾ ರೀತಿಯ ವ್ಯಾಖ್ಯಾನಗಳು, ವಿಶ್ಲೇಷಣೆಗಳು, ಚರ್ಚೆಗಳು ಪ್ರತಿನಿತ್ಯ ಜೈಲ್ ಆವರಣದಲ್ಲಿ ನಡೆಯುತ್ತವೆ. ಭಾರತದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಯಾವ ಕಾನೂನು ವಿಶ್ವವಿದ್ಯಾನಿಲಯದಲ್ಲೂ ನಡೆಯದಷ್ಟು ಉತ್ಕಟತೆಯೊಂದಿಗೆ ಚಿಂತನೆ ಇಲ್ಲಿ ನಡೆಯುತ್ತದೆ. ನಿಜಹೇಳಬೇಕೆಂದರೆ ಅಮೋಘವಾದ ಅನುಭವಜ್ಞಾನ ಅಡ್ಡಾದಿಡ್ಡಿಯಾಗಿ ಉಕ್ಕುಕ್ಕಿ ಚೆಲ್ಲಾಡುತ್ತಿರುತ್ತದೆ. ಅದನ್ನು ಆಲಿಸುವ, ಅದರಿಂದ ಕಲಿಯುವ ಮನಸ್ಸಿರಬೇಕಷ್ಟೇ.

ನಾನು ಹೈಸ್ಕೂಲಿನಲ್ಲಿದ್ದಾಗ ಚಿಕ್ಕಣ್ಣ ಎಂಬ ಕನ್ನಡದ ಮೇಷ್ಟ್ರು ಒಬ್ಬರಿದ್ದರು. "ಜಗತ್ತು ಅರ್ಥವಾಗಬೇಕಾದರೆ ಜೈಲಿಗೆ ಹೋಗಬೇಕು" ಎನ್ನುತ್ತಿದ್ದರು. ನಾವವರ ಮಾತನ್ನು ಒಪ್ಪದೆ ಬಾಲಿಶ ಚರ್ಚೆ ನಡೆಸಿದ್ದುಂಟು. ಅವರ ಮಾತು ಜೈಲಲ್ಲಿ ಮತ್ತೆ ಜ್ಞಾಪಕಕ್ಕೆ ಬಂತು. ಅದರಲ್ಲೆಷ್ಟು ಸತ್ಯವಿದೆ ಎಂಬುದು ಜೈಲಲ್ಲಿದ್ದಾಗಲೇ ಅರ್ಥವಾಗುತ್ತದೆ. ಜೈಲಿನಲ್ಲಿ ಚರ್ಚೆಯಾಗದ ವಿಚಾರವೇ ಇಲ್ಲ. ಪೊಲೀಸರ ದುರುಳತನ, ವಕೀಲರ ಹುಸಿ ಭರವಸೆಗಳು, ಸರ್ಕಾರಿ ವಕೀಲರ (ಪಿಪಿಗಳ) ಭ್ರಷ್ಟಾಚಾರ, ಜೈಲಧಿಕಾರಿಗಳ ದ್ವಂದ್ವ ನೀತಿ, ಹಳ್ಳಿಯ ರಾಜಕೀಯ, ಹಣವಂತರಿಗೆ ಇರುವ ಕಳ್ಳ ಮಾರ್ಗಗಳು, ತಪ್ಪು ಮಾಡಿದರೂ ದುಡ್ಡಿದ್ದರೆ ತಪ್ಪಿಸಿಕೊಳ್ಳಲು ಇರುವ ಒಳದಾರಿಗಳು, ದುರ್ಬಲರ ವಿಚಾರದಲ್ಲಿ ಬಿಗಿಯಾಗುವ, ಹಣವಂತರ ವಿಚಾರದಲ್ಲಿ ಬಾಲ ಅಲ್ಲಾಡಿಸುವ ನಿಯಮಗಳು, ಕೈದಿಗಳ ಮನೆಗಳ ಕರುಣಾಜನಕ ಪರಿಸ್ಥಿತಿ, ಅವರನ್ನೂ ಅಪರಾಧಿಗಳಂತೆ ಕಾಣುವ ಜೈಲು, ಅವರನ್ನು ಹೀರಲು ಕಾಯುವ ನ್ಯಾಯಾಲಯದ ಬಕಪಕ್ಷಿಗಳು, ಅಪರಾಧಕ್ಕೆ ಇಳಿಯಲು ಕಾರಣವಾದ ಬಡತನ ಅಥವಾ ಯುವಜನತೆಯಲ್ಲಿ ಬೆಳೆಯುತ್ತಿರುವ ಪುಂಡು ಸಂಸ್ಕೃತಿ, ಕಷ್ಟದಿಂದ ಹೊರಬರಲು ಅಥವಾ ಹೇಗಾದರೂ ಮಾಡಿ ಹಣವಂತರಾಗಲು ಕಾಣುವ ಕಳ್ಳಹಾದಿಗಳು, ಒಳಬಂದ ಮೇಲೆ ಮುಚ್ಚಿಹೋಗುವ ಬಾಗಿಲು, ಅಪರಾಧಿಗಳಿಗೂ ರಾಜಕೀಯ ಪಕ್ಷಗಳಿಗೂ ಇರುವ ಸಂಬಂಧ, ಸಿಕ್ಕಿಹಾಕಿಕೊಳ್ಳದೆ ಅಪರಾಧ ಮಾಡಲು ಇರುವ ಮಾರ್ಗಗಳು, ಸಿ.ಟಿ.ರವಿಯಂಥ ಮಿನಿ ಪುಢಾರಿಯು ಮನಿ ಮೇಕರ್ ಆಗಿ ಪರಿವರ್ತನೆಯಾಗಿದ್ದು ಹೇಗೆ? ಈ ಜಿಲ್ಲೆಯ ದೊಡ್ಡದೊಡ್ಡ ಖದೀಮರುಗಳ್ಯಾರು? ಇವರಿಗೂ ಪೊಲೀಸರಿಗೂ ನಡುವಣ ಸಂಬಂಧ, ರೇಪ್‌ಗಳು ಹೆಚ್ಚಾಗಲು ಕಾರಣವೇನು? ರೇಪ್ ವಿಚಾರದಲ್ಲಿ ನಿಜ ಕೇಸುಗಳಿಗಿಂತ ಹೆಚ್ಚು ಸುಳ್ಳು ಕೇಸುಗಳೂ ಜೈಲಿಗೆ ಬರಲು ಕಾರಣವೇನು? ಇತ್ಯಾದಿ ಇತ್ಯಾದಿ. ಪ್ರತಿನಿತ್ಯ ನೂರು ಪ್ರಶ್ನೆಗಳ ಸುತ್ತ ನೂರು ರೀತಿಯ ವ್ಯಾಖ್ಯಾನಗಳು. ಮೊದಲ ಬಾರಿಗೆ ಜೈಲಿಗೆ ಬಂದ ಹಲವರ ಅಭಿಪ್ರಾಯವೆಂದರೆ "ಇಲ್ಲಿ ಬಂದು ನಾನು ಸಾಕಷ್ಟು ಕಲಿತೆ". ಇಷ್ಟೊಂದನ್ನು ಇಷ್ಟು ಬೇಗ ಕಲಿಸುವ ಮತ್ತೊಂದು ವಿಶ್ವವಿದ್ಯಾಲಯ ಹೊರಗೆಲ್ಲಾದರೂ ಇರಲು ಸಾಧ್ಯವೆ? ಈ ವಿಶ್ವವಿದ್ಯಾಲಯದಲ್ಲಿ ಚರ್ಚಿಸಲು ಡಿಗ್ರಿ ಪಾಸ್ ಮಾಡಿರಬೇಕು, ಇಂಗ್ಲಿಷ್ ಬರಬೇಕು ಎಂಬುದಿಲ್ಲ, ಒಂದು ಸಬ್ಜೆಕ್ಟ್ ಬಗ್ಗೆ ಮಾತ್ರ ಮಾತಾಡಬೇಕೆಂದಿಲ್ಲ, ಭೇದಭಾವ ಇಲ್ಲದ ವಿಶ್ವಜ್ಞಾನ.

ಈ ಜ್ಞಾನದ ಅಭಿವ್ಯಕ್ತಿ ಅರಾಜಕವಾಗಿದ್ದರೂ, ವಿಚಿತ್ರವಾಗಿದ್ದರೂ, ವೈಪರೀತ್ಯಗಳಿಂದ ಕೂಡಿದ್ದರೂ ಸಾರ ಮಾತ್ರ ಒಂದೇ: "ಈ ನ್ಯಾಯ ಬಡವರ ಪರವಾಗಿಲ್ಲ". ಈ ದುಸ್ಥಿತಿಗೆ ಪರಿಹಾರವಾಗಿ ಚಿಮ್ಮುವ ಮಾರ್ಗೋಪಾಯಗಳೂ ಸಹ ಅತಿರೇಕ, ಆಕ್ರೋಶ ಹಾಗೂ ಅಸಹಾಯಕತೆಗಳಿಂದ ತುಂಬಿದ್ದರೂ ಬಹುಪಾಲು ಜನರ ಅಭಿಪ್ರಾಯ "ನಕ್ಸಲೈಟರು ಮಾಡುವುದೇ ಸರಿ ಸಾರ್".

ಹೀಗೆಂದ ಮಾತ್ರಕ್ಕೆ ಅವರೂ ನಕ್ಸಲೈಟರಾಗಿಬಿಡುತ್ತಾರೆ ಎಂದಲ್ಲ, ಆದರೆ ಮಡುಗಟ್ಟಿರುವ ಹತಾಶೆಯಿಂದ ಈ ಮಾತು ಮೂಡಿಬರುತ್ತಿದೆ. ನ್ಯಾಯಾಂಗ ವ್ಯವಸ್ಥೆಯ ಕ್ರೌರ್ಯ, ಸಂವೇದನಾರಾಹಿತ್ಯ ಭ್ರಷ್ಟಾಚಾರ ಹಾಗೂ ಪಕ್ಷಪಾತಿತನ ಇದಕ್ಕೆ ಕಾರಣವಾಗಿದೆ. ಸಮಾಜವೂ ಜೈಲನ್ನು ತನ್ನ ಜಗತ್ತಿನಿಂದ ಹೊರಗಿಟ್ಟಿದೆ (ಆಸ್ಪತ್ರೆ ಆವರಣದ ಯಾರೂ ಸುಳಿಯದ ಮೂಲೆಯಲ್ಲಿ ಶವಾಗಾರ ಇರುವಂತೆ, ನಗರಗಳ ಹೊರಗೆ ಜನರು ಬರಲು ಹೆದರುವ ಕಡೆ ಈ ಜೈಲೆಂಬ ಜೀವಂತ ಶವಾಗಾರಗಳಿವೆ). ಹೋರಾಟಗಾರರಾದ ನಾವು ಸಹ ಕಣ್ಣೆದುರಿಗೆ ಕಾಣುವ ಸಮಸ್ಯೆಗಳಿಗೆ ತಕ್ಕಮಟ್ಟಿಗೆ ಸ್ಪಂದಿಸುತ್ತೇವಾದರೂ, ಮರೆಮಾಚಲ್ಪಟ್ಟಿರುವ ಈ ನರಕಗಳ ಬಗ್ಗೆ ತಲೆ ಕೆಡಿಸಿಕೊಂಡಿರುವುದು ಬಹಳ ಕಡಿಮೆ. ಒಳಗಿನವರ ಅನಾಥ ಪ್ರಜ್ಞೆಗೆ ನಮ್ಮ ನಿಷ್ಕ್ರಿಯತೆ ಹಾಗೂ ಸಂವೇದನಾರಹಿತತೆಯೂ ಕಾರಣವಾಗಿದೆ.


ಕಷ್ಟದಲ್ಲಿರುವವರ ಕತೆ ಕೇಳಿಸಿಕೊಳ್ಳಲು, ನಿರಾಶರಾದವರಲ್ಲಿ ವಿಶ್ವಾಸವನ್ನು ಮೂಡಿಸಲು, ಕೆಲವರಿಗೆ ಹೊರಬರುವುದಕ್ಕೆ ನೆರವಾಗಲು ಒಂದಷ್ಟು ಪ್ರಯತ್ನ ಮಾಡಿದೆನಾದರೂ ಅವೆಲ್ಲಾ ಏನಕ್ಕೆ ಸಮ. ಸಮುದ್ರಕ್ಕೆ ಚಮಚ ಸಕ್ಕರೆ ಹಾಕಿದಂತೆ. ಜಡಗಟ್ಟಿ ಹೋಗಿರುವ ಈ ಪೊಲೀಸ್ ಹಾಗೂ ನ್ಯಾಯಾಂಗ ವ್ಯವಸ್ಥೆಗಳಲ್ಲಿ ಬದಲಾವಣೆ ಬರುವಂತೆ ಮಾಡುವುದು ಸುಲಭವಲ್ಲ. ಹಾಗಂತ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಕೂರುವುದೂ ನ್ಯಾಯಸಮ್ಮತವಲ್ಲ. ಜನಪರ ವಕೀಲರ, ಪತ್ರಕರ್ತರ ಹಾಗೂ ಸಂಘಟನೆಗಳ ಗಮನ ಈ ಕಡೆ ಹರಿದರೆ ಈ ಜೀವಂತ ಶವಾಗಾರಗಳಲ್ಲಿರುವ ಬಡ 'ಪಾಪಿ'ಗಳ ಬದುಕಿನಲ್ಲಿ ಭರವಸೆಯ ಕಿರಣಗಳು ಮೂಡುತ್ತವೆ. ಜಾಮೀನು ಸಿಕ್ಕಿ ಹೊರಗೆ ಹೋದ ನಂತರ ಈ ನಿಟ್ಟಿನಲ್ಲಿ ನನ್ನಿಂದಾಗುವುದನ್ನು ಮಾಡಬೇಕೆಂದುಕೊಂಡಿದ್ದೇನೆ. ಏನು ಮಾಡುತ್ತೀನೋ ಗೊತ್ತಿಲ್ಲ. ■

# ...ಸೂರ್ಯ ಪಶ್ಚಿಮದಲ್ಲಿ ಉದಯಿಸಲಿಲ್ಲ...

...ಭಾರತದ ಪ್ರಜೆಗಳೆ ಆದ ಫಾದರ್ ಕುರಿಯಕೋಸ್ ...ರ ಮತ್ತು ಮದರ್ ಯೂಫ್ರೇಸಿಯ ಸಂತ ಪದವಿಗೆ ...ರುವುದನ್ನು ಸಂಭ್ರಮಿಸಲೆಂದು ಸೈರೊ ಮಲಬಾರ್ ...ನವರು ಇತ್ತೀಚೆಗೆ ದಿಲ್ಲಿಯಲ್ಲಿ ಹಮ್ಮಿಕೊಂಡಿದ್ದ ...ರಂಭವೊಂದಕ್ಕೆ ಪ್ರಧಾನಿ ಮೋದಿಯನ್ನು ಮುಖ್ಯ ...ಥಿಯಾಗಿ ಆಹ್ವಾನಿಸಲಾಗಿತ್ತು, ಅಲ್ಲಿ ಮೋದಿ ಪ್ರಜೆಗಳ ...ರ್ಮಿಕ ಹಕ್ಕುಗಳ ಬಗ್ಗೆ ದೊಡ್ಡ ಲೆಕ್ಚರ್ ಕೊಟ್ಟ.

...ಸರ್ಕಾರ ಎಲ್ಲಾ ಧರ್ಮಗಳನ್ನು ...ನವಾಗಿ ಗೌರವಿಸುತ್ತದೆ; ಹಿಂಸೆಯನ್ನು ...ವಾಗಿ ಖಂಡಿಸುತ್ತದೆ; ಧಾರ್ಮಿಕ ...ಪುಗಳಿಗೆ ಅನ್ಯರ ವಿರುದ್ಧ ದ್ವೇಷ ...ಸಲು ಬಿಡುವುದಿಲ್ಲ ಎಂದೆಲ್ಲ ...ಷಿಸಿದ. ಇದನ್ನು ಕೇಳಿದವರಿಗೆಲ್ಲ ...ರ್ಯವೋ ಆಶ್ಚರ್ಯ!


...ಗಾವೆಲ್ಲ ನೋಡಿರುವ ಹಾಗೆ ಕೇಂದ್ರದಲ್ಲಿ ...ದಿ ಸರ್ಕಾರದ ಆಡಳಿತ ಶುರುವಾದ ...ಯಿತು ಸಂಘ ಪರಿವಾರದ ಪುಡಿ ...ಂಡದುಗಳಿಗೆ ಹಿಂಸೆ ಸಂಚಾರವಾಗಿದೆ. ...ಸೇರಿಕೊಂಡು ದೇಶದುದ್ದಗಲಕ್ಕೂ ...ಸಂಖ್ಯಾತರ ವಿರುದ್ಧ ದ್ವೇಷದ ಭಾಷಣ, ...ಳ ಮತ್ತು ಹಿಂಸಾಚಾರಗಳನ್ನು ...ಬಿಟ್ಟಿದ್ದಾರೆ. ಚರ್ಚು ಸಂಘಟನೆಗಳು ...ತಿ ದೇಶದ ಕೋಮು ಸಾಮರಸ್ಯಕ್ಕೆ ...ಸ್ವರೂಪದ ವಿಚಾರ ವಿನ್ಯಾಸದಂತ ದಾಸ್ತಾನ ...ದೆಗೆ ಗುರಿಯಾಗಿದೆ. ಅದರೂ ದೇಶದ ...ಪ್ರಧಾನಿಯೂ ಆದ ಮೋದಿ ಪೌಗ್ಗೆ ...ಇದುವರೆಗೆ ಐದು ಚರ್ಚುಗಳ ಮೇಲೆ ದಾಳಿಗಳಾಗಿವೆ ಮತ್ತು ಒಂದು ಶಾಲೆಯನ್ನು ಪುಡಿಗುಟ್ಟಲಾಗಿದೆ. ಕ್ರೈಸ್ತ ಸಮುದಾಯದ ಪ್ರತಿನಿಧಿಗಳು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ, ಅವರು ಜೂನ್‌ನಿಂದ ತನ್ನನ್ನು ಭೇಟಿ ಮಾಡಲು ಪ್ರಯತ್ನಿಸುತ್ತಿದ್ದರೂ ಮೋದಿ ಮಾತ್ರ ಸಂಪೂರ್ಣ ನಿರಾಸಕ್ತನಾಗಿದ್ದ. ಕೊನೆಗೊಮ್ಮೆ ಕ್ರಿಸ್‌ಮಸ್ ಮುನ್ನಾದಿನ ಸಂದರ್ಶನದ ಅವಕಾಶ ದೊರೆತಾಗ ಕ್ರೈಸ್ತ ಪ್ರತಿನಿಧಿಗಳು ಮರುಮತಾಂತರ, ಚರ್ಚ್ ದಾಳಿಗಳು ಮುಂತಾದ ಘಟನೆಗಳ ಬಗ್ಗೆ ಆತಂಕ ತೋಡಿಕೊಂಡರು. ಆದರೂ ಮೋದಿ ಯಾವುದೇ ಕ್ರಮ ಕೈಗೊಳ್ಳಲು ನಿರಾಕರಿಸಿದ್ದ.




ಅದೇ ಮೋದಿ ಈಗ ಇದ್ದಕ್ಕಿದ್ದಂತೆ ಧಾರ್ಮಿಕ ಹಕ್ಕುಗಳನ್ನು ಎತ್ತಿಹಿಡಿಯಬೇಕೆಂದು ಕರೆಕೊಟ್ಟಿರುವುದಾದರೂ ಹೇಗೆ? ಹಾಗಾದರೆ ಆತ ಏಕಾಏಕಿ ಬದಲಾಗಿಬಿಟ್ಟನೆ, ಹೇಗೆ ಬದಲಾದ, ಏಕೆ ಬದಲಾದ ಎಂಬಿತ್ಯಾದಿ ಪ್ರಶ್ನೆಗಳು ಹುಟ್ಟಿರುವುದು ಸಹಜವೇ ಆಗಿದೆ. ವಾಸ್ತವದಲ್ಲಿ ಸೂರ್ಯ ಪಶ್ಚಿಮದಲ್ಲಿ ಉದಯಿಸಲೂ ಇಲ್ಲ, ಹುಲಿಯ ಪಟ್ಟೆ ಬದಲಾಗಲೂ ಇಲ್ಲ, ಇವತ್ತು ಸನ್ನಿವೇಶ ಹೇಗಿದೆಯೆಂದರೆ ಸಂಘದ ನಿಷ್ಠಾವಂತ ಸ್ವಯಂಸೇವಕನಾದ ಮೋದಿಗೆ ಮನಸ್ಸಿಲ್ಲದ ಮನಸ್ಸಿನಿಂದ ಮತೀಯ ದ್ವೇಷವನ್ನು ಖಂಡಿಸುವ ಮಾತುಗಳನ್ನು ಆಡಲೇಬೇಕಾಗಿ ಬಂದಿದೆ. ಕ್ರೈಸ್ತರ ಮುಂದೆ ಧಾರ್ಮಿಕ ಸಹಿಷ್ಣುತೆ ಬಗ್ಗೆ ಭಾಷಣ ಬಿಗಿದ ಇದೇ ಮೋದಿ ಚಡ್ಡಿ ಪಡೆಗಳು ಮುಸ್ಲಿಮರ ವಿರುದ್ಧ ನಡೆಸುತ್ತಿರುವ ದುಷ್ಕೃತ್ಯಗಳನ್ನು ಇವತ್ತಿನವರೆಗೂ ಖಂಡಿಸಿಯೂ ಇಲ್ಲ, ಮುಸ್ಲಿಂ ಸಮುದಾಯದಲ್ಲಿ ವಿಶ್ವಾಸ ತುಂಬುವ ಪ್ರಯತ್ನವನ್ನೂ ಮಾಡಿಲ್ಲ ಎಂಬುದನ್ನು ಗಮನಿಸಬೇಕು.

ಮೋದಿಯ ಈ ಮೇಲ್ನೋಟದ ಬಣ್ಣ ಬದಲಾವಣೆಯ ಹಿಂದೆ ಕನಿಷ್ಠ ಮೂರು ಕಾರಣಗಳನ್ನು ಗುರುತಿಸಬಹುದು. ಮೊದಲನೆಯದು ಮತ್ತು ಮುಖ್ಯವಾದುದು: ಕ್ರೈಸ್ತರಿಗೆ ಯುರೋಪ್, ಅಮೆರಿಕಗಳ ಬೆಂಬಲವಿದೆಯಾದರೆ ಮುಸ್ಲಿಮರಿಗೆ ಅದಿಲ್ಲ. ಲವ್ ಜಿಹಾದ್, ಮುಜಫರ್‌ನಗರ ಮತ್ತಿತರ ಗಲಭೆಗಳ ಸಂದರ್ಭದಲ್ಲಿ ಏನೂ ಪ್ರತಿಕ್ರಿಯೆ ನೀಡಿರದ ಅಮೆರಿಕದ ಅಧ್ಯಕ್ಷ ಒಬಾಮ ಗಮನಾರ್ಹವಾಗಿ ಎರಡೆರಡು ಬಾರಿ ಮೋದಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದು ಚರ್ಚ್ ದಾಳಿಗಳ ನಂತರ. ಅಮೆರಿಕದ ಖಾಸ್ ಬಿಸಿನೆಸ್ ಪಾರ್ಟನರ್ ಎನ್ನಲಾಗಿರುವ ಭಾರತದಲ್ಲಿ ಹೂಡಿಕೆ ಮಾಡಲಿರುವ ಅಮೆರಿಕದ ಕಂಪನಿಗಳಿಗೆ ಅಸಮಾಧಾನವಾಗದಂತೆ ನೋಡಿಕೊಳ್ಳುವುದು ಮೋದಿ ಸರ್ಕಾರದ ಆದ್ಯ ಕರ್ತವ್ಯ ಆಗಬೇಡವೆ? ಮೋದಿಯ ಮೆತ್ತಗಿನ ಮಾತುಗಳಿಗೆ ಮತ್ತೆರಡು ಕಾರಣಗಳಿರಬಹುದು. ಒಂದು ದಿಲ್ಲಿ ಚುನಾವಣೆಯ ಫಲಿತಾಂಶವಾದರೆ ಇನ್ನೊಂದು ಬರುವ ಬಜೆಟ್ ಅಧಿವೇಶನದಲ್ಲಿ ಪ್ರತಿಪಕ್ಷಗಳ ಆಕ್ರೋಶವನ್ನು ಒಂದಿಷ್ಟು ತಗ್ಗಿಸುವುದು.

ಭಾರತದ ಜನತೆಗೆ ಮೋದಿಯ ಅಸಲಿಯತ್ತು ಏನೆಂದು ಈಗಾಗಲೆ ಅರ್ಥವಾಗಿದೆ. ಆತನ ಹಾವಭಾವಯುತ ಭಾಷಣಗಳೆಲ್ಲವೂ ಬಂಡವಾಳವಿಲ್ಲದ ಬಡಾಯಿ ಎಂಬುದನ್ನು ಅರಿತ ಜನ ಮೊನ್ನಿನ ದಿಲ್ಲಿ ಚುನಾವಣೆಗಳಲ್ಲಿ ಬಿಜೆಪಿಯನ್ನು ಧೂಳೀಪಟ ಮಾಡಿದ್ದಾರೆ. ಇದು ಇಡೀ ದೇಶಕ್ಕೆ ವ್ಯಾಪಿಸಿದರೆ ಏನು ಗತಿ ಎಂದು ಚಿಂತಾಕ್ರಾಂತರಾದ ಗುರುಶಿಷ್ಯರ ಜೋಡಿ ಈಗ ಮಾಡಬೇಕಿರುವುದನ್ನು ಸದ್ದಿಲ್ಲದೆ ಮಾಡಿ ಹೆಚ್ಚು ಗದ್ದಲ ಎಬ್ಬಿಸಬೇಡಿ ಎಂದು ಹಿರಿಯರೇ ಸೂಚನೆ ನೀಡಿರುವಂತಿದೆ. ಪ್ರತಿಪಕ್ಷಗಳಂತೂ ಈ ಬಾರಿಯ ಪಾರ್ಲಿಮೆಂಟ್ ಅಧಿವೇಶನದ ವೇಳೆ ಕೋಮು ಸಾಮರಸ್ಯ ಕದಡುವ ಘಟನೆಗಳು, ಸುಗ್ರೀವಾಜ್ಞೆಗಳು, ಮಾನವ ಹಕ್ಕು ಕಾರ್ಯಕರ್ತರಿಗೆ ಮತ್ತು ಹೋರಾಟಗಾರರಿಗೆ ಕಿರುಕುಳ ಮುಂತಾದ ವಿಷಯಗಳನ್ನೆತ್ತಿಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಜ್ಜಾಗಿವೆ. ಹೀಗೆ ಈ ಮೂರು ಕಾರಣಗಳು ಸೇರಿ ಮೋದಿಯ ಬಾಯಲ್ಲಿ ಧಾರ್ಮಿಕ ಹಕ್ಕುಗಳ ಮಾತುಗಳನ್ನಾಡಿಸಿರಬೇಕು. ■



# ಟೀಕೆಯೂ-ನಿಂದನೆಯೂ; ಭಿನ್ನಮತವೂ-ಭಯೋತ್ಪಾದನೆಯೂ



ಮಂಡ್ಯದಲ್ಲಿ ಫೆಬ್ರವರಿ 15ರಂದು ಬಹುಜನ ವಿದ್ಯಾರ್ಥಿ ಸಂಘಟನೆಯ ರಾಜ್ಯ ಸಮ್ಮೇಳನ ಹಾಗೂ 'ನಮ್ಮ ರಾಷ್ಟ್ರೀಯ ಗ್ರಂಥ ಸಂವಿಧಾನವೋ ಅಥವಾ ಭಗವದ್ಗೀತೆಯೋ' ಎಂಬ ವಿಷಯದ ಕುರಿತ ವಿಚಾರ ಸಂಕಿರಣದ ಉದ್ಘಾಟಕನಾಗಿ ನಾನು ಭಗವದ್ಗೀತೆಯ ಬಗ್ಗೆ ಹೇಳಿದ ಅಭಿಪ್ರಾಯ ಈ ಕೆಳಗಿನಂತಿದೆ. ಭಾರತ ದೇಶವು 1950 ಜನವರಿ 26ರಂದು ಸಂವಿಧಾನವನ್ನು ಅಂಗೀಕರಿಸಿ ಭಾರತವನ್ನು 'ಧರ್ಮನಿರಪೇಕ್ಷ, ಸಮಾಜವಾದಿ, ಪ್ರಜಾತಂತ್ರಿಕ ಗಣರಾಜ್ಯ' ಎಂದು ಘೋಷಿಸಿದೆ. ಸಮಾಜವಾದಿ ಎನ್ನುವ ಪದ ಅನಂತರದಲ್ಲಿ ತಿದ್ದುಪಡಿಯ ಮುಖಾಂತರ ಸೇರಿಕೊಂಡ ಪದ. ಆದರೆ ಧರ್ಮನಿರಪೇಕ್ಷ ಹಾಗೂ ಪ್ರಜಾತಾಂತ್ರಿಕ ಎನ್ನುವುದು ಮೊದಲಿನಿಂದಲೂ ಇದೆ.

ಹೀಗಿರುವಾಗ ಕೇಂದ್ರ ಸರ್ಕಾರದಲ್ಲಿ ಸಚಿವೆಯಾಗಿರುವ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಎಂದು ಘೋಷಿಸಬೇಕೆಂದು ಹೇಳಿಕೆ ಕೊಟ್ಟಿರುವುದು ಅಸಂವಿಧಾನಿಕ ನಿಲುವಾಗಿದೆ ಮತ್ತು ಸಂವಿಧಾನದ ಮೂಲ ಆಶಯಗಳಿಗೆ ಭಂಗ ಉಂಟು ಮಾಡುವಂತಹದ್ದಾಗಿದೆ. ಸಂವಿಧಾನವು ಈಗಿರುವ ಸ್ವರೂಪದಲ್ಲಿ ಯಾವುದೇ ಧಾರ್ಮಿಕ ಗ್ರಂಥವನ್ನೂ ರಾಷ್ಟ್ರೀಯ ಗ್ರಂಥ ಎಂದು ಕರೆಯಲು ಅವಕಾಶವಿಲ್ಲ.

ಈ ಸಂವಿಧಾನದ ಆಶಯಗಳಡಿ ಹಾಗೊಂದು ಗ್ರಂಥವನ್ನು ಪರಿಗಣಿಸಲು ಅವಕಾಶವಿಲ್ಲದಿರುವಾಗ ಆದರ ಮೂಲ ತತ್ವಗಳಾದ ಧರ್ಮ ನಿರಪೇಕ್ಷ, ಸಮಾಜವಾದಿ ಪ್ರಜಾತಂತ್ರಿಕ ಗಣರಾಜ್ಯ ಎಂಬುದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಹಾಗೆ ತಿದ್ದುಪಡಿ ಮಾಡುವುದೆಂದರೆ ಕಳೆದ 60 ವರ್ಷಗಳಿಂದ ದೇಶವು ಅನುಷ್ಠಾನಗೊಳಿಸುತ್ತಾ ಬಂದಿರುವ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಸರ್ವಧರ್ಮ ಸಮಭಾವ ಎಂಬ ನೀತಿಗೆ ತದ್ವಿರುದ್ಧವಾಗಿದ್ದು, ಆ ರೀತಿ ಮೂಲ ತಳಪಾಯವನ್ನ ಬದಲಿಸುವ ಯಾವುದೇ ಪ್ರಯತ್ನವನ್ನು ಭಾರತದ ಬಹುಜನರಾದ ಶೂದ್ರರು, ದಲಿತರು, ಮಹಿಳೆಯರು, ಇತರೆ ಧಾರ್ಮಿಕ ಅಲ್ಪಸಂಖ್ಯಾತರು ವಿರೋಧಿಸಬೇಕಾಗುತ್ತದೆ. ಯಾಕೆಂದರೆ ಸಂವಿಧಾನವು ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸಾದ 'ಬಹುಜನ ಹಿತಾಯ, ಸರ್ವಜನ ಸುಖಾಯ' ಎನ್ನುವ ನಿಲುವಿಗೆ ಬದ್ಧವಾದುದಾಗಿದ್ದು, ಅದು ಅಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ರಾಷ್ಟ್ರವನ್ನು ಮುನ್ನಡೆಸಿದ ಬಹುಪಾಲು ಹಿರಿಯರ ಆದರ್ಶವೂ ಆಗಿತ್ತು.

ಎರಡನೆಯ ಕಾರಣ, ಭಗವದ್ಗೀತೆಯು ಹಿಂದೂ ಎಂದು ಕರೆಸಿಕೊಳ್ಳುವ ಹಲವಾರು ಸಮುದಾಯಗಳು, ಪಂಗಡಗಳು, ದೈವಶ್ರದ್ಧಾ ಪಂಥಗಳು ಇವುಗಳಿಗೆ ಏಕೈಕ ಪ್ರತಿನಿಧಿ ಗ್ರಂಥವಲ್ಲ. ಕಡೆಗೆ ಹಿಂದೂ ಧರ್ಮದ ಅಧಿಕೃತ ವಕ್ತಾರರೆಂಬಂತೆ ಮಾತನಾಡುತ್ತಿರುವ ಪುರೋಹಿತಶಾಹಿ ಬ್ರಾಹ್ಮಣರೆಲ್ಲರಿಗಾದರೂ ಅದು ಸರ್ವಮಾನ್ಯವಲ್ಲ. ಈ ಮಾತನ್ನು ಬ್ರಾಹ್ಮಣರಲ್ಲಿರುವ ಲೌಕಿಕ ಪಂಗಡದವರಿಗೆ ಸಂಪೂರ್ಣ ಅನ್ವಯಿಸಲಾಗದಿದ್ದರೂ ಪೌರೋಹಿತ್ಯ ಮಾಡುವ ವೈದಿಕ ಪಂಗಡಗಳಿಗೆ ಖಂಡಿತವಾಗಿ ಹೇಳಬಹುದಾದ ಮಾತಾಗಿದೆ. ಅವರಲ್ಲಿ ಶೈವರು, ಸ್ಮಾರ್ತರು, ಸಂಕೇತಿಗಳು, ಸನಾತನಿಗಳು, ಸಾತ್ವತರು, ಹೊಯ್ಸಳ ಕರ್ನಾಟಕರು, ಕೊಂಕಣಿಗಳು, ಶಿವಳ್ಳಿಯವರು ಮುಂತಾದ ಉಪಪಂಗಡಗಳಿವೆ. ಭಗವದ್ಗೀತೆ ಎನ್ನುವುದು ಮುಖ್ಯವಾಗಿ ಶ್ರೀವೈಷ್ಣವರಿಗೆ, ಚಿತ್ಪಾವನರಿಗೆ, ಮಾಧ್ವರಿಗೆ, ಭಾಗವತರಿಗೆ ಮುಂತಾದವರಿಗೆ ಅಧಿಕಾರಯುಕ್ತ ಧರ್ಮಗ್ರಂಥವಾಗಿದೆ. ಅದರಲ್ಲಿ ಅದರ ಮೂಲ ಹಿಡಿದು ಹೇಳಬೇಕೆಂದರೆ ಭಾಗವತ ಪಂಥ ಅದರ ಹುಟ್ಟಿನಲ್ಲಿ ಕರ್ಮಯೋಗ, ಜ್ಞಾನಯೋಗ ಇವುಗಳಿಗೆ ಭಿನ್ನವಾಗಿ ಭಕ್ತಿಮಾರ್ಗವನ್ನು ಪ್ರತಿಪಾದಿಸಿದ, ಅಂದಿನ ಜನಸಾಮಾನ್ಯರಿಗೆ ಆದರಣೀಯವಾಗಿದ್ದ ಒಂದು ಪಂಥ. ಮೂಲದ ಭಾಗವತವು ವೇದಗಳನ್ನು, ಉಪನಿಷತ್ತುಗಳನ್ನು ನಂಬುವುದಕ್ಕಿಂತ ಕೃಷ್ಣೋಪಾಸನೆಯ ಮಾರ್ಗವನ್ನು ಪ್ರತಿಪಾದಿಸಿದ ಪಂಥ. ಈಗಿನ ಗುಡಿಗಳು, ಪೂಜಾದಿಗಳು, ದೇವತಾಮೂರ್ತಿಗಳು, ಪ್ರಸಾದ ನೈವೇದ್ಯಗಳು ಮುಂತಾದವುಗಳು ಮೂಲದ ಅಂದರೆ ಸನಾತನ ವೈದಿಕ ಪಂಥಕ್ಕೆ ನಿಷಿದ್ಧ ಆಚರಣೆಗಳು. ಮೂರ್ತಿ ಪೂಜೆ ಮಾಡುವವರನ್ನು, ದೇವರಿಗೆ ಅರ್ಪಿಸಿದ ಅನ್ನ ತಿನ್ನುವವರನ್ನು ಒಂದು ಕಾಲದಲ್ಲಿ ವೈದಿಕ ಬ್ರಾಹ್ಮಣರು ಹೀನಾಯಗೊಳಿಸಿ ನೋಡುತ್ತಿದ್ದ ಕಾಲವಿತ್ತು. ಅದೆಲ್ಲ ಕಲಸುಮೇಲೋಗರವಾಗಿ ವೈದಿಕ ಪಂಥದ ದ್ರಾವಿಡೀಕರಣದ ಒಂದು ಭ್ರಷ್ಟರೂಪವಾಗಿ ಇಂದಿನ ಪುರೋಹಿತಶಾಹಿ ರೂಪುಗೊಂಡಿದೆ. ಹೀಗಿರುವಾಗ ಬ್ರಾಹ್ಮಣರಲ್ಲೂ ಎಲ್ಲ ಪಂಗಡಗಳವರಿಗೆ ಮಾನ್ಯವಾಗದ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥವೆಂದು ಮಾನ್ಯ ಮಾಡುವುದು ಯಾವುದೋ ಒಂದೆರಡು ಪಂಗಡಗಳ ಶ್ರದ್ಧಾ ಪಂಥಕ್ಕೆ ಮಾನ್ಯತೆ ನೀಡುವುದಾಗಿರುತ್ತದೆ. ಆದ್ದರಿಂದ ಈ ಕಾರಣದಿಂದಲೂ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಎಂದು ಮಾನ್ಯ ಮಾಡುವುದು ಏಕಪಕ್ಷೀಯವಾಗುತ್ತದೆ.

ನಂತರ ಮತ್ತೊಂದು ಮುಖ್ಯಾಂಶವೇನೆಂದರೆ, ಭಗವದ್ಗೀತೆಯಲ್ಲಿ ಸಾಂಖ್ಯಯೋಗ ಎಂಬ ಅಧ್ಯಾಯವಿರುವಂತೆಯೇ ಚಾತುರ್ವರ್ಣ ವ್ಯವಸ್ಥೆಯ ಸಮರ್ಥನೆ ಶೂದ್ರರೂ, ಮಹಿಳೆಯರು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆಯನ್ನು ನಿಷ್ಠೆಯಿಂದ ಮಾಡಿದರೆ ಮಾತ್ರ ಅವರಿಗೆ ಮುಕ್ತಿ ದೊರೆಯಲು ಸಾಧ್ಯ ಎಂಬ ಮಾತುಗಳೂ ಇವೆ. ಈ ಮಾತುಗಳು ಭಾಗವತ ಪಂಥದತಾತ್ವಿಕತೆಯನ್ನು ವಿವರಿಸಲು ನಿರ್ಮಾಣವಾದ ಭಗವದ್ಗೀತೆಯಲ್ಲಿ (ಭಾಗವತ್ ಗೀತೆ) ಹೇಳಿರಲು ಸಾಧ್ಯವಿಲ್ಲ. ಬದಲಾಗಿ ಭಗವದ್ಗೀತೆಯನ್ನು ಚಾತುರ್ವರ್ಣ್ಯ ವ್ಯವಸ್ಥೆಯ ಸಮರ್ಥನೆಗಾಗಿ ಬಳಸಿಕೊಳ್ಳಲು ಶುರುವಾದ ಕಾಲಘಟ್ಟದವು ಇವಾಗಿರಬೇಕೆಂಬುದು ಹಲವರ ಅಭಿಮತವಾಗಿದೆ. ಇದು ಹೇಗೇ ಇರಲಿ ಪ್ರಸ್ತುತದಲ್ಲಿ ಅದರ ಪ್ರತಿಪಾದನೆಯೊಳಗೆ ಚಾತುರ್ವರ್ಣ್ಯ ವ್ಯವಸ್ಥೆ ಹಾಗೂ ಮೇಲುಕೀಳು ಎಂಬ ಜಾತಿ ವಿಂಗಡಣೆಯ ಪ್ರಸ್ತಾಪವಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ಪ್ರಜಾಪ್ರಭುತ್ವವೇ ಧರ್ಮ. ಸಂವಿಧಾನವೇ ನಮ್ಮ ಪವಿತ್ರ ಗ್ರಂಥ. ಅದರ ಆಶಯಕ್ಕೆ ವಿರುದ್ಧವಾಗಿರುವ ಯಾವುದೇ ಗ್ರಂಥವನ್ನು ಅಥವಾ ನೀತಿಯನ್ನು ಸರ್ಕಾರವು ಅಧಿಕೃತವಾಗಿ ಮಾನ್ಯಗೊಳಿಸಲು ಸಾಧ್ಯವಿಲ್ಲ.

ಇಷ್ಟರ ಮೇಲೆ ಯಾವುದಾದರೊಂದು ಧರ್ಮಗ್ರಂಥವನ್ನು ರಾಷ್ಟ್ರೀಯ ಗ್ರಂಥವೆಂದು ಘೋಷಿಸಲು ಅವಕಾಶವಿರುವುದೇ ಆದಲ್ಲಿ ಅತ್ಯಂತ ಪ್ರಾಚೀನವಾದ ಸಮಾನತೆಯ, ಪ್ರಜಾತಂತ್ರದ ನಿಯಮಗಳನ್ನು ಹೊಂದಿರುವ ಮೌಢ್ಯ ವಿರೋಧಿ, ಪೌರೋಹಿತ್ಯ ವಿರೋಧಿ ಅಂಶಗಳನ್ನು ಒಳಗೊಂಡಿರುವ ಸಾಕ್ಯಮುನಿ ಗೌತಮಬುದ್ಧನಿಂದ ಪ್ರತಿಪಾದಿತವಾದ 'ಧಮ್ಮಪದ'ವನ್ನು ಪರಿಗಣಿಸುವುದು ಸೂಕ್ತ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಅಥವಾ ನಾಥ ಸಿದ್ಧ ಪಂಥದ ತಾತ್ವಿಕ ಗ್ರಂಥ ಅಥವಾ ಕನ್ನಡದ ವಚನ ಸಂಪುಟಗಳನ್ನು ಹಾಗೆ ರಾಷ್ಟ್ರೀಯ ಗ್ರಂಥ ಎಂದು ಮಾನ್ಯ ಮಾಡುವುದು ಹೆಚ್ಚು ಸಮರ್ಪಕವಾಗಿರುತ್ತದೆ. ಯಾಕೆಂದರೆ ಸಂವಿಧಾನ ಪ್ರತಿಪಾದಿಸುವ ಧರ್ಮ ನಿರಪೇಕ್ಷತೆ, ಜಾತಿ ಸಮಾನತೆ, ಮೌಢ್ಯ ವಿರೋಧಿ ವೈಚಾರಿಕತೆ ಹಾಗೂ ಸರ್ವ ಸಂಕ್ಷೇಮದ ಅಂಶಗಳನ್ನು ಈಗ ನಾನು ಸೂಚಿಸಿದ ಗ್ರಂಥಗಳಲ್ಲಿ ಹೆಚ್ಚು ಕಾಣಬಹುದಾಗಿದೆ. ಇದು ಹೇಗಿದ್ದರೂ ಸದ್ಯಕ್ಕೆ ಅವುಗಳಲ್ಲೂ ವಿರೂಪಗಳು ನುಸುಳಿಕೊಂಡಿರುವುದರಿಂದ ಇದ್ಯಾವ ಗೊಡವೆಗೂ ಹೋಗದಿರುವುದೇ ಅತ್ಯಂತ ಸೂಕ್ತ ಆಯ್ಕೆ.

ಮೇಲ್ಕಂಡ ಅಂಶಗಳನ್ನು ನನ್ನ ಉದ್ಘಾಟನಾ ಭಾಷಣದಲ್ಲಿ ನನ್ನದೇ ಶೈಲಿಯಲ್ಲಿ ಮಂಡಿಸಿದೆ. ಭಗವದ್ಗೀತೆಯೂ ಒಂದು ಪೂಜ್ಯಗ್ರಂಥ. ಅದರಲ್ಲೂ ಅದು ಕೃಷ್ಣನಿಂದ ಬೋಧಿಸಲ್ಪಟ್ಟಿದೆ. ಕೃಷ್ಣ ನಮ್ಮ ಕಪ್ಪು ಜನ ಸಮುದಾಯಗಳ ಆರಾಧ್ಯದೈವನಾಗಿ ವಿರಾಟ್ ಸ್ವರೂಪ ಪಡೆದುಕೊಂಡಿರುವವನು ಎಂಬ ಸಾಂಸ್ಕೃತಿಕ ಪರಿಗಣನೆಯನ್ನು ಇಟ್ಟುಕೊಂಡೇ ಬಲಪಂಥೀಯ ರಾಜಕಾರಣದ ವಿತಂಡವಾದಗಳನ್ನು, ಕುತರ್ಕಗಳನ್ನು, ಬೇ ಬೇರೆ ಧಾರ್ಮಿಕ ಪಂಗಡಗಳ ನಡುವೆ ಅಸಹನೆ ಸೃಷ್ಟಿಸು ಕುಟಿಲತೆಯನ್ನು ಮಾತ್ರ ಟೀಕಿಸಿ ಮಾತನಾಡಿದೆ.


ಯಾವುದಾದರೊಂದು ಅಂಶವನ್ನು ಯಾವುದೆ ಬೈಗುಳದ ಶಬ್ದ ಬಳಸದೇ, ನಿಂದಿಸದೇ ನ ಅಭಿಪ್ರಾಯಾನುಸಾರ ಅದನ್ನು ಟೀಕಿಸಿದರೆ ಅವರದನ ನಿಂದನೆ ಎಂದು ಆರೋಪಿಸಿದ್ದಾರೆ. ನಾನು ಈ ರಾಷ್ಟ್ರ ಪ್ರಜೆಯಾಗಿ ಇದೇ ಸಂವಿಧಾನ ಬದ್ಧವಾಗಿ ರಚನೆಗೊಂಡಿರು ಕರ್ನಾಟಕ ಸರ್ಕಾರವು ನಿಯೋಜಿಸಿರುವ ಒಂದು ಜವಾಬ್ದ ನಿರ್ವಹಿಸುತ್ತಿರುವವನಾಗಿ, ಸಂವಿಧಾನದ ಅಭಿವ್ಯಕ್ತಿ ಸ್ವಾತಂ ್ರ್ಯದ ಪರಿಮಿತಿಗಳನ್ನು ಗಮನದಲ್ಲಿಟ್ಟುಕೊಂಡೇ ನ ಭಿನ್ನಮತವನ್ನು ವ್ಯಕ್ತಪಡಿಸಿದೆ. ಭಿನ್ನಮತಕ್ಕೆ ಅವರ ತೋರಿಸುತ್ತಿರುವ ಪ್ರತಿಕ್ರಿಯೆ ಪರೋಕ್ಷ ಭಯೋತ್ಪಾದನ ಮಾಡಿಲ್ಲದ ನಿಂದನೆ ಮತ್ತು ಅವಹೇಳನವನ್ನು, ಸಭ್ಯರೀ ತೊರೆದು ಮಾತನಾಡಿರುವುದನ್ನು ಆರೋಪಿಸಿ ಪೊಲೀಸ್ ದೂರು ನೀಡಿದ್ದಾರೆ. ಈ ರೀತಿ ಮಾತನಾಡುವವರನ ಬಹಿರಂಗವಾಗಿ ಸುಡಬೇಕು, ಅವರ ನಾಲಗೆಗಳನ ಕತ್ತರಿಸಬೇಕು ಎನ್ನುವ ಕರೆಗಳನ್ನು ಸಾರ್ವಜನಿಕವಾ ನೀಡಿದ್ದಾರೆ.

ಈ ರೀತಿಯಾದ ಕಾನೂನು ಮೀರಿದ ವರ್ತನೆಯನ ನಮ್ಮ ಕಾನೂನು ಪರಿಪಾಲಕರು, ಶಿಸ್ತು ಮತ ಸುವ್ಯವಸ್ಥೆಯನ್ನು ಕಾಪಾಡುವ ಪೊಲೀಸರು ತಾವೇ ಮುಂದಾ ಮೊಕದ್ದಮೆ ಹೂಡಿ ಗೂಂಡಾ ಕಾಯಿದೆಯಡಿ ಅಥವ ಹಲ್ಲೆ ಮತ್ತು ಮಾನಸಿಕ ಹಿಂಸೆಯ ಪ್ರಕರಣಗಳಡಿ ದೂರ ದಾಖಲಿಸಿಕೊಂಡು, ಶಾಂತಿಪ್ರಿಯ ನಾಗರಿಕರ ಹಿತವನ ಕಾಪಾಡಬೇಕಿತ್ತು. ಆದರೇನು ಮಾಡುವುದು ಬಲ ಪಂಥೀಯರು ಹಲವು ವಿಧದಲ್ಲಿ ಪ್ರಭುತ್ವವನ್ನು ತಮ್ಮ ಅಧೀನಗೊಳಿಸಿಕೊಂಡಿದ್ದಾರೆ. ನಮ್ಮದೇನಿದ್ದರೂ ನೈತಿಕಬಲದ ಶಕ್ತಿ. ಅವರದು ಕ್ಷಣಾರ್ಧದಲ್ಲಿ ರಕ್ತಪಾತ ಉಂಟುಮಾಡಬಲ ವಿಧ್ವಂಸಕ ಶಕ್ತಿ.

ಅವರಿಗೆ ಟೀಕೆಗೂ ನಿಂದನೆಗೂ ವ್ಯತ್ಯಾಸ ತಿಳಿಯುವ ಭಿನ್ನಮತವನ್ನು ತೋಳ್ಬಲ ಪ್ರದರ್ಶನದಿಂದ, ನೀಚ ಬೈಗುಳವನ್ನು ಬಳಸುವ ಭಯೋತ್ಪಾದನೆಯಿಂದ, ಸುಳ್ಳ ಮೊಕದ್ದಮೆ ಹೂಡುವುದರಿಂದ ದಮನಿಸಲ ಪ್ರಯತ್ನಿಸಬಾರದು. ಇಡೀ ಪ್ರಪಂಚವೇ ಒಂದುಕಡೆಗಿದ್ದು ಒಬ್ಬನೇ ಒಬ್ಬ ಯಃಕಶ್ಚಿತ್ ಮನುಷ್ಯ ತನ್ನ ಭಿನ್ನಮತ ಹೇಳುವುದಿದ್ದರೂ, ಅದಕ್ಕೆ ಗೌರವಸಹಿತ ಅವಕಾಶ ಒದಗಿಸುವುದರಲ್ಲೇ ಪ್ರಜಾಪ್ರಭುತ್ವದ ನಿಜವಾದ ಸ ಅಡಗಿದೆ, ಅದೊಂದೇ ವಿವೇಕದ ದಾರಿ ಎಂಬ ಜ್ಞಾನೋದಯ ಎಂದಿಗಾದರೂ ಆಗುತ್ತದೋ ಇಲ್ಲವೋ ಎಂದು ನಾನು ಸೋಜಿಗಪಡುತ್ತಿದ್ದೇನೆ.

■ ಡಾ. ಬಂಜಗೆರೆ ಜಯಪ್ರಕಾಶ

# ಮೌಢ್ಯವನ್ನು ತೊಡೆದುಹಾಕಿದರೆ ಯಾವ ಗ್ರಂಥವನ್ನೂ ಸುಡುವ ಅಗತ್ಯವಿಲ್ಲ



ಪವಿತ್ರ ಭಗವದ್ಗೀತೆಯನ್ನು ಪ್ರೊ. ಭಗವಾನರು ಸುಡಬೇಕೆಂದು ಹೇಳಿದ್ದರ ವಿರುದ್ಧ ದೊಡ್ಡದಾಗಿ ಆಕ್ರೋಶ ವ್ಯಕ್ತವಾಗುತ್ತಿದೆ. ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಗೀತೆಯನ್ನು ಸುಡಬೇಕು ಎಂದು ಹೇಳುವುದರ ಬದಲಿಗೆ ಮೂಲದಲ್ಲಿ ಗೀತೆಯನ್ನು ಬರೆದದ್ದು ಯಾರು ಎಂದು ಸಂಶೋಧಕರ ಅಭಿಪ್ರಾಯ ಜಗಜ್ಜಾಹೀರುಗೊಳಿಸಿದರೆ ಗೀತೆಯ ಬಗೆಗೆ ಜನರಲ್ಲಿರುವ ಪೂಜ್ಯ ಭಾವನೆ ಕಡಿಮೆಯಾಗಬಹುದು. ಪೂಜ್ಯ ಭಾವನೆ ನಾಶ ಮಾಡುವುದು ಆ ಗ್ರಂಥವನ್ನು ಸುಡುವುದಕ್ಕಿಂತ ಹೆಚ್ಚು ಪರಿಣಾಮಕಾರಿ.

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿ ನಿವೃತ್ತರಾಗಿರುವ 72 ವರ್ಷದ ಹಿರಿಯ ಸಂಶೋಧಕರಾದ ಡಾ. ಕೃಷ್ಣಾನಂದ ಹೆಗಡೆ ಎಂಬವರು ಹದಿನೈದು ವರ್ಷಗಳ ಕಾಲ ಭಗವದ್ಗೀತೆಯ ರಚನೆಕಾರರ ಮೂಲದ ಬಗ್ಗೆ ಸಂಶೋಧನೆ ಮಾಡಿ ಸಾಕ್ಷ್ಯ ಸಹಿತ ಸಂಶೋಧನಾ ಗ್ರಂಥ ಬರೆದು ಮಂಗಳೂರು ವಿವಿಯಿಂದ ಡಾಕ್ಟರೇಟ್ ಪಡೆದಿದ್ದಾರೆ.

ಹೆಗಡೆಯವರ ಪ್ರಕಾರ ಭಗವದ್ಗೀತೆಯು ಮುವ್ವತ್ತಕ್ಕೂ ಹೆಚ್ಚು ಲೇಖಕರು ಸುಮಾರು ಐನೂರು ವರ್ಷಗಳ ಕಾಲಾವಧಿಯಲ್ಲಿ ಸ್ವಲ್ಪ ಸ್ವಲ್ಪವೇ ಸಂಸ್ಕರಿಸಿ ಬರೆದಿರುವ ಕೃತಿಯಾಗಿದೆ. ಈ ಎಲ್ಲ ಲೇಖಕರು ವ್ಯಾಸ ಎಂದೇ ಕಾವ್ಯನಾಮ ಹೊಂದಿದ್ದು ಈ ವ್ಯಾಸ ಎಂಬುದು ಯಾರದೇ ಒಬ್ಬರ ವೈಯಕ್ತಿಕ ಹೆಸರಾಗಿರದೇ ಅದು ಒಂದು ಪದವಿಯ ಹೆಸರಾಗಿತ್ತು ಹಾಗೂ ವ್ಯಾಸ ಎಂಬುದು ಈಗಿನ ಡೀನ್ ಅಥವಾ ಕುಲಪತಿ ಎಂಬ ಪದವಿಗೆ ಸಮನಾಗಿತ್ತು ಎಂಬುದು ಹೆಗಡೆಯವರ ಅಭಿಪ್ರಾಯ.


ಮೊದಲನೆಯ ವ್ಯಾಸ ಅರ್ಥಾತ್ ವೇದವ್ಯಾಸನ ವೈಯಕ್ತಿಕ ಹೆಸರು ಕೃಷ್ಣ ದ್ವೈಪಾಯನ ಎಂದಾಗಿತ್ತು, ಆದರೆ ಸಂಪೂರ್ಣ ಮಹಾಭಾರತ ಹಾಗೂ ಗೀತೆಯನ್ನು ಇವನೊಬ್ಬನೇ ಸ್ಟೆನೋಗ್ರಾಫರ್ ಗಣಪತಿಗೆ ಒಂದೇ ಸಿಟ್ಟಿಂಗಿನಲ್ಲಿ ಡಿಕ್ಟೇಟ್ ಮಾಡಿದ್ದನು ಎಂಬುದು ಸರಿಯಲ್ಲ. ಅನೇಕ ವ್ಯಾಸರು ಆಡೀಶನ್-ಡಿಲೀಶನ್ ಕಟ್-ಪೇಸ್ಟ್ ಮಾಡುತ್ತಾ ಹೋಗಿ ಸುಮಾರು ಕ್ರಿ.ಪೂ. 500ರ ಹೊತ್ತಿಗೆ ಈಗಿನ ಆಕಾರಕ್ಕೆ ಹಾಗೂ ಪ್ರಮಾಣಕ್ಕೆ ತಂದರು. ಹಾಗಾಗಿ ಕೃಷ್ಣನಿಗೂ ಗೀತೆ ರಚನೆಗೂ ಸಂಬಂಧವೇ ಇಲ್ಲ ಎಂಬುದು ಹೆಗಡೆಯವರ ಅಭಿಪ್ರಾಯ. ಈ ಸತ್ಯ ಸಂಗತಿ ಜನರಿಗೆ ಒಮ್ಮೆ ಮನದಟ್ಟಾದರೆ ದೇವರಾದ ಕೃಷ್ಣನು ಯುದ್ಧ ಭೂಮಿಯಲ್ಲಿಯೇ ಅರ್ಜುನನಿಗೆ ಬೃಹತ್ ಗೀತೆಯನ್ನು ಬೋಧಿಸಿದ್ದು ಎಂಬ ಪೂಜ್ಯ ಭಾವನೆ ಹೊರಟುಹೋಗಿ ಧಾರ್ಮಿಕ ತೀವ್ರವಾದ ಕಡಿಮೆಯಾಗಬಹುದು.

ದೇವರೇ ತಮ್ಮ ಧರ್ಮದ ಪವಿತ್ರ ಗ್ರಂಥಗಳನ್ನು ಪ್ರವಾದಿಗಳಿಗೆ ನೇರವಾಗಿ ಬಹಿರಂಗಪಡಿಸಿದ್ದು ಅಥವಾ ಸಂತರಿಗೆ ದಿವ್ಯವಾಣಿಯಿಂದ ಬೋಧಿಸಿದ್ದು ಎಂದು ಜಗತ್ತಿನಲ್ಲಿಯ ಹೆಚ್ಚಿನ ಧರ್ಮಗುರುಗಳು ತಮ್ಮ ಧರ್ಮಗ್ರಂಥಗಳ ಪರ ಕುರುಡಾಗಿ ವಾದಿಸುತ್ತಾರೆ. ಇದು ಸತ್ಯವೆಂದು ಎಲ್ಲ ಧರ್ಮಗಳ ಸಾಮಾನ್ಯ ಜನರ ಅಚಲ ನಂಬಿಕೆ. ಆದರೆ ಎಲ್ಲ ಧರ್ಮಗಳವರಿಗೆ ಈ ನಂಬಿಕೆ ಸುಳ್ಳು ಎಂದು ಒಮ್ಮೆ ಮನದಟ್ಟಾದರೆ ಜಗತ್ತಿನೆಲ್ಲೆಡೆ ಮತಾಂಧತೆ ಹೊರಟುಹೋಗುವುದು ಖಂಡಿತ.

ಜಗತ್ತಿನ ಎಲ್ಲ ಧರ್ಮಗಳನ್ನು ದೇವರೇ ಸ್ವತಃ ಬೋಧಿಸಿದ್ದರೆ ಅವನೇಕೆ ಸೃಷ್ಟಿ ಚಟುವಟಿಕೆಯಾಗಿದೆ. ಸೂರ್ಯನೇ ಭೂಮಿಯ ಸುತ್ತ ತಿರುಗುತ್ತಾನೆ, ಭೂಮಿಯ ಕೊನೆಗೆ ಆಕಾಶ ಭೂಮಿ ಒಂದಾಗುತ್ತವೆ, ಚಂದ್ರನೂ ಒಂದು ಪೂರ್ಣ ಗ್ರಹ ಎಂದೆಲ್ಲಾ ತಪ್ಪಾಗಿ ಯಾಕೆ ಬೋಧಿಸುತ್ತಿದ್ದ? ಅದೂ ಒಂದಲ್ಲ, ಎರಡಲ್ಲ ಐದಾರು ಸಾರಿ ಐದಾರು ಪ್ರವಾದಿಗಳಿಗೆ ದೇವರೇ ತಪ್ಪಾಗಿ ಬೋಧಿಸಲು ಸಾಧ್ಯವೇ? ಸ್ವತಃ ದೇವರಿಗೆ ತಾನೇ ಸೃಷ್ಟಿಸಿದ ಸೂರ್ಯ ಚಂದ್ರ ಪೃಥ್ವಿಯ ಸ್ವರೂಪ ಗೊತ್ತಿಲ್ಲದಿರಲು ಹೇಗೆ ಸಾಧ್ಯ? ಈ ವಿಷಯಗಳನ್ನು ಗಣಪತಿಗೆ ವೇದವ್ಯಾಸ ತಪ್ಪಾಗಿ ಡಿಕ್ಟೇಟ್ ಮಾಡುತ್ತಿದ್ದಾಗ ಅದನ್ನು ಬರೆದುಕೊಳ್ಳುತ್ತಿದ್ದ ಗಣಪತಿ ದೇವರಾದರೂ ಯಾಕೆ ಆಕ್ಷೇಪಿಸಲಿಲ್ಲ? ಎಲ್ಲ ಧರ್ಮಗಳನ್ನು ದೇವರೇ ಬೋಧಿಸಿದ್ದರೆ ದೇಶದಿಂದ ದೇಶಕ್ಕೆ ಭಾಷೆ ಬೇರೆಯಾಗಿದ್ದರೂ ಅವುಗಳಲ್ಲಿಯ ಬೋಧನೆಗಳೆಲ್ಲಾ ಅಕ್ಷರಶಃ ಒಂದೇ ರೀತಿಯಾಗಿರುತ್ತಿದ್ದವು. ಈಗಿನಂತೆ ವೈರುಧ್ಯಗಳಿಂದ ಕೂಡಿರುತ್ತಿರಲಿಲ್ಲ. ಯಾಕೆಂದರೆ ಇಡೀ ಜಗತ್ತಿಗೆಲ್ಲ ದೇವರು ಒಬ್ಬನೇ. ಹಾಗಾಗಿ ಅವನ ಬೋಧನೆ ಎಲ್ಲೆಡೆ ಒಂದೇ ರೀತಿಯಾಗಿರಲೇ ಬೇಕಿತ್ತು.

ಅದು ಹಾಗಿಲ್ಲ ಎಂದ ಮೇಲೆ ಯಾವುದೇ ಧರ್ಮವನ್ನು ಅಥವಾ ಧಾರ್ಮಿಕ ಗ್ರಂಥವನ್ನು ದೇವರು ಸ್ವತಃ ಬೋಧಿಸಿದ್ದು ಅಥವಾ ಬಹಿರಂಗಪಡಿಸಿದ್ದು ಎಂಬ ವಾದ ಅಷ್ಟು ಸುಳ್ಳು ಎಂದು ರುಜುವಾತಾಗುತ್ತದೆ. ಈ ದೃಷ್ಟಿಕೋನದಿಂದ ಎಲ್ಲರೂ ಆಲೋಚಿಸಿದರೆ ಕೇವಲ ತಮ್ಮ ಧರ್ಮವನ್ನು ಮಾತ್ರ ನಿಜವಾದ ದೇವರು ಸೃಷ್ಟಿಸಿದ್ದು ಹಾಗೂ ಇತರ ಧರ್ಮಗಳು ಹುಲುಮಾನವ ನಿರ್ಮಿತ ಎಂಬ ತಪ್ಪು ಗ್ರಹಿಕೆ ಹಾಗೂ ಧರ್ಮಾಂಧತೆ ನಾಶವಾಗುವುದು ಖಚಿತ. ಆನಂತರ ಜಗತ್ತಿನ ಯಾವುದೇ ಧರ್ಮಗ್ರಂಥ ಸುಟ್ಟರೂ ಯಾರೊಬ್ಬರೂ ಖಂಡಿತ ಆಕ್ಷೇಪಿಸುವುದಿಲ್ಲ!

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು



ಯೋಗೇಶ್ ಮಾಸ್ಟರ್

ಪುರಾಣದ ಹೂರಣ


# ಮಲೆ ಮಾದೇಶ್ವ


ಕಾವ್ಯಗಳಲ್ಲಿ ರೂಪಕಗಳನ್ನು, ಒಗಟುಗಳನ್ನು ಬಿಡಿಸುವ ಜೊಗಸಿಗೆ ಪೂರ್ವಾಧ್ಯಯನದ ಅವಶ್ಯಕತೆ ಇರುತ್ತದೆ. ಜನಪದರ ಕಾವ್ಯಗಳಾಗಲಿ, ವೈದಿಕರ ಪುರಾಣಗಳನ್ನಾಗಲಿ ಓದುವಾಗ ಅಧ್ಯಯನಕಾರರು ಮತ್ತು ಸಂಶೋಧಕರು ಅನೇಕ ರೀತಿಗಳಲ್ಲಿ ಅವನ್ನು ವ್ಯಾಖ್ಯಾನಿಸುತ್ತಾರೆ. ಆದರೆ ಅವುಗಳು ಸಂಸ್ಕೃತಿ ಮತ್ತು ಸಮಾಜದ ವ್ಯವಸ್ಥೆಯ ವಾಸ್ತವ ಅಂಶಗಳನ್ನು, ಸೈದ್ಧಾಂತಿಕ ತತ್ವಗಳನ್ನು ಕಾಣಿಸುತ್ತಲೂ ಪ್ರೇರೇಪಿಸುತ್ತಲೂ ಹೋಗುತ್ತಾರೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಬಿಡುಗಡೆಯಾದ ಮಲೆಮಾದೇಶ್ವರ ಕಾವ್ಯದ ಪ್ರಸ್ತಾವನೆಯಲ್ಲಿ ಡಾ.ಪಿ.ಕೆ. ಬೋರಲಿಂಗಯ್ಯ ಮಾದೇಶ್ವರನ ಕಥನದ ಸಾರಾಂಶವನ್ನು ಕಟ್ಟಿಕೊಡುವ ರೀತಿಯನ್ನು ನೋಡಿದರೆ, ಈ ದಿಕ್ಕಿನಲ್ಲಿ ಇತರ ಕಾವ್ಯಗಳನ್ನು ಅಥವಾ ಪುರಾಣಗಳನ್ನೂ ಬಿಡಿಸುವ ಪ್ರೇರಣೆ ಆಸಕ್ತರಿಗೆ ಉಂಟಾಗಬಹುದೆಂದು ನನಗೆ ಅನ್ನಿಸುತ್ತದೆ.

ಕೈಲಾಸದಲಿನ ಮುನಿಗಳ ಸಲಹೆಯಂತೆ ಶಿವ ತನ್ನ ವಿಸ್ತಾರ ಜಡೆಯನ್ನು ಒದರುತ್ತಾನೆ. ಆಗ ಆ ಜಡೆಯಲ್ಲಿದ್ದ ಸ್ಫಟಲಿಂಗು ಮತ್ಸ್ಯಲೋಕದ ಒಂದು ಬೇವಿನ ಮರದ ಪೊಟರೆಯೊಳಗೆ ಸೇರಿಕೊಳ್ಳುತ್ತದೆ. ಹೀಗೆ ಭೂಲೋಕ ಪ್ರವೇಶ ಮಾಡಿದ ಆ ಲಿಂಗುವೇ ಮುಂದೆ ಮಾದೇಶ್ವರನಾಗಿ ಪ್ರೈವವಾಗುತ್ತಾನೆ. ಮಂಟೇಸ್ವಾಮಿ ಕಥನದಂತೆಯೇ ಪಯಣವನ್ನೇ ಪ್ರಧಾನವಾಗಿಟ್ಟುಕೊಂಡು ಸಾಗುತ್ತದೆ. ಭಕ್ತರನ್ನು ಪಡೆಯುವ ಕ್ರಿಯೆ ಆ ಪೊಟರೆಯಿಂದಲೇ ಆರಂಭವಾಗುತ್ತದೆ. ಹೆಸರು ಕುಲ ಗೋತ್ರಗಳೇನೂ ಇಲ್ಲದ ಈ ಚೇತನಕ್ಕೆ ಆರಂಭದಲ್ಲಿ ಹಲವು ಅಪಮಾನಗಳಾಗುತ್ತವೆ. ತಂದೆತಾಯಿ ಇಲ್ಲದವನೆಂಬ ಹೀಯಾಳಿಕೆ ಒಂದು ಕಡೆಗಾದರೆ, ಇವನು ಮಾದಿಗನೆಂಬ ತಾತ್ಸಾರ ಮತ್ತೊಂದು ಕಡೆ. ಇತಿಹಾಸದ ದೃಷ್ಟಿಯಿಂದ ಮಾದೇವ ಮಾದಿಗನೋ ಅಲ್ಲವೋ ಗೊತ್ತಿಲ್ಲ, ಶ್ರವಣ ದೊರೆ ಹಾಗೆ ಹೇಳುವುದಂತೂ ನಿಜ. ಅದಕ್ಕೆ ಪೂರಕವಾಗಿ ಮಾದಪ್ಪ ಅದೇ ಶ್ರವಣ ದೊರೆಯನ್ನು ಕೊಲ್ಲುವ ಚಮ್ಮಾಳಿಗೆಗಳನ್ನು ಮಾಡುವುದೂ ನಿಜ. ಈ ಆರೋಪಗಳನ್ನು ತಪ್ಪಿಸುವುದಕ್ಕಾಗಿಯೇ ಎಂಬಂತೆ ನಮ್ಮ ಹಾಡುಗಾರರು ತಬ್ಬಲಿಯಾದ ಮಾದೇವನನ್ನು ಮತ್ತೊಮ್ಮೆ ಉತ್ರಾಜಮ್ಮನೆಂಬ ಸಾಧ್ವಿ ಮಹಿಳೆಯ ಹೊಟ್ಟೆಯಲ್ಲಿ ಹುಟ್ಟಿಸುತ್ತಾರೆ. ಇಷ್ಟಾದರೂ ಮಾದಪ್ಪ ನಮಗೆ ಹಸಿವಿನಿಂದ ಬಳಲುವ ಒಬ್ಬ ಅನಾಥನಾಗಿ, ಅಸ್ತಿತ್ವಕ್ಕಾಗಿ ಪರದಾಡುವ ಶರಣನಾಗಿ ಕಾಣುತ್ತಾನೆ. ತನ್ನ ಉದ್ದೇಶ ಸಾಧನೆಯ ಉತ್ತಮ ಸ್ಥಳಕ್ಕಾಗಿ ಇವನು ತೊಡಗುವ ಹುಡುಕಾಟದಲ್ಲಿ ಅನೇಕ ಗುರುಮಠಗಳು ಕಾಣಿಸಿಕೊಳ್ಳುತ್ತವೆ. ಹೀಗೆ ಅರಸಿ ಹೊರಡುವ ಮಠಗಳಲ್ಲಿ ಮೊದಲನೆಯದು ಸುತ್ತೂರು ಮಠ. ಕೈಲಾಸದ ಶಿವನ ಜಡೆಯಿಂದ ಉದ್ಭವವಾದ ಮಾದೇವನೇ ಆಗಿದ್ದರೆ ಇವನು ಹೀಗೆ ಮಠಮಾನ್ಯಗಳನ್ನು ಹುಡುಕಿ ಹೊರಡಬೇಕಾದ ಅಗತ್ಯವಿರಲಿಲ್ಲವೇನೋ. ಆದರೆ ಮಂಟೇಸ್ವಾಮಿಯಂತೆ ಮಾದಪ್ಪ ಕೂಡ "ಉತ್ತರ ದೇಸದಿಂದ" ದಕ್ಷಿಣಕ್ಕೆ ಬಂದ ಒಬ್ಬ ಶರಣ. ಹಾಗೆಯೇ ಇವನ ಉದ್ದೇಶವೂ ಕೂಡ ಯಾವುದೋ ಒಂದು ಮಠದಲ್ಲಿ ಉಳಿತು ಕೂಳಿನ ಕಾಯಕ ತೀರಿಸಿಕೊಳ್ಳುವುದಾಗಿರಲಿಲ್ಲ. ಸ್ಥಾಪಿತ ಮೌಲ್ಯದ ವಿರುದ್ಧವಾದ ಸಂಘಟನೆ ಇವನ ಧ್ಯೇಯವಾಗಿತ್ತು. ಅಂತಹ ಒಂದು ಸಂಘಟನೆಯ ಪಯಣದಲ್ಲಿ ಈ ಮಠಗಳು ಬಂದುಹೋಗುತ್ತವೆ. ಹಾಗೆ ಹುಡುಕಿ ಬರುವ ಮಠಗಳಲ್ಲಿ ಸುತ್ತೂರು ಕೂಡ ಒಂದು. ಅಲ್ಲಿ ಮಾದಪ್ಪನಿಗೆ ರಾಗಿ ಬೀಸುವ ಕೆಲಸ ನೀಡಲಾಗುತ್ತದೆ. ಹಲವು ದಿನ ಈ ಕಾಯಕವನ್ನು ಮಾಡಿ "ಸುತ್ತೂರು ಮಠದಲ್ಲಿ ಸುಟಾಂತ ಬಂದೆ ಕುಕ್ಕೆಯಲ್ಲಿ ರಾಗಿ ತುಂಬಿಸಿ ಇಡಗಿದ್ದೀರಿ" ಎಂದು ಹಂಗಿಸಿ ಮಠಕ್ಕೆ ಶಾಪ ಕೊಟ್ಟು ಹೊರಡುತ್ತಾನೆ. ಅಲ್ಲಿಂದ ಕುಂತೂರು ಮಠಕ್ಕೆ ಬರುತ್ತಾನೆ. ಕುಂತೂರು ಮಠದಲ್ಲಿ ಲಿಂಗ ಪೂಜೆಗೆ ಪುಷ್ಪಗಳನ್ನು ತರುವ ಕಾಯಕಕ್ಕೆ ನೇಮಿಸಲಾಗುತ್ತದೆ. ಪುಷ್ಪಗಳನ್ನು ತರಲು ಹೋದವನು ಹಾವ್ರಾಣಿ, ಗೊದ್ದ, ಗೋಸುಂಬೆ, ಚೇಳು, ಹಾವುಗಳನ್ನು ಹಿಡಿದು "ನರ ಮನ್ಸರ ಕೈಲಿ ಸಿಕ್ಕಿದ್ರೆ, ನಿಮ್ಮನ್ನು ಹೊಡೆದು ನರಕದ ಗುಂಡಿಯಲ್ಲಿ ಮಣ್ಣು ಮಾಡ್ತಾರೆ" ಅಂತೇಳಿ ಅವುಗಳನ್ನು ನೀರಿಗೆ ಅದ್ದಿ ಹೂಗಳನ್ನಾಗಿ ಪರಿವರ್ತಿಸುತ್ತಾನೆ. ಇದನ್ನು ನೋಡಿದ ಆ ಮಠದವರು ಅವನನ್ನು ಅಲ್ಲಿಂದ ಸಾಗಹಾಕುತ್ತಾರೆ. ಅಲ್ಲಿಂದ ಅಲ್ಲಿ ಮಠಕ್ಕೆ ಬಂದು ಅಲ್ಲಿಯೂ ಒಪ್ಪದೇ ನೂರಾರು ಪವಾಡಗಳನ್ನು ಮಾಡು ಪರ್ಯಟನೆ ಮಾಡಿ ಕಡೆಗೆ ಬಂದು ಸೇರುವುದು ಎಪ್ಪತ್ತೇಳು ಮಲೆಯ ನಡುವೆ. ಹೀಗೆ ಬಂದ ಕಿವುಕ್ತಿ ಬೆಳೆಯುವ ದಟ್ಟ ಕಾನನದ ತಾಣಕ್ಕೆ, ವಿರಾಜ್ಯದಲ್ಲಿ ಮಾದಪ್ಪ ಸ್ವತಂತ್ರ. ಹೆಬ್ಬುಲಿಯೇ ವಾಹನ. ಹಾವುಗಳೇ ಅವನ ಸಂಗಾತಿಗಳು. ಬೇಡರು, ಸೋಲಿಗರು, ಕುರುಬರು ಎಂಬ ಆದಿವಾಸಿಗಳೇ ಅವನ ಸೇವಕರು. ಇಲ್ಲಿಂದ ಮಾದಪ್ಪನ ಅಂತರ್ಯದ ಆಸೆಗೆ ಫಲ ಸಿಗತೊಡಗುತ್ತದೆ.

ಶ್ರವಣ ದೊರೆಯನ್ನು ಕೊಲ್ಲುವುದು, ಆಲಂಬಾಡಿ ಜುಂಜೇಗೌಡನಿಂದ ಹಾಲು ಮಜ್ಜನದ ಸೇವೆ ಪಡೆಯುವುದು, ಉಪ್ಪಲಿಗೆ ಶೆಟ್ಟರ ಮೂಗಣ್ಣನನ್ನು ಭಕ್ತನನ್ನಾಗಿ ಪಡೆಯುವುದು, ಬೇಡರ ಕಣ್ಣಪ್ಪನಿಂದ ಸೇವೆ ಪಡೆಯುವುದು ಮುಂತಾಗಿ ಅನೇಕ ಕಥನದ ಸಾಲುಗಳು ಇಲ್ಲಿ ಕಾಣಿಸಿಕೊಳ್ಳುತ್ತವಾದರೂ ಈ ಕಥನವನ್ನು ಮಹಾಕಾವ್ಯವನ್ನಾಗಿಸಿದ ಸಾಲುಗಳು ಎರಡು. ಅವುಗಳೆಂದರೆ ಸಂಕಮ್ಮನ ಸಾಲು ಮತ್ತು ಕಾಳಮ್ಮನ ಸಾಲು.





ಆ ಎಪ್ಪತ್ತೇಳು ಮಲೆಗಳ ನಿಗೂಢ ಅಡವಿಯ ಜೀವಿಗಳಾಗಿದ್ದ ಸೋಲಿಗರು, ಮಾದೇವನ ಒಕ್ಕಲಾದ ಬಗೆ ಈ ಸಂಕಮ್ಮನ ಸಾಲಿನಲ್ಲಿ ನಿರೂಪಿತವಾಗಿದೆ. ಹಾಗೆಯೇ ಇದು ಸೋಲಿಗರ ಆಹಾರ ಸಂಗ್ರಹಣೆಯ ವಿಧಾನಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಸೋಲಿಗ ನೀಲೇಗೌಡನ ಏಳು ಜನ ಮಕ್ಕಳಲ್ಲಿ ಎಳೆಯವನಾದ ನೀಲಯ್ಯನದು ದನ ಕುರಿ ಮೇಯಿಸುವ ಕೆಲಸ. ಉಳಿದ ಮಕ್ಕಳು ಕೃಷಿ ಮಾಡುತ್ತಿದ್ದರೆಂಬ ಉಲ್ಲೇಖವೂ ಬರುತ್ತದೆ. ಮೂಲತಃ ಆಹಾರ ಸಂಗ್ರಹಣೆ ಮತ್ತು ಬೇಟೆಗಾರ ವೃತ್ತಿಯವರಾದ ಈ ಬುಡಕಟ್ಟು ಈಗ ವರ್ಷಕ್ಕೊಮ್ಮೆ ಮಾತ್ರ ತಮ್ಮ ಬೇಟೆಯನ್ನು ಪುನರಾವೃತ್ತಿಗೊಳಿಸುವ ಮೂಲಕ ಒಂದು ಆಚರಣೆಯನ್ನಾಗಿ ಉಳಿಸಿಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಪಶು ಸಂಗೋಪನೆ ಮತ್ತು ಬೇಸಾಯಕ್ಕೆ ಮಾತ್ರ ಹೆಚ್ಚು ಆದ್ಯತೆ ನೀಡಿದ ಅವರ ಕಾಲಾನುಕ್ರಮದ ಬದುಕಿನ ಅವಸ್ಥಾಂತರವನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಸಂಕಮ್ಮನನ್ನು






ಮದುವೆಯಾದ ನೀಲಯ್ಯ, ತನ್ನ ಕುಟುಂಬದವರೊಡನೆ ಉಂಟಾದ ಮನಸ್ತಾಪದಿಂದಾಗಿ ದಟ್ಟಾರಣ್ಯದ ನಡುವೆ ಒಂಟಿ ಮನೆ ಮಾಡಬೇಕಾಗಿ ಬರುತ್ತದೆ. ಇಂತಹ ಒಂಟಿ ಗುಡ್ಲು ನೀಲಯ್ಯನಿಗೆ ಭಯದ ಅಥವಾ ಆತಂಕದ ವಿಚಾರವಲ್ಲ. ನೀಲಯ್ಯನಿಗೆ ಆತಂಕ ಏಕೆ ಸುರುವಾಗುತ್ತದೆ ಎಂದರೆ, ಕುಲದ ಪದ್ಧತಿಯಂತೆ ಮನೆಗೊಬ್ಬರು ಒಂಭತ್ತು ತಿಂಗಳ ಕಾಲ ಆಹಾರ ಸಂಗ್ರಹಣೆ ಮತ್ತು ಬೇಟೆಗೆ ಹೋಗಬೇಕಾದಾಗ ಒಬ್ಬಳೇ ಮಡದಿಯನ್ನು ಅಷ್ಟು ದೀರ್ಘಕಾಲ ಬಿಟ್ಟು ಹೋಗಬೇಕಲ್ಲಾ ಎಂಬ ಆತಂಕ. ಕುಲದ ಹಿರಿಯರ ಆದೇಶದಂತೆ ಒಂಭತ್ತು ತಿಂಗಳ ಬೇಟೆಗೆ ಹೊರಟ ನೀಲಯ್ಯ ರೂಪಸಿಯಾದ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾನೆ. ಸಂಕಮ್ಮನ ಬಂಜೆತನಕ್ಕೆ ತಾನೇ ಕಾರಣನಿರಬಹುದೆಂಬ ಒಳದನಿ ಅವನನ್ನು ಈ ಅನುಮಾನಕ್ಕೆ ತಳ್ಳಿರಬಹುದು. ಫಲಾಪೇಕ್ಷೆಯ ತೀವ್ರ ಹಂಬಲದಲ್ಲಿರುವ ಸಂಕಮ್ಮ ಸಹಜವಾಗಿ ಯಾರಿಗಾದರೂ ತನ್ನ ಗೈರುಹಾಜರಿಯಲ್ಲಿ ಒಲಿದು ಬಿಡಬಹುದೆಂಬ ಅನುಮಾನ ಅವನಿಗಿದೆ. ಆದರೆ, ಹೆಂಡತಿಯ ಮಾತಿನಲ್ಲಿ ಅವನಿಗೆ ನಂಬಿಕೆ ಇದೆ. ಅದಕ್ಕಾಗಿ ಅವನು ಸಂಕಮ್ಮನನ್ನು ಭಾಷೆ ಕೊಡುವಂತೆ ಕೇಳುತ್ತಾನೆ. ಇಲ್ಲಿಂದ ಕಥೆ ಬೇರೆಯದೇ ತಿರುವನ್ನು ಪಡೆಯುತ್ತದೆ. ಇದು ಪರಸ್ಪರರ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗುತ್ತದೆ. ಏನೂ ತಪ್ಪು ಮಾಡದೇ ಭಾಷೆ ಕೊಡುವ ಅಗತ್ಯವೇನು ಎಂಬುದು ಸಂಕಮ್ಮನ ತರ್ಕ. ಹೇರಲಾಗುತ್ತಿರುವ ಪುರುಷ ಪ್ರಧಾನ ಸಮಾಜದ ಕಟ್ಟುಪಾಡಿನ ಮೌಲ್ಯಗಳನ್ನು ಸಂಕಮ್ಮ ಇಲ್ಲಿ ತೀವ್ರವಾಗಿ ಪ್ರತಿಭಟಿಸುತ್ತಿದ್ದಾಳೆ. ನೀಲಯ್ಯನ ಅನುಮಾನಕ್ಕೆ ರೋಸಿ ಹೋಗುವ ಅವಳು "ನೀನು ಕೊಟ್ಟಿರುವ ತೆರ ಹಿಂತೆಗೆದುಕೊಂಡು, ತನ್ನನ್ನು ಬಿಟ್ಟುಬಿಡು" ಎನ್ನುವ ಹಂತಕ್ಕೂ ಹೋಗುತ್ತಾಳೆ. ಸ್ವಾತಂತ್ರ್ಯವಿಲ್ಲದ ಇಂತಹ ಸಂಬಂಧವನ್ನು ಕಡಿದುಕೊಳ್ಳಲು ಸಿದ್ಧವಿದ್ದಾಳೆ. ಮದುವೆಯೆಂಬ ಒಪ್ಪಿತ ವ್ಯವಸ್ಥೆಯನ್ನು ಸ್ವೀಕರಿಸಿಯೂ ಅದಕ್ಕೆ ಅಷ್ಟೊಂದು ಮಹತ್ವ ಕೊಡದ ಬುಡಕಟ್ಟೊಂದರ ಪ್ರತಿನಿಧಿಯಾಗಿ ಸಂಕಮ್ಮ ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಅವರ ದೃಷ್ಟಿಯಲ್ಲಿ ಮದುವೆಯೆಂಬುದು ಕೂಡಿ ಬಾಳುವ ಸಂಕೇತವೇ ಹೊರತು, ಅಧಿಕಾರ ಸ್ಥಾಪಿಸುವ ಸಾಂಪ್ರದಾಯಕ ವಿಧಿಯಲ್ಲ. ಆದರೆ ಕ್ರಮೇಣವಾಗಿ ತನ್ನ ಯಜಮಾನ್ಯತೆಯನ್ನು ಭದ್ರಪಡಿಸಿಕೊಳ್ಳುವ ಮೂಲಕ ಏಕಸ್ವಾಮ್ಯತೆಯನ್ನು ಮೆರೆಯಲು ಹೊಂಚು ಹಾಕುವ ಪುರುಷಪ್ರಧಾನದ ಸಮಾಜದ ಪ್ರತಿನಿಧಿಯಾಗಿ ಇಲ್ಲಿ ನೀಲಯ್ಯನನ್ನು ನಾವು ಗುರುತಿಸಬೇಕಾಗುತ್ತದೆ. ಅವನಿಗೆ ಸಂಕಮ್ಮ ಕೇವಲ ಹೆಣ್ಣಾಗಿ ಅಥವಾ ಹೆಂಡತಿಯಾಗಿ ಮಾತ್ರ ಕಾಣುತ್ತಿಲ್ಲ. ಸಂಕಮ್ಮ ನೀಲಯ್ಯನ ಆಸ್ತಿಯಾಗಿದ್ದಾಳೆ. ಅವಳು ನೀಲಯ್ಯನ ರಕ್ತವನ್ನು ಮಾತ್ರ ಹಂಚಿಕೊಂಡು ಹುಟ್ಟುವ ಮಕ್ಕಳಿಗೆ ತಾಯಿಯಾಗಬೇಕಾಗಿದ್ದಾಳೆ. ಇಲ್ಲಿ ಹೆಣ್ಣು ಮುಕ್ತತೆಗೆ ಹಾತೊರೆದರೆ, ಗಂಡು ಕಟ್ಟುಪಾಡಿನ ಬೇಲಿಯನ್ನು ಭದ್ರಪಡಿಸತೊಡಗಿದೆ. ಹಾಗಾಗಿ ಇದು ಮುಕ್ತತೆ ಮತ್ತು ಪಾತಿವ್ರತ್ಯಗಳೆಂಬ ಮೌಲ್ಯಗಳ ನಡುವಿನ ಸಂಘರ್ಷವಾಗಿ ಕಾಣಿಸಿಕೊಳ್ಳತೊಡಗುತ್ತದೆ.

ಮುಕ್ತತೆಯನ್ನು ಬಯಸುವ ಮಾತೃ ಮೂಲ ಬುಡಕಟ್ಟಿನ ಪಳೆಯುಳಿಕೆಯಾಗಿ ಸಂಕಮ್ಮ ಗೋಚರಿಸುತ್ತಾಳಾದರೆ, ಒಂದು ಬುಡಕಟ್ಟು ಪುರುಷ ಪ್ರಧಾನ ವ್ಯವಸ್ಥೆಗೆ ಅವಸ್ಥಾಂತರಗೊಳ್ಳುತ್ತಿರುವ ಸಂದರ್ಭದ ಪ್ರತೀಕವಾಗಿ ನೀಲಯ್ಯ, ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಪರಸ್ಪರ ವಿರುದ್ಧವಾದ ಎರಡು ಮೌಲ್ಯಗಳ ನಡುವಿನ ಈ ಸಂಘರ್ಷ ಇಲ್ಲಿ ಗಮನ ಸೆಳೆಯುತ್ತದೆ.

ಯಾವುದೇ ಆದಿವಾಸಿ ಸಮಾಜದ ಬಹುಮುಖ್ಯ ಅಂಶ ಮಾಟ ಮತ್ತು ಮೋಡಿಗಳಿಗೆ ಸಂಬಂಧಿಸಿದ್ದು. ಸೋಲಿಗರ ನೀಲಯ್ಯ ಒಬ್ಬ ಮಹಾ ಮೋಡಿಕಾರನಾಗಿ ಇಲ್ಲಿ ಚಿತ್ರಿತನಾಗಿದ್ದಾನೆ. ಪ್ರಕೃತಿಯ ಎಲ್ಲವನ್ನೂ ಒಲಿಸಿಕೊಳ್ಳುವ ಮನುಷ್ಯನ ಮಹತ್ವಾಕಾಂಕ್ಷೆಯ ಫಲವಾದ ಈ ಮೋಡಿವಿದ್ಯೆ ಇಡೀ ಮಾದೇಶ್ವರ ಕಾವ್ಯದ ಜೀವಾಳ. ಇಲ್ಲಿನ ಮೋಡಿ ಮಾದೇಶ್ವರನ ಒಕ್ಕಲು ಪಡೆಯುವ ಉದ್ದೇಶಕ್ಕೆ ಸಹಕಾರಿಯಾಗುವ ಅಂಶವಾಗೇ ಚಿತ್ರಿತವಾಗಿದೆ. ಮೋಡಿಕಾರರ ಗುರುವೆನಿಸಿದ ಮಾದೇವ ನೀಲಯ್ಯನ ಎಲ್ಲಾ ಮೋಡಿ ಮಾಟಗಳನ್ನು ನಿರರ್ಥಕಗೊಳಿಸಿ ಸಂಕಮ್ಮನನ್ನು ನೀಲಯ್ಯನಿಂದ ರಕ್ಷಿಸುತ್ತಾನಲ್ಲದೇ ಅವಳಿಗೆ ಮಕ್ಕಳ ಫಲ ಕೊಟ್ಟು, ಸಂತೃಪ್ತಗೊಳಿಸುತ್ತಾನೆ. ಹೀಗೆ ಮಾಡುವ ಮೂಲಕ ಹುಟ್ಟುವ ಮಕ್ಕಳನ್ನು ಹಾಗೂ ಆ ಕುಲವನ್ನು ತನ್ನ ಪಂಥಕ್ಕೆ ಸೇರಿಸಿಕೊಳ್ಳುವುದು ಅವನಿಗೆ ಮುಖ್ಯ. ಈ ಫಲದಿಂದ ಹುಟ್ಟುವ ಕಾರಯ್ಯ, ಬಿಲ್ಲಯ್ಯ ಎಂಬ ಮಕ್ಕಳು ಮಾದೇಶ್ವರನ ಸೇವೆಗೆ ಮೀಸಲಾದವರಾಗಿ ದೀಕ್ಷೆ ಪಡೆದು ಗುಡ್ಡರಾಗುತ್ತಾರೆ. ಮಾದೇವ ಇದನ್ನು ಸಾಧಿಸುವುದಕ್ಕಾಗಿ ಮಕ್ಕಳ ಫಲ ಕೊಡಲು ಒಪ್ಪುವ ಮೊದಲೇ ಈ ಮಕ್ಕಳನ್ನು ತನಗೇ ಮೀಸಲು ಬಿಡುವ ಭಾಷೆ ಪಡೆಯುತ್ತಾನೆ. ಮಾದೇಶ್ವರನ ಈ ಪ್ರಧಾನ ಉದ್ದೇಶಕ್ಕೆ ನೆರವಾಗುವಂತೆ ಮೂಡಿ ಬರುವ ಬೇರೆ ಭಾಷೆ, ಮಾಟ, ಸಿಂಧುಪರಸಾದ ಮುಂತಾದ ಆಶಯಗಳು ಬುಡಕಟ್ಟು ಕಾವ್ಯವೊಂದರ ಅಂತಃಸತ್ವವನ್ನು ತೆರೆದಿಡುವ ರೀತಿಯನ್ನು ನೋಡಿದಾಗ ಈ ಕಾವ್ಯಗಾಯಕರ ಮೂಲಕ ಇವತ್ತಿಗೆ ಸ್ಪಂದಿಸುತ್ತಲೇ ಪ್ರಾಚೀನ ಜೀವನ ಪದ್ಧತಿಯ ಸಾಂಸ್ಕೃತಿಕ ಪಳೆಯುಳಿಕೆಗಳ ಮೇಲೆ ಕೂಡ ಬೆಳಕು ಚೆಲ್ಲುತ್ತಾ ಹೋಗುತ್ತದೆ ಎಂಬುದನ್ನು ನಿಚ್ಚಳಗೊಳಿಸುತ್ತದೆ.

ಬೇವಿನ ಹಟ್ಟಿ ಕಾಳಮ್ಮ ಅಥವಾ ಹೊನ್ನುಣಸೆ ಕಾಳಮ್ಮ ಎಂದು ಕರೆಯಲಾಗುವ ಕುರುಬರ ಒಡತಿಯ ಕಥೆ ಮಾದೇಶ್ವರ ಕಾವ್ಯದ ಇನ್ನೊಂದು ಬಹುಮುಖ್ಯ ಭಾಗ. ಇಲ್ಲಿ ಗಂಡಿನ ಪ್ರಾಮುಖ್ಯ ಏನೂ ಇಲ್ಲ ಎಂಬಷ್ಟರ ಮಟ್ಟಿಗೆ ಮಾತೃ ಮೂಲ ಕುಟುಂಬದ ಲಕ್ಷಣಗಳು ಎದ್ದು ಕಾಣುತ್ತವೆ. ಮಂಟೇಸ್ವಾಮಿ ಕಾವ್ಯದಲ್ಲಿ ಬರುವ ಕಬ್ಬಿಣದ ಭಿಕ್ಷೆಯಂತೆ ಇಲ್ಲಿ ಎಳ್ಳಿನ ಭಿಕ್ಷೆ ಬಹಳ ಮುಖ್ಯವಾಗುತ್ತದೆ. ಮಾದೇಶ್ವರದಲ್ಲಿ ತಾವಿನಲ್ಲಿ ಸದಾ ಉರಿಯುವ ದೀಪಕ್ಕಾಗಿ ಅವನಿಗೆ ಎಳ್ಳು ಬೇಕಾಗುತ್ತದೆ. ಕಾಡಿನ ಬುಡಕಟ್ಟು ಪ್ರದೇಶ ನಾಡಾಗಿ ಪರಿವರ್ತಿತವಾದಾಗ ಅಥವಾ ಆ ಜನಾಂಗ ಬೇಟೆಯಿಂದ ಕೃಷಿಗೆ ಮಾರ್ಪಟ್ಟಾಗ ದೀಪದ ಅವಶ್ಯಕತೆ ಹೆಚ್ಚಾಗಿದೆ. ಹಾಗಾಗಿ ದೀಪದ ಎಣ್ಣೆಗೆ ಆಧಾರವಾದ ಎಳ್ಳು ಬೆಳೆಯುತ್ತಿರುವ ಕಾಳಮ್ಮನಿಗೆ ಎಲ್ಲಿಲ್ಲದ ಮಹತ್ವ ಬಂದಿದೆ. ಈ ಮಹತ್ವದ ಕಾರಣಕ್ಕಾಗಿಯೇ ಕಾಳಮ್ಮ ಹೆಬ್ಬಾಳತನದಲ್ಲಿ ಮೆರೆಯುತ್ತಿದ್ದಾಳೆ. ಮಾದೇಶ್ವರ ಅವಳಿಂದ ಎಳ್ಳು ಭಿಕ್ಷೆ ಪಡೆಯಬೇಕು. ಅರ್ಥಾತ್ ಕೃಷಿಗೆ ಇಳಿದಿರುವ ಈ ಕುಟುಂಬಗಳನ್ನು ತನ್ನ ಒಕ್ಕೂಟಕ್ಕೆ ಸೇರಿಸಿಕೊಳ್ಳಬೇಕು. ಆದರೆ ಕಾಳಮ್ಮ ಮಹಾ ಸ್ವಾಭಿಮಾನಿ. ತನ್ನ ಸರ್ವಸ್ವವೇ ನಾಶವಾದರೂ ಎಳ್ಳಿನ ಭಿಕ್ಷೆ ಮಾತ್ರ ಕೊಡುವವಳಲ್ಲ. ಕಾಳಮ್ಮನಿಗೆ ತನ್ನ ಕುರಿ ಕಾಯುತ್ತಿರುವ ಗಂಡ ಹುಲಿಬಾಯಿಗೆ ಸಿಕ್ಕಿ ತುಂಡು ತುಂಡಾದರೂ ಅದು ಮುಖ್ಯವಲ್ಲ, ತನ್ನ ಬೆಳೆ ಮತ್ತು ಅದರ ರಕ್ಷಣೆ ಮುಖ್ಯ. ಭಿಕ್ಷೆ ನೀಡುವುದರಿಂದ ಅವಳ ಎಳ್ಳು ಧಾನ್ಯ ಕಡಿಮೆಯಾಗುತ್ತದೆ ಎನ್ನುವುದಕ್ಕಿಂತ ಭಿಕ್ಷೆ ಕೊಡುವ ಮೂಲಕ ಮಾದಯ್ಯನ ಹೆಬ್ಬಾಳತನಕ್ಕೆ ಬಗ್ಗುವುದಿಲ್ಲ ಅಥವಾ ಶರಣಾಗುವುದಿಲ್ಲ ಎಂಬ ಹಟ ಇಲ್ಲಿ ಗಮನ ಸೆಳೆಯುತ್ತದೆ. ಈ ಹಟವನ್ನು ಕಾವ್ಯದಲ್ಲಿ ಜಿಪುಣತನ ಎಂದು ವರ್ಣಿಸಲಾಗಿದೆಯಾದರೂ ಅದು ಅವಳ ಸ್ವಾಭಿಮಾನವಾಗಿಯೇ ಮೆರೆಯುತ್ತದೆ. ಸಂಕಮ್ಮನ ವಿಚಾರದಲ್ಲಿ ಕರುಣೆಯಾಗಿ ಕಾಣಿಸಿಕೊಂಡ ಮಾದಯ್ಯ ನಿಷ್ಕರುಣಿಯಾಗುತ್ತಾನೆ. ಯಾರೇ ಆದರೂ ತನಗೆ ಅಧೀನವಾಗುವುದು ಇಲ್ಲಿ ಅವನಿಗೆ ಮುಖ್ಯವಾಗುತ್ತದೆ. ಇದು ಒಂದು ರೀತಿಯಲ್ಲಿ ಸ್ಥಳೀಯವಾಗಿ ಇದ್ದ ಮತ್ತು ಹೊರಗಿನಿಂದ ಬಂದ ಎರಡು ಶಕ್ತಿಗಳ ನಡುವಿನ ಸಂಘರ್ಷದಂತೆ ಕಾಣುತ್ತದೆ. ಸಂಕಮ್ಮ ಹೆಣ್ಣಿಗೆ ಇರಬೇಕಾದ ಮುಕ್ತತೆಯ ಉಳಿವಿಗಾಗಿ ಹೋರಾಟ ಮಾಡಿ ಗೆಲ್ಲುತ್ತಾಳಾದರೆ, ಕಾಳಮ್ಮ ಹೆಣ್ಣಿನ ಕೈಲಿ ಉಳಿಯಬೇಕಾದ ಒಡೆತನಕ್ಕಾಗಿ ಹೋರಾಡಿ ಸೋಲುತ್ತಾಳೆ. ಒಂದು ಕಡೆಯ ಗೆಲುವು ಮತ್ತು ಮತ್ತೊಂದು ಕಡೆಯ ಸೋಲಿಗೆ ಪ್ರೇರಕಶಕ್ತಿಯಾಗಿ ನಿಲ್ಲುವ ಮಾದೇಶ್ವರ ವೈರುಧ್ಯದ ವ್ಯಕ್ತಿಯಾಗಿ ಕಂಡರೂ, ಅವನ ಸ್ವಾರ್ಥವಿರುವುದು ತನ್ನ ಒಕ್ಕಲುಗಳನ್ನು ಹೆಚ್ಚು ಮಾಡಿಕೊಳ್ಳುವ ವ್ಯವಹಾರದಲ್ಲಿ ಮಾತ್ರ. ■




# ದೆಹಲಿ ಚುನಾವಣೆ: ಅತಿ ಆತ್ಮವಿಶ್ವಾಸ ಕೈಕೊಟ್ಟಿತೇ?

ಅರವಿಂದ ಕೇಜ್ರಿವಾಲ್ - ದೇವೇಗೌಡರ ಭಾಷೆಯಲ್ಲಿ ಹೇಳುವದಾದರೆ - ಮಣ್ಣಿನಿಂದ ಎದ್ದು ಬಂದಿದ್ದಾರೆ. ಅವರ 49 ದಿನಗಳ ದುಸ್ಸಾಹಸವನ್ನು, ಅವರ ಹಠಯೋಗಿಯಲ್ಲಿರಲಿಲ್ಲವೆಂದು ಅರ್ಥೈಸಿ, ಮನ್ನಿಸಿ, ಮರೆತು, ನಂತರದ ಲೋಕಸಭಾ ಚುನಾವಣೆಯಲ್ಲಿ ಕಂಠಪೂರ್ತಿ ಉಗಿದರೂ, ದೆಹಲಿ ಮತದಾರ ಅವರನ್ನು ಎಬ್ಬಿಸಿ ಹುರಿದುಂಬಿಸಿ ಕಳಿಸಿದ್ದಾರೆ. ಚುನಾವಣಾಪೂರ್ವ ಸಭೆಗಳಲ್ಲಿ, ಚರ್ಚೆಗಳಲ್ಲಿ ಮತ್ತು ಮಾಧ್ಯಮದಲ್ಲಿ ಸಾಕಷ್ಟು ಚಾಟಿ ಏಟು ಕೊಟ್ಟರೂ, ಮತದಾನ ಮಾಡುವಾಗ ಮತದಾರ ಈ ಮಫ್ಲರ್ ನಾಯಕನನ್ನು ಕೈಬಿಡಲಿಲ್ಲ. ಒಂದೇ ಪಕ್ಷ, ಭಾಷೆ, ಸಂಸ್ಕೃತಿ ಎನ್ನುತ್ತಾ ಒಕ್ಕೂಟ ವ್ಯವಸ್ಥೆಯನ್ನು ನಿರ್ನಾಮ ಮಾಡಹೊರಟವರಿಗೆ ಮಾರಣಾಂತಿಕ ಪೆಟ್ಟು ಕೊಟ್ಟಿದ್ದಾರೆ.


ಭಾರತದ ಚುನಾವಣಾ ರಾಜಕೀಯದಲ್ಲಿ ದೆಹಲಿ ಚುನಾವಣಾ ಫಲಿತಾಂಶ ಎಂದೂ ಮರೆಯಲಾಗದ ಮತ್ತು ಇತಿಹಾಸದಲ್ಲಿ ಕಾಯಂ ಉಳಿಯುವ ಅಥವಾ ಜನಸಾಮಾನ್ಯರು ಬಣ್ಣಿಸುವ "ನ ಭೂತೋ ನ ಭವಿಷ್ಯತಿ" ಬೆಳವಣಿಗೆ. ಕಳೆದ ವರ್ಷದ ಸಂಸತ್ ಚುನಾವಣೆಯಲ್ಲಿ ಅಭೂತಪೂರ್ವ ಯಶಸ್ಸನ್ನು ಗಳಿಸಿದ ಪಕ್ಷ, ಆ ಚುನಾವಣೆಯ ಭಿತ್ತಿಪತ್ರಗಳು ಮಾಯವಾಗುವ, ಫ್ಲೆಕ್ಸ್, ಬ್ಯಾನರ್‌ಗಳು ಮಾಸುವ ಮೊದಲೇ, ಈ ರೀತಿ ಮಣ್ಣು ಕಚ್ಚುವುದು ಒಂದು ರಾಜಕೀಯ ದುರಂತ ಎನ್ನಲೇಬೇಕು. ಅದಕ್ಕಿಂತ ಮಿಗಿಲಾಗಿ "ಕಾಂಗ್ರೆಸ್ ಮೂರಂಕಿ ಮುಟ್ಟಲಿಲ್ಲ, ಅಧಿಕೃತ ವಿರೋಧ ಪಕ್ಷದ ಹಕ್ಕನ್ನು ಪಡೆಯುವಷ್ಟು ಸೀಟುಗಳನ್ನು ತೆಗೆದುಕೊಳ್ಳಲಿಲ್ಲ" ಎಂದು ಲೇವಡಿ ಮಾಡಿದ್ದ ಭಾಜಪ, ಇಂದು ಎರಡಂಕಿ ಸೀಟು ಪಡೆಯದಿರುವುದು ಮತ್ತು ಅಧಿಕೃತ ವಿರೋಧ ಪಕ್ಷವೂ ಆಗದಿರುವುದು ಚುನಾವಣಾ ರಾಜಕೀಯದ ಇನ್ನೊಂದು ವಿಪರ್ಯಾಸ.

ಸಂಸತ್ ಚುನಾವಣೆಯ ನಂತರದ ಮೂರು ತಿಂಗಳಿನಲ್ಲಿ ಈ ಚುನಾವಣೆಯನ್ನು ನಡೆಸಿದ್ದರೆ, ಮೋದಿ ಅಲೆಯಲ್ಲಿ ಕಮಲ ದಡ ಸೇರುತ್ತಿತ್ತೇನೋ? ಮೋದಿ ಅಲೆ ಕಾಯಂ ಆಗಿ ಸುನಾಮಿಯಾಗಿಯೇ ಇರಬಹುದು ಎನ್ನುವ ತಪ್ಪು ಲೆಕ್ಕಾಚಾರ ಮತ್ತು ಅತಿಯಾದ ಆತ್ಮವಿಶ್ವಾಸ ಕೈಕೊಟ್ಟಿತು. ಚುನಾವಣೆಯಲ್ಲಿ ಸೋಲು ಗೆಲುವು ಶಾಶ್ವತವಲ್ಲ, ಆದರೆ ಸೋಲು ಸಹನೀಯವಾಗಿರಬೇಕು ಮತ್ತು ಗೌರವಾನ್ವಿತವಾಗಿರಬೇಕು. ಮಲೆನಾಡಿನ ಭಾಷೆಯಲ್ಲಿ ಹೇಳುವುದಾದರೆ ದನಬಡಿದಂತೆ ರಾಷ್ಟ್ರೀಯ ಪಕ್ಷಗಳನ್ನು ಬಡಿದು ಹಾಕಿದರು ಮತ್ತು ಒಕ್ಕೂಟ ವ್ಯವಸ್ಥೆಯೇ ಈ ದೇಶದ ಆಧಾರ ಸ್ತಂಭ ಎಂದು ತೋರಿಸಿದರು. ಭಾಜಪ ಇದನ್ನು ತನ್ನ ಕೆಟ್ಟ ಕನಸಿನಲ್ಲೂ ಊಹಿಸಿರಲಿಕ್ಕಿರಲಿಲ್ಲ.

ಕಳೆದ ಸಂಸತ್ ಚುನಾವಣೆಯಲ್ಲಿ ಮಕಾಡೆ ಮಲಗಿದ ಕಾಂಗ್ರೆಸ್ ತನ್ನ ತಪ್ಪುಗಳನ್ನು ತಿದ್ದಿಕೊಂಡು ಪುಟಿದೇಳಬಹುದು ಎನ್ನುವ ನಿರೀಕ್ಷೆ ಸುಳ್ಳಾಯಿತು. ಅದು ಲಕ್ವ ಬಡಿದವರಂತೆ ಪುನಃ ಮುಗ್ಗರಿಸಿದೆ. ನೂರಿಪ್ಪತ್ತು ವರ್ಷದ ಪಕ್ಷ ರಾಜಧಾನಿಯಲ್ಲಿ, ಹೈಕಮಾಂಡ್ ನೆರಳಲ್ಲಿ ಖಾತೆ ತೆರೆಯಲಾರದ್ದು, ಇನ್ನೊಂದು ಮಹಾನ್ ರಾಜಕೀಯ ದುರಂತ ಎನ್ನಲೇಬೇಕು. ಒಂದು ಚುನಾವಣೆಯಲ್ಲಿ ಒಂದು ಪಕ್ಷ ಅಭೂತಪೂರ್ವ ಯಶಸ್ಸನ್ನು ಗಳಿಸಿದಾಗ ಇದರ ಪರಿಣಾಮ ಸುಮಾರು ಎರಡು ಮೂರು ವರ್ಷಗಳ ತನಕ ಇರುತ್ತಿದ್ದು, ಆ ದಿನಗಳಲ್ಲಿ ನಡೆಯುವ ಯಾವುದೇ ಚುನಾವಣೆಗಳನ್ನು ಆ ಪಕ್ಷ ಗೆಲ್ಲುವುದು ಭಾರತದ ಚುನಾವಣಾ ರಾಜಕೀಯದಲ್ಲಿ ಅಲಿಖಿತ ಆದರೆ ಅಷ್ಟೇ ಮಾಮೂಲಾದ ಪ್ರಕ್ರಿಯೆ. ಆದರೆ ಈ ಟ್ರೆಂಡ್‌ಗೆ ವ್ಯತಿರಿಕ್ತವಾಗಿ, ಕಳೆದ ಲೋಕಸಭಾ ಚುನಾವಣೆಯ ಬೃಹತ್ ಯಶಸ್ಸಿನ ಹೊರತಾಗಿಯೂ, ಕಾಂಗ್ರೆಸ್ ಮುಕ್ತ ಅಥವಾ ಇತರ ಪಕ್ಷ ಮುಕ್ತ ಭಾರತವನ್ನು ಕಟ್ಟುವ ಭಾಜಪದ ಮಹತ್ವಾಕಾಂಕ್ಷಿ ಗುರಿ ಸಾಫಲ್ಯವನ್ನು ಕಾಣದಿರುವುದು ರಾಜಕೀಯ ಪಂಡಿತರ ನಿದ್ದೆಗೆಡಿಸಿದೆ.

ಬಿಹಾರ, ಮಧ್ಯಪ್ರದೇಶ, ಪಂಜಾಬ ಮತ್ತು ಗುಜರಾತ್‌ಗಳಲ್ಲಿ ನಡೆದ ಮರುಚುನಾವಣೆಯಲ್ಲಿ ಭಾಜಪ ನಿರೀಕ್ಷೆಯ ಸಾಫಲ್ಯವನ್ನು ಕಾಣಲಿಲ್ಲ. ಗುಜರಾತ್‌ನಲ್ಲಿ ಒಂದು ಚುನಾವಣೆಯಲ್ಲಿ ಸೋತಿತು. ಭಾರೀ ನಿರೀಕ್ಷೆ ಹುಟ್ಟಿಸಿದ್ದ ಮಹಾರಾಷ್ಟ್ರದಲ್ಲಿ, ಭಾಜಪ, ಶಿವಸೇನೆಯ ಹಂಗಿನರಮನೆಯಲ್ಲಿ ಅಧಿಕಾರ ನಡೆಸಬೇಕಾಯಿತು. ಜಾರ್ಖಂಡ್‌ನಲ್ಲಿಯೂ ಅದೇ ಪರಿಸ್ಥಿತಿಯಾದರೆ, ಹರ್ಯಾಣದಲ್ಲಿ ಸರಳ ಬಹುಮತವಷ್ಟೆ. ಜಮ್ಮು ಕಾಶ್ಮೀರ ಕರಗದೇ ಮಂಜುಗಡ್ಡೆಯಾಗಿಯೇ ಉಳಿಯಿತು. ಉತ್ತರ ಪ್ರದೇಶ ಮತ್ತು ದೆಹಲಿಯ ದಂಡು ಪ್ರದೇಶಕ್ಕೆ ನಡೆದ ಚುನಾವಣೆಯಲ್ಲೂ ಕಮಲ ಅರಳಲಿಲ್ಲ.

ರಾಜಕೀಯ ಪಕ್ಷಗಳಲ್ಲಿ ತೀರಾ ಮಾಮೂಲಾದ "ಗೆದ್ದರೆ ಧುರೀಣತ್ವ..ಸೋತರೆ ಇನ್ಯಾರೋ" ಎನ್ನುವ ಪ್ರಕ್ರಿಯೆ ಈಗ ಭಾಜಪದಲ್ಲಿಯೂ ಆರಂಭವಾಗಿದೆ. ಗೆದ್ದಿದ್ದರೆ ನರೇಂದ್ರ ಮೋದಿಗೇ ಹಾರ ಹಾಕುತ್ತಿದ್ದರು.. ಆದರೀಗ ಕಿರಣ್ ಬೇಡಿಯವರನ್ನು ದೂರುತ್ತಿದ್ದಾರೆ.



ಭಾಜಪ ಆರು ಮಂತ್ರಿಗಳನ್ನು ಮತ್ತು 120 ಸಂಸದರನ್ನು ಚುನಾವಣಾ ಹೋರಾಟಕ್ಕೆ ನಿಯೋಜಿಸಿತ್ತು. ವಿಸ್ಮಯವೆಂದರೆ ಒಂದೊಂದು ಮಂತ್ರಿ ಒಂದೊಂದು ಸೀಟನ್ನು ಪಡೆಯಲಾರದೇ ಹೋಗಿದ್ದು ಮತ್ತು 20 ಸಂಸದರು ಸೇರಿ ತಲಾ ಒಂದು ಸೀಟನ್ನು ಗೆಲ್ಲಿಸಲಾರದೇ ಹೋಗಿದ್ದು.

ಆಡಳಿತ ನಡೆಸುವುದಕ್ಕೂ ಅಲಂಕಾರಿಕ ಶಬ್ದಗಳಿಂದ ಭಾಷಣ ಮಾಡುವುದಕ್ಕೂ ವ್ಯತ್ಯಾಸವಿದೆ. ಮೋದಿ ಸುನಾಮಿ ಈಗ ತಿಳಿಗಾಳಿಯಾಗಿ ಶಿಥಿಲವಾಗಿದೆ. ಕಪ್ಪು ಹಣ ಭಾರತಕ್ಕೆ ವಾಪಸ್ ತರುವ ವಿಚಾರದಲ್ಲಿ ಸರ್ಕಾರದ ಗೊಂದಲದ ನಡೆ. ಪೆಟ್ರೋಲಿಯಮ್ ದರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗಣನೀಯವಾಗಿ ಇಳಿದರೂ ಅದಕ್ಕನುಗುಣವಾಗಿ ಭಾರತದಲ್ಲಿ ತೈಲ ಬೆಲೆ ಇಳಿಯದಿರುವುದು. ತೈಲ ಬೆಲೆ ಇಳಿದಾಗ ಅಬಕಾರಿ ಸುಂಕವನ್ನು ಹೆಚ್ಚಿಸಿರುವುದು. ಬೆಲೆ ಏರಿಕೆಗೆ ಮುಖ್ಯ ಕಾರಣವಾದ ತೈಲ ಬೆಲೆ ಇಳಿದರೂ, ಜೀವನಾವಶ್ಯಕ ಸಾಮಾನುಗಳ ಬೆಲೆ ಇಳಿಯದಿರುವುದು. ನೌಕರಶಾಹಿಯ ಮೇಲೆ ಬಿಗಿಹಿಡಿತ ಮತ್ತು ಅಕಾಲಿಕ ವರ್ಗಾ-ವರ್ಗಿ (ದೆಹಲಿಯಲ್ಲಿ ನೌಕರಶಾಹಿ ಗಮನಾರ್ಹ ಮತದಾರರು). ಹಿಂದಿಯೇತರರಲ್ಲಿ ಹಿಂದಿಹೇರಿಕೆಯ ಭಯ. ಅಧಿಕಾರ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತದ ವದಂತಿ. ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಧರ್ಮ ಎನ್ನುವ ಕೆಲವು ಸಂಘಟನೆಗಳಿಗೆ ಪರೋಕ್ಷ ಬೆಂಬಲದ ಸಂದೇಹ. ಕಾಂಗ್ರೆಸ್ ಅಥವಾ ಬೇರೆ ಪಕ್ಷ ಮುಕ್ತ ರಾಜಕೀಯ ಧ್ಯೇಯ. ಅರ್ಹ ಅಭ್ಯರ್ಥಿಗಳಿದ್ದರೂ ಯಾವುದೋ ರಾಜಕೀಯದ ಲಾಭದ ಆಶೆಯಲ್ಲಿ ಹೊರಗಿನವರಾದ ಕಿರಣ ಬೇಡಿಯವರಿಗೆ ಮುಖ್ಯಮಂತ್ರಿ ಕಿರೀಟ ಹಾಕುವ ಮಸಲತ್ತು, ಇವೆಲ್ಲವೂ ದೆಹಲಿಯಲ್ಲಿ ಕಮಲ ಮುದುಡಲು ಕಾರಣಗಳಾಗಿವೆ.

- ರಮಾನಂದ ಶರ್ಮಾ, ಬೆಂಗಳೂರು

## ತೀಸ್ತಾ ಸೆಟಲ್ವಾಡ್ ಮೇಲಿನ ದೌರ್ಜನ್ಯ ನಿಲ್ಲಿಸಿ

ಸಾಮಾಜಿಕವಾಗಿ ಅನ್ಯಾಯಕ್ಕೊಳಗಾದ ಜನರಿಗೆ, ಸಂತ್ರಸ್ತರಿಗೆ ನ್ಯಾಯ ಒದಗಿಸುವುದಕ್ಕಾಗಿ ಹೋರಾಡುತ್ತಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಹಾಗೂ ಅವರ ಕುಟುಂಬದ ವಿರುದ್ಧ ಗುಜರಾತ್ ಸರಕಾರ ಆರೋಪಗಳು ತೀರಾ ಒಪ್ಪತಕ್ಕುದ್ದಲ್ಲ ಮತ್ತು ತೀವ್ರ ಆತಂಕಕಾರಿ ಸಂಗತಿಯಾಗಿದೆ. ಗಲಭೆ ಸಂತ್ರಸ್ತರಿಗೆ ಸಂಬಂಧಿಸಿದ ನಿಧಿಯ ದುರ್ಬಳಕೆಯ ಆರೋಪ ಹೊರಿಸಿ ಸಾಮಾಜಿಕ ಕಾರ್ಯಕರ್ತೆಯ ನೈತಿಕ ಸ್ಥೈರ್ಯವನ್ನು ಕುಗ್ಗಿಸುವುದಕ್ಕಾಗಿ ಫ್ಯಾಸಿಸ್ಟ್ ಶಕ್ತಿಗಳು ಯತ್ನಿಸುತ್ತಿವೆ. ಆರೋಪಿಯನ್ನು ಕೇವಲ ಒಂದು ಆರೋಪದ ಮೇರೆಗೆ ಬಂಧಿಸಿರುವುದು ಅಸಂವಿಧಾನಿಕ ವಾದುದು ಮತ್ತು ಪೊಲೀಸರು ಎಸಗಿರುವ ಕಾನೂನು ಬಾಹಿರ ಕೃತ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಕೃತ್ಯಗಳಿಗೂ ನ್ಯಾಯಾಲಯಗಳೂ ಮಾನ್ಯತೆ ದೊರಕುತ್ತಿರುವುದು ದುರದೃಷ್ಟಕರವಾದುದು. ಎಲ್ಲಾ ಪ್ರಜಾಪ್ರಭುತ್ವಪರ ಕಾರ್ಯಕರ್ತರು ತಮ್ಮ ಮೌನ ಮುರಿದು, ಫ್ಯಾಸಿಸ್ಟ್ ಶಕ್ತಿಗಳ ಕೃತ್ಯಗಳನ್ನು ವಿರೋಧಿಸಿ ನ್ಯಾಯಪರ ಧ್ವನಿ ಎತ್ತಬೇಕಿದೆ.

- ಫರೀದಾ ಹಸನ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ
ನ್ಯಾಶನಲ್ ವುಮೆನ್ಸ್ ಫ್ರಂಟ್, ಕರ್ನಾಟಕ

## ಕಾಮಾರಿಯ ಕಥೆ ಹೇಳಹೋಗಿ ದಬ್ಬಿಸಿಕೊಂಡ ಕಾಮಕಥಾ ಪ್ರವೀಣ

ಕೆಲ ವರ್ಷಗಳ ಹಿಂದೆ ನಮ್ಮ ರಾಘವೇಶ್ವರ ಸ್ವಾಮೀಜಿಗಳು ಒಂದು ಪೀಕಲಾಟಕ್ಕೆ ಸಿಲುಕಿ ಬಾಲ್ ಬಾಲ್ ಬಚ್ ಗಯಾ ಎಂಬಂತೆ ಕ್ಷೌರಿಕರ ಪೆಟ್ಟಿನಿಂದ ಹೇಗೋ ಬಚಾವಾಗಿದ್ದರು. ತೆನಾಲಿ ರಾಮನ ಕರಿ ನಾಯನ್ನು ಬಿಳಿ ಮಾಡುವ ಕಥೆ ಅದು. ಅವತ್ತು ಜಾತೀಯತೆಗೆ ತಳುಕು ಹಾಕಿದಂತಿದ್ದ ಆ ಕಥೆ ಇದೀಗದೇ ರಾಘವನಂತವರಿಗೇನೇ ಹೇಳಿಮಾಡಿಸಿದಂತಿದೆ. "ಯೇ ಕಭೀ ನಹಿ ಸುಧರೇಗಾ?" (ಈತ ತಿದ್ದಿಕೊಳ್ಳೋದು ಕಷ್ಟ) ಎಂಬಂತೆ ಹೊಡೆತದ ಮೇಲೆ ಹೊಡೆತ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂಬಂತೆ ತನ್ನ ಖೊಟ್ಟಿ ದೈವತ್ವ ಸಾರುವ ಚಾಳಿಯನ್ನು ಬಿಡದೇ ರಾಘವ ಹಳೆಯ ರಾಮ ಕಥೆ ಬಿಟ್ಟು ಇದೀಗ ಶಿವ ಕಥೆ ಹೇಳ ಹೋಗಿ ಎಲ್ಲರಿಂದಲೂ ನಗೆಪಾಟಲಿಗೀಡಾಗಿದ್ದಾನೆ. ಇದೆಲ್ಲಾ ಬೇಕಿತ್ತೇ ಎಂದು ಆತನ ಭಕ್ತರೇ ಆಡಿಕೊಳ್ಳುವಂತಾಗಿದೆ. ರಾಘವನ ರಾಮಕಥಾ ಅಭಿಯಾನ ಭಾರೀ ಸಕ್ಸಸ್ ಅಂತೆ (ಕೆಲವರಿದನ್ನು 'ಸೆಕ್ಸ್' ಎನ್ನುವುದೂ ಉಂಟು). ಅದರಿಂದ ತನ್ನ ಮನದಾಸೆಯನ್ನು ಸುಖವಾಗಿ ಈಡೇರಿಸಿಕೊಂಡ ರಾಘವನಿಗೆ ಇದೀಗ ಕಾಮನನ್ನೇ ಕೊಂದ ಕಾಮಾರಿ ಶಿವನ ಕಥೆ ಹೇಳಲು ಆತನಿಗೆ ಆಫರ್ ಬಂದಿತ್ತಂತೆ. (ಅದ್ಯಾವ ತಲೆಕೆಟ್ಟವ ಈ ಕಾಮಕಥಾ ಪ್ರವೀಣನನ್ನು ಕಾಮಾರಿಯ ಕಥೆಗೆ ಆರಿಸಿದನೋ ಅಬ್ಬಾ.. ಅತ ಮಹಾನುಭಾವನೇ ಹೌದು.)

ಪಶ್ಚಿಮಘಟ್ಟ ಪರಿಸರದ ಗಂಡುನದಿ ಕುಮಾರಧಾರ ನೇತ್ರಾವತಿಯೊಂದಿಗೆ ಸಂಗಮಗೊಳ್ಳುವ ಉಪ್ಪಿನಂಗಡಿಯ ದೇಗುಲವೊಂದರ ಕಾರ್ಯಕ್ರಮಕ್ಕೆ ಶಿವಕಥೆ ಹೇಳಲು ಕಾರ್ಯಕ್ರಮ ಸಂಘಟಕರು ರಾಘವನನ್ನು ಆರಿಸಿದ್ದರು. ಮುಜರಾಯಿ ಇಲಾಖೆಯ ಅಡಿಯಲ್ಲಿರುವ ದೇಗುಲದವರ ಈ ನಿರ್ಧಾರವನ್ನು ಪ್ರಶ್ನಿಸಿ ಅತ್ಯಾಚಾರ ಆರೋಪಿ ರಾಘವ ತಪ್ಪಿತಸ್ಥ ಅಲ್ಲವೆಂದು ಸಾಬೀತಾಗದೇ ದೇಗುಲದಲ್ಲಿ ಉಪದೇಶ ಕೊಡುವುದು ಸಂಸ್ಕೃತಿಗೇ ಅಪಚಾರವೆಂದು ಸಮಾನ ಮನಸ್ಕರು ದೂರಿರುವ ಕಾರಣ ಸರಕಾರವೇ ರಾಘವನಿಗೆ ರೆಡ್ ಸಿಗ್ನಲ್ ಕೊಟ್ಟಿತ್ತು. ಆದರೂ ಕಾರ್ಯಕ್ರಮದ ದಿನ ತನ್ನ ಮಾಮೂಲಿ ಅಹಂಭಾವದಿಂದ ಉಪ್ಪಿನಂಗಡಿಗೆ ಬಂದ ರಾಘವ ತನ್ನ ಹಿಂಬಾಲಕರಿಂದ ಅಲ್ಲಿನ ಪರಿಸ್ಥಿತಿ ತನ್ನ ಶಿವಕಥೆಯಲ್ಲಿನ "ಇ" ಕಾರ "ಅ" ಕಾರಕ್ಕೆ ಪರಿವರ್ತಿತ(ಶವ) ವಾಗುವ ದಿಕ್ಕಿನಲ್ಲಿದೆ ಎಂಬುದನ್ನು ಕೇಳಿ ತಿಳಿದು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಪುನಃ ಪೇರಿ ಕಿತ್ತಿದ್ದಾನೆ.

"ಆಯೋಜಕರು ನನ್ನನ್ನು ಕರೆದಿದ್ದರು. ಆ ಮಾತಿಗೊಪ್ಪಿದ ಬದ್ಧತೆಗೋಸ್ಕರವಾಗಿ ಹೋಗಿದ್ದೆನಷ್ಟೆ" ಎನ್ನುವ ರಾಘವನ ಮಾತಿನ ಬದ್ಧತೆ ಅಷ್ಟರಲ್ಲೇ ಇದೆ. ಕೆಕ್ಕಾರು ಮಠದಲ್ಲಿ ನಾನೀಗ ಚಾತುರ್ಮಾಸ ವ್ರತದಲ್ಲಿದ್ದೇನೆ ಹಾಗಾಗಿ ನಾನೀಗ ಬರಲಾಗುವುದಿಲ್ಲ ವ್ರತ ಮುಗಿದ ಬಳಿಕ ನಾನೇ ಖುದ್ದು ಬರುತ್ತೇನೆಂದು ಪೊಲೀಸರಿಗೆ ಹೇಳಿ ನಂತರ ತಾನು ಕೊಟ್ಟ ಮಾತಿನ ರೀತಿ ನಡಕೊಳ್ಳದ ರಾಘವನ ಮಾತಿನ ಬದ್ಧತೆ ಎಲ್ಲರಿಗೂ ಗೊತ್ತಿದ್ದದ್ದೇ ಬಿಡಿ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

## ಡಾ.ಚಿದಾನಂದಮೂರ್ತಿ ಅವರಿಗೆ ಅರಳುಮರಳು

ಡಾ.ಚಿದಾನಂದಮೂರ್ತಿ ಅವರು ವಚನ ಸಾಹಿತ್ಯ ಮತ್ತು ಶರಣ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿದವರು. ಅವರೇ ರಚಿಸಿದ -ವಚನ ಶೋಧದಲ್ಲಿ- ಪಂಚ ಪೀಠದವರು 13-15ನೆ ಶತಮಾನದಲ್ಲಿ ಬಂದವರು ಅಂತಾ ಹೇಳಿದ್ದಾರೆ. ಆದರೆ ಅವರು ಆರೆಸ್ಸೆಸ್ ಮೂಲದಿಂದ ಬಂದವರು. ಅವರಿಗೆ ವೃತ್ತಿಗೆ ಬದುಕಿಗೆ ಪುರಸ್ಕಾರಕ್ಕೆ ಬಸವಣ್ಣ ಬೇಕು. ಆದರೆ ಧರ್ಮದ ವಿಷಯಕ್ಕೆ ಬಂದಲ್ಲಿ ತಮ್ಮ ವೀರ ಮಾಹೇಶ್ವರ ಜಾತಿಗೆ ನಿಷ್ಠೆ. ಅಂದಿನ ಕಾಲದ ಪುರೋಹಿತರೆ ಇಂದಿನ ವೀರ ಮಾಹೇಶ್ವರರು." ಅದರಲ್ಲಿ ಡಾ.ಚಿದಾನಂದಮೂರ್ತಿ ಒಬ್ಬರು.

ಪ್ರಸಿದ್ಧಿ ಪ್ರಚಾರ ಅವರ ಅಂಟುರೋಗ . ತಮ್ಮ ಪ್ರತಿಷ್ಠೆಗೆ ಶರಣರ ಚರಿತ್ರೆ ವಿಕಾರ ಮಾಡುವ ಡಾ ಚಿದಾನಂದ ಮೂರ್ತಿ ಈ ಕೂಡಲೇ ಜನರಲ್ಲಿ ಕ್ಷಮಾಪಣೆ ಕೇಳಬೇಕು .ಸಮಾಜ ಒಡೆದವರು ಶಿವಾಚಾರ್ಯರು . ಇಲ್ಲಸಲ್ಲದ ಶಿಖಾಮಣಿಯ ತಂದು ಅದರ ಆದಿ ಅನಾದಿಗಳ ವ್ಯರ್ಥ ಚರ್ಚೆ ಮಾಡಿರುವುದು ಈ ಎಲ್ಲ ಗೊಂದಲಗಳಿಗೆ ಕಾರಣ.

ವೀರಶೈವ - ಈ ಪದವು ಶರಣರ ಷಟಸ್ಥಲ ವಚನಗಳಲ್ಲಿ ಕಾಣಬರುವದಿಲ್ಲ. ಹೆಚ್ಚಿನ ವಚನಗಳಲ್ಲಿ ಬರುತ್ತದೆಯಾದರೂ ಅವುಗಳನ್ನು ಶರಣರು ಬರೆದಿರುವರು ಎಂಬುದಕ್ಕೆ ಪುರಾವೆ ಇಲ್ಲ.

ಹಂಪಿಯನ್ನು ಹಾಳು ಮಾಡಿದ ವೀರಶೈವರು ಆಂಧ್ರ ಮೂಲದಿಂದ ಬಂದವರು: ಡಾ.ಚಿದಾನಂದಮೂರ್ತಿ ವೀರಶೈವ ಧರ್ಮವು ಬಸವಣ್ಣನಿಗಿಂತಲೂ ಹಳೆಯದ್ದು, ಬಸವಣ್ಣ ವೀರಶೈವನಾಗಿ ಲಿಂಗ ದೀಕ್ಷೆ ಪಡೆದನು ಅಂತ ಬುರುಡೆ ಬಿಡುವ ಪುರೋಹಿತರು.

ಬಸವಣ್ಣ ಜಗವು ಕಂಡ ಶ್ರೇಷ್ಠ ದಾರ್ಶನಿಕ. ವೀರಶೈವವು ಬಸವ ಪೂರ್ವದಲ್ಲಿದ್ದರೆ ಕಾಶ್ಮೀರ ಅರಸು, ಬೊಂತಾದೇವಿ, ತೆಲುಗು ಮಸಣೇಶ, ಅಂಡಾಳರು ಏಕೆ ಬಸವ ಕಲ್ಯಾಣಕ್ಕೆ ಹೆಜ್ಜೆ ಹಾಕಿದರು?

ಗುರುಪೀಠ ಇತ್ತೀಚಿನವು. ಆದರೆ ಗುರುಪೀಠವಾಗ[ಲಿ] ವಿರಕ್ತ ಪೀಠವಾಗಲಿ ಜಾತಿ ಜಂಗಮರಿಂದ ಕೂಡಿದ ಒಂ[ದು] ವ್ಯವಸ್ಥೆ ಅಥಣಿ ಶಿವಯೋಗಿಗಳು, ಮುಳಗುಂದ ಬಾಲಲೀ[ಲಾ] ಮಹಾಂತ ಶಿವಯೋಗಿಗಳು, ಕಲ್ಲಿಮಠದ ಶಿವಯೋಗಿಗಳು, ಮುರುಗೋಡ ಮಹಾಂತ ಶಿವಯೋಗಿಗಳು ಇಂತ[ಹ] ಬೆರಳೆಣಿಕೆಯಷ್ಟು ಬಸವ ಭಕ್ತರನ್ನು ಹೊರತುಪಡಿಸಿದ[ರೆ] ಎಲ್ಲರೂ ವೀರ ಮಾಹೇಶ್ವರ ಹಿತಾಸಕ್ತಿ ನೋಡಿಕೊಂಡವ[ರು].

ಈಗ ಚಿದಾನಂದಮೂರ್ತಿ ವೀರ ಮಾಹೇಶ್[ವರ] ಹಿತಾಸಕ್ತಿ ನೋಡಿಕೊಳ್ಳುವ ಗುತ್ತಿಗೆ ಪಡೆದಿದ್ದಾರೆ. ಅವರಿ[ಗೆ] ಬಸವಾದಿ ಶರಣರು ಬುದ್ಧಿ ಕೊಡಲಿ.

-ಡಾ ಶಶಿಕಾಂತ ಪಟ್ಟಣ, ಪೂನ[ಾ]

## ಮಧ್ವ ಬ್ರಾಹ್ಮಣರ ವಿಚಿತ್ರ ತರ್ಕಗಳು


ಈ ವಾರದ ಸಂಚಿಕೆಯಲ್ಲಿ ಪ್ರವೀಣ್ ಎಸ್ ಶೆಟ್ಟ[ರು] ತಮ್ಮ ಲೇಖನದಲ್ಲಿ ಹೇಳಿರುವಂತೆ ಘರ್‌ವಾಪಸಿ ಅಡಿಯ[ಲ್ಲಿ] ಮರುಮತಾಂತರ ಆದವರನ್ನು ನೇರ ಬ್ರಾಹ್ಮಣರನ್ನಾಗಿ ದೀಕ್ಷೆ ಕೊಟ್ಟು ವಾದಿರಾಜರು ಹಾಕಿ ಕೊಟ್ಟ ಮೇಲ್ಪ[ಂಕ್ತಿ] ಅನುಸರಿಸಲು ಇಂದಿನ ಉಡುಪಿ ಮಠಾಧೀಶರಿ[ಗೆ] ಸಾಧ್ಯವಿದೆ! ಎಷ್ಟಾದರೂ ಹವ್ಯಕರಂತೆ ಇನ್ನೂ ಕೆಲ[ವು] ಬ್ರಾಹ್ಮಣ ಉಪಜಾತಿಗಳಲ್ಲಿ ಹೆಣ್ಣುಗಳ ಕೊರತೆ ಬಹ[ಳ] ಇದ್ದು ಅನೇಕ ಬ್ರಾಹ್ಮಣ ಗಂಡುಗಳು ನಲವತ್ತು ವಷ[ರ್ದ] ಪ್ರಾಯವಾದರೂ ಇನ್ನೂ ಅವಿವಾಹಿತರಾಗಿಯೇ ಇದ್ದಾ[ರೆ]. ಘರ್‌ವಾಪಸಿಯಲ್ಲಿ ಮರುಮತಾಂತರ ಆಗುವವರನ್ನು ನೇ[ರ] ಬ್ರಾಹ್ಮಣರನ್ನಾಗಿ ದೀಕ್ಷೆ ಕೊಟ್ಟರೆ ಅವರ ಹೆಣ್ಣುಗಳ[ನ್ನು] ಇಂತಹ ಅವಿವಾಹಿತ ಬ್ರಾಹ್ಮಣ ಗಂಡುಗಳಿಗೆ ಮದು[ವೆ] ಮಾಡಿಸಬಹುದು ಅಲ್ಲವೇ.

ಉಡುಪಿಯ ಕುಪ್ರಸಿದ್ಧ ಪಂಕ್ತಿ ಭೇದದ ಬಗ್ಗೆ ಎಲ್ಲರಿಗ[ೂ] ಗೊತ್ತಿದೆ. ಆದರೆ ಹೆಚ್ಚಿನ ಜನರಿಗೆ ಗೊತ್ತಿರದ ವಿಷಯವೆಂ[ದರೆ] "ಅಡ್ಡ ಪಂಕ್ತಿ" ಅರ್ಥಾತ್ ವಾದಿರಾಜರ ಸಮಯದ[ಲ್ಲಿ] ಬ್ರಾಹ್ಮಣರಾಗಿ ಮತಾಂತರ ಹೊಂದಿದ ಶೂದ್ರ ಮೂಲ[ದ] ಬ್ರಾಹ್ಮಣರಿಗೆ ಈಗಲೂ ಇರುವ ಪ್ರತ್ಯೇಕ ಪಂ[ಕ್ತಿ]. ವಾದಿರಾಜರು ಮತಾಂತರಿಸಿದ ಕೆಳಜಾತಿಯವರನ್ನು ಮಟ್ಟು-ಬ್ರಾಹ್ಮಣ ಅಥವಾ ಅಗಸ್ತ್ಯ-ಬ್ರಾಹ್ಮಣ ಎಂ[ದು] ಕರೆಯಲಾಗುತ್ತಿದ್ದು ಈಗಲೂ ಇವರನ್ನು ಮೂಲ ಮ[ಧ್ವ] ಬ್ರಾಹ್ಮಣರು ತಮ್ಮೊಟ್ಟಿಗೆ ಊಟಕ್ಕೆ ಒಂದೇ ಪಂಕ್ತಿಯ[ಲ್ಲಿ] ಕೂಡಲು ಬಿಡುವುದಿಲ್ಲ. ಮಟ್ಟು ಹಾಗೂ ಅಗಸ್[ತ್ಯ] ಬ್ರಾಹ್ಮಣರಿಗಾಗಿ ಅದೇ ಭೋಜನಾಲಯದೊಳ[ಗೆ] ಇನ್ನೊಂದು ಪಂಕ್ತಿಯಲ್ಲಿ ಊಟ ಹಾಕಲಾಗುತ್ತದೆ. ಅದು[ವೇ] ಅಡ್ಡ ಪಂಕ್ತಿ, ಅಂದರೆ ಪಂಕ್ತಿ ಭೇದದ ಒಳಗೊಂದು ಪ[ಂಕ್ತಿ] ಭೇದ! ಜಗತ್ತಿನಲ್ಲಿ ಉಡುಪಿಯ ಹೊರತು ಬೇರೆಲ್ಲಿಯ[ೂ] ಇಂತಹ ವಿಚಿತ್ರ ಇರಲಾರದು. ಹೆಚ್ಚಿನ ಜನರಿಗೆ ಗೊತ್ತಿ[ರದ] ಇನ್ನೊಂದು ಆಘಾತಕಾರಿ ಆಪಾದನೆಯಿದೆ. ಅದೆಂ[ದರೆ] ವಾದಿರಾಜ ಸ್ವಾಮಿಗಳು ಕ್ರಿಶ 1600 ರಲ್ಲಿ ಜಲಸ್ತಂಭನದಿಂ[ದ] ಜೀವಂತ ಸಮಾಧಿ ಪಡೆದರು ಎಂದು ಇತಿಹಾಸದ[ಲ್ಲಿ] ನಮೂದಿಸಲಾಗಿದೆ. ಜಲಸ್ತಂಭನ ಎಂದರೆ ನೀರಲ್ಲಿ ಮುಳ[ುಗಿ] ಸ್ವ-ಇಚ್ಛೆಯಿಂದ ಸಾಯುವುದು. ಕೆಲವು ಇತಿಹಾಸಕಾ[ರರ] ಆಪಾದನೆಯೆಂದರೆ 119 ವರ್ಷದ ಹಣ್ಣು ಹ[ಣ್ಣು] ಮುದುಕರಾಗಿದ್ದ ವಾದಿರಾಜರನ್ನು ಮಠದೊಳಗಿನ ಅವರ[ದೇ] ವಿರೋಧಿಗಳು. ಅವರು ಮಠದ ಕೆರೆಯಲ್ಲಿ ಸ್ನಾ[ನ] ಮಾಡುವಾಗ ನೀರಿನಲ್ಲಿ ಅದುಮಿಟ್ಟು ಕೊಂದು ನಂ[ತರ] ಅದು ಜಲಸಮಾಧಿ ಎಂದು ಕರೆದರಂತೆ. ಇದಕ್ಕೆ ಕಾರ[ಣ] ವಾದಿರಾಜರು ಹೊಸದಾಗಿ ಬ್ರಾಹ್ಮಣರಾಗಿ ಮತಾಂ[ತರ] ಹೊಂದಿದ ಶೂದ್ರರಿಗೂ ಸಮಾನ ಗೌರವ ಕೊಡಬೇ[ಕು], ಅವರೊಟ್ಟಿಗೆ ಮೂಲ ಬ್ರಾಹ್ಮಣರು ವಿವಾಹ ಸಂಬಂ[ಧ] ಬೆಳೆಸಬೇಕು ಎಂದು ಪ್ರತಿಪಾದಿಸುತ್ತಿದ್ದದ್ದು. ಇದನ್ನು ಸಹಿ[ಸದ] ಮೂಲ ಬ್ರಾಹ್ಮಣರು ಅವರನ್ನು ನೀರಲ್ಲಿ ಮುಳುಗಿ[ಸಿ] ಕೊಂದರಂತೆ. ಈ ಆಪಾದನೆಯ ಸತ್ಯಾಸತ್ಯತೆಯ ಬ[ಗ್ಗೆ] ಈಗ ಸಂಶೋಧಿಸುವುದು ಕಷ್ಟ.

ಲೇಖಕ ಪ್ರವೀಣ್ ಶೆಟ್ಟರು ಪರಶುರಾಮ[ನ] ಕಥೆಯಲ್ಲಿರುವ ಸಂಕೇತಗಳ ಬಗ್ಗೆ ಹೊಸ ವ್ಯಾಖ್[ಯಾನ] ಕೊಟ್ಟಿರುವುದು ತುಂಬಾ ಚೆನ್ನಾಗಿದೆ. ಪರಶುರಾಮ ಸೃಷ್ಟಿ[ಯ] ಕಥೆ ಸುಳ್ಳು, ಆದರೆ ಹೊರಗಿನಿಂದ ಬಂದ ಆರ್ಯ[ರು] ಅರಣ್ಯ ನಾಶಮಾಡಿ ಕರಾವಳಿಯ ಭೂಮಿ ಆಕ್ರಮಿಸಿ[ದ್ದು] ಹಾಗೂ ನಾಗರಹಾವು ಮತ್ತು ಕಾಡುಪ್ರಾಣಿಗ[ಳ] ಮಾರಣಹೋಮ ನಡೆಸಿದ್ದು ನಿಜ ಎಂದು ಈ [ಕಥೆ] ಸಂಕೇತಿಸುವುದು ಸರಿ. ರೇಣುಕಾದೇವಿಯ ತಲೆ ಪರಶುರಾ[ಮ] ಕಡಿದಿದ್ದು ಮಾತೃ ಪ್ರಧಾನ ಸಂಸ್ಕೃತಿ ನಾಶ ಮಾಡಿ ಸ್ಥಳೀಯ[ರ] ಮೇಲೆ ಪಿತೃ ಪ್ರಧಾನ ಸಂಸ್ಕೃತಿ ಹೇರಿದ್ದರ ಸಂಕೇತ. ವೈದಿ[ಕರ] ಎಲ್ಲಾ ಕಾಲ್ಪನಿಕ ಪೌರಾಣಿಕ ಕಥೆಗಳ ಹಿಂದೆ ತ[ಮ್ಮ] ಹೀನಕೃತ್ಯಗಳನ್ನು ಸಮರ್ಥಿಸುವ ಅಥವಾ ಮುಚ್ಚಿಡ[ುವ] ಹುನ್ನಾರ ಇರುವುದು ನಿಜ.

- ಗಿರೀಶ್ ಟಿ. ಕುಂಟೆ, ಉಡ[ುಪಿ]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ[ಮ್ಮ] ಪ್ರತಿಕ್ರಿಯೆಗಳನ್ನು 9980331427 ನಂಬರ್‌[ಗೆ] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹ[ುದು].



# ಮನ ಕಲಕುವ 'ಮೈತ್ರಿ'

'ಮೈತ್ರಿ' ಸಿನಿಮಾ ನೋಡಿದ ಮೇಲೆ ಆ ಸಿನಿಮಾ ಬಗ್ಗೆ ನಾಲ್ಕು ಮಾತು ಬರೆಯಲೇಬೇಕು ಅನ್ನಿಸುವುದರಲ್ಲೂ ಲಾಜಿಕ್ ಇದೆ. ಎಂದಿನ ಗಾಂಧಿನಗರದ ತಳಿಯಲ್ಲ ಈ ಸಿನಿಮಾ. ಹಣ ಗಳಿಸುವುದೊಂದೇ ಉದ್ದೇಶವಾಗಿದ್ದರೆ ಈ ಚಿತ್ರದ ಅಗತ್ಯವಿರಲಿಲ್ಲ, ಸಿನಿಮಾ ಎಂಬುದು ಸ್ಟಾರ್‌ಡಂ, ಗಿಮಿಕ್, ಬಿಲ್ಡಪ್, ಲಾಜಿಕ್ಕಿಲ್ಲದ ಫೈಟುಗಳು, ಅಸಹಜ ಗ್ರಾಫಿಕ್ಸ್, ಅಸಂಬದ್ಧ ಐಟಂ ಸಾಂಗ್ಸ್, 'ನಾನು ಕೈಯಿಟ್ರೆ ಹಂಗೆ, ಕಾಲೆತ್ತೊಂಡ್ರೆ ಹಿಂಗೆ' ಎಂಬ ಮಾದರಿಯ ಡೈಲಾಗ್ಸ್... ಇವುಗಳ ಸಹಯೋಗದೊಂದಿಗೆ 'ಕಲೆ ಕಟ್ಟಿಕೊಂಡು ಏನಾಗಬೇಕಿದೆ, ಒಂದಿಷ್ಟು ಕಾಸು ಮಾಡಿಕೊಳ್ಳೋಣ' ಅನ್ನುವ ಒಂದೇ ಆಶಯವಿದ್ದರೆ 'ಮೈತ್ರಿ'ಯಂತಹ ಚಿತ್ರಗಳ ಅಗತ್ಯವಿರಲಿಲ್ಲ. ಈ ಕಾರಣಕ್ಕಾಗಿಯೇ ಈ ಚಿತ್ರದ ಬಗ್ಗೆ ಬರೆಯಬೇಕು.

ಬಡ ಹುಡುಗನೊಬ್ಬ ಮಾಡದ ತಪ್ಪಿಗೆ ರಿಮ್ಯಾಂಡ್ ರೂಂ ಸೇರುತ್ತಾನೆ; ತನ್ನ ಚುರುಕುಬುದ್ಧಿಯಿಂದ ಉದಯ ಟಿವಿಗಾಗಿ ಪುನೀತ್ ರಾಜ್‌ಕುಮಾರ್ ನಡೆಸಿಕೊಡುವ ಕರುನಾಡ ಕೋಟ್ಯಾಧಿಪತಿ ಕಾರ್ಯಕ್ರಮಕ್ಕೆ ಎಂಟ್ರಿ ಪಡೆಯುತ್ತಾನೆ. ಕೋಟಿ ಗೆಲ್ಲುತ್ತಾನೆ. ಅದೇ ಮೊದಲಬಾರಿಗೆ ಮಕ್ಕಳಿಗಾಗಿ ನಡೆದ ಆಟದಲ್ಲಿ ಈತ ಪ್ರಥಮ ಬಾರಿಗೆ ಕೋಟ್ಯಾಧಿಪತಿ ಆಗುತ್ತಾನೆ. ಪ್ರತಿಭೆ, ಸಾಮಾನ್ಯಜ್ಞಾನ ಇದ್ದರೆ



ಯಾರು ಏನು ಬೇಕಾದರೂ ಸಾಧಿಸಬಹುದು ಎಂಬ ಸತ್ಯ ಅನಾವರಣವಾಗುತ್ತದೆ. ತಾನು ಓದುವ ಸಲುವಾಗಿ ಗೆಳೆಯರ ಸಹಕಾರದಿಂದ ಮಂಡಕ್ಕಿ ಪೊಟ್ಟಣಗಳ ನೆಪದಲ್ಲಿ ಶಾಲಾಪುಸ್ತಕದ ಹಾಳೆಗಳನ್ನು ರಿಮ್ಯಾಂಡ್ ರೂಮಿಗೆ ತರಿಸಿಕೊಳ್ಳಬಲ್ಲ, ಓದಿನೆಡೆಗೆ ಗಮನ, ಶ್ರದ್ಧೆವಹಿಸಬಲ್ಲ ಈತ ಕೇವಲ ಆರನೇ ತರಗತಿವರೆಗೆ ಓದಿ ಮಾಡದ ತಪ್ಪಿಗೆ ರಿಮ್ಯಾಂಡ್ ರೂಂ ಸೇರಿದವನು. ಈ ಚಿತ್ರದ ಈ ಬಡಹುಡುಗ ಅಂದರೆ ಈ ಸಿದ್ರಾಮ. ಈತನ ವಿಶೇಷತೆ ಇರುವುದೇ ಇಲ್ಲಿ.

'ಮೈತ್ರಿ' ಚಿತ್ರಕ್ಕೆ ಸ್ಫೂರ್ತಿಯಾಗುವುದು ಸದ್ಯದ ಸಮಾಜ. ಗೂಳಿ ಪ್ರತಾಪ (ರವಿ ಕಾಳೆ) ಎಂಬ ರೌಡಿ ವೇಶ್ಯಾವಾಟಿಕೆ, ಕಿಡ್ನ್ಯಾಪ್ ಮುಂತಾದ ದಂಧೆಗಳಲ್ಲಿ ತೊಡಗಿಕೊಂಡವನು. ಹೆಣ್ಣೆಂದರೆ ಜೊಲ್ಲು ಸುರಿಸುವ ಕಚ್ಚೆಹರುಕ.. ಶ್ರೀಮಂತರ ಮಕ್ಕಳನ್ನು ಅಪಹರಿಸಿ ಅವರ ಹೆತ್ತವರಿಂದ ಹಣ ವಸೂಲಿ ಮಾಡಿದರೆ, ಬಡವರ ಮಕ್ಕಳನ್ನು ಕಿಡ್ನ್ಯಾಪ್ ಮಾಡಿ ಅವರನ್ನು ಮಾದಕ ವ್ಯಸನಿಗಳನ್ನಾಗಿಸಿ ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೂ, ಗಂಡು ಮಕ್ಕಳನ್ನು ತನ್ನ ಅಕ್ರಮ ವ್ಯವಹಾರಗಳಿಗೂ ಬಳಸಿಕೊಳ್ಳುವಲ್ಲಿ ಈತ ನಿಪುಣ. ಇಷ್ಟಕ್ಕೂ ಹದಿನೆಂಟು ವರ್ಷಕ್ಕೆ ಕೆಳಪಟ್ಟ ಅಪರಾಧಿಗಳನ್ನು ಕೇವಲ ಮೂರು ವರ್ಷ ಬಂಧನದಲ್ಲಿಟ್ಟು ಆಮೇಲೆ ಬಿಡುಗಡೆ ಮಾಡುತ್ತಾರೆ ಎಂಬ ಸತ್ಯವನ್ನು ಮನಗಂಡಿರುವಾತ ಈತ. ಈ ದಿಸೆಯಿಂದಲೇ ಇವನಿಂದ ಅದೆಷ್ಟೋ ಬಾಲಾಪರಾಧಿಗಳು ಹುಟ್ಟಿಕೊಳ್ಳಲು ಕಾರಣವಾಗುವುದು. ಸಿದ್ರಾಮನಂತಹ ಪಾಪದ ಹುಡುಗರು ಮಾಡದ ತಪ್ಪಿಗೆ ಬಲಿಯಾಗುವುದು. ಸಮಾಜದ ನಾಳೆಗಳು ಕತ್ತಲಿಗೆ ದೂಡಿ ಮಾಡುವ ಆತಂಕ ಎದುರಾಗುವುದು. ಇದನ್ನು ನಿರ್ದೇಶಕ ಬಿ.ಎಂ.ಗಿರಿರಾಜ್ ಪ್ರಜ್ಞಾವಂತಿಕೆಯಾಗಿ ಚಿತ್ರಿಸುತ್ತಾರೆ. ತನ್ನ ಅವ್ಯವಹಾರಗಳಿಗೆ ಅಧಿಕಾರ ಮತ್ತನ್ನು ಕೊಡುವಂತಿರಲಿ ಎಂದರಿತ ಗೂಳಿ ಪ್ರತಾಪ ರಾಜಕೀಯಕ್ಕೆ ಇಳಿಯುತ್ತಾನೆ. ಶತಬಂದ [illegible] ಸಾವಿಗೀಡಾದ ಹುಡುಗನೊಬ್ಬನ ವಿಜ್ಞಾನಿ ತಂದೆಯ [illegible], ಗುರಿಯಾಗಿ [illegible] ಅಲ್ಲಿಗೆ ಸಮಾಜದಲ್ಲಿ [illegible] ಬಿಡುತ್ತಾನೆ. ಜಿತುಕೊಂಡರ


ಅವನತಿಯಾಗುತ್ತದೆ.

ಈ ಸಿದ್ರಾಮನಂತವರು ಎಷ್ಟು ಕಾಡುತ್ತಾರೆ ಎಂದರೆ, ಈತ ತನ್ನ ತಾಯಿಯನ್ನು ಗಾಢವಾಗಿ ಅಚ್ಚಿಕೊಳ್ಳುತ್ತಾನೆ. ಆಕೆ ಗೂಳಿ ಪ್ರತಾಪನ ಫ್ಯಾಕ್ಟರಿಯಲ್ಲಿ ಒಲ್ಲದ ಮನಸ್ಸಿನಿಂದಲೇ ಕೆಲಸ ಮಾಡುವಾಗ ಅಗ್ನಿ ಆಹುತಿಗೆ ಬಲಿಯಾದಾಗ ತಬ್ಬಲಿಯಾಗುತ್ತಾನೆ. ಅದೆಷ್ಟೋ ಅನಾಥಮಕ್ಕಳಂತೆ ತಾನೂ ಸಮಾಜದ ದುಷ್ಟ ಸಂತತಿಯಾದ ಗೂಳಿ ಪ್ರತಾಪನಂಥವರ ಸ್ವಾರ್ಥಕ್ಕೆ ಗುರಿಯಾಗುತ್ತಾನೆ. ಗೂಳಿ ಪ್ರತಾಪನ ಪಟಾಲಮ್ಮಿಗೆ ಸೇರಿದ ಮೂರು ಜನ ಹುಡುಗರ ಗಾಳಕ್ಕೆ ಸಿಲುಕಿ ಅನಿವಾರ್ಯವಾಗಿ ಒಬ್ಬ ಶ್ರೀಮಂತ ಹುಡುಗನ ಕಿಡ್ನ್ಯಾಪ್‌ಗೆ ಕಾರಣನಾಗುತ್ತಾನೆ. ಆ ಹುಡುಗ ಅಕಸ್ಮಾತ್ ಕೊಲೆಗೀಡಾದಾಗ ಆ ಕೊಲೆಗೆ ತಾನು ತಲೆ ಕೊಡಬೇಕಾಗಿ ಬರುತ್ತದೆ. ಈ ಕಳಂಕ ಎಷ್ಟು ಪರಿಣಾಮಕಾರಿಯಾಗಿರುತ್ತದೆ ಅಂದರೆ ಪುನೀತ್ ರಾಜ್‌ಕುಮಾರ್ ನಡೆಸಿಕೊಡುವ ಕರುನಾಡ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಸಿದ್ರಾಮ ಚೆನ್ನಾಗಿ ಆಡುತ್ತಿರುವಾಗಲೇ 'ಆತ ಸೋಲುವಂತೆ ಮಾಡಿ' ಎಂದು ಸತ್ತ ಹುಡುಗನ ತಂದೆ (ಮೋಹನ್‌ಲಾಲ್) ಪುನೀತ್ ಮೇಲೆ ಒತ್ತಡ ಹೇರು ವಷ್ಟು, ಸತ್ಯಾಸತ್ಯತೆಗಳ ಅರಿವಿಲ್ಲದ ಪುನೀತ್ ಸಿದ್ರಾಮನ ಬಾಯಲ್ಲೇ ಸತ್ಯಾಂಶವನ್ನು ಹೊರಹಾಕಿಸುವಲ್ಲಿ ಯಶಸ್ವಿಯಾಗುವಷ್ಟು, ಆ ಹುಡುಗನ ಸಾವಿಗೆ ಗೂಳಿ ಪ್ರತಾಪನೇ ನೇರ ಹೊಣೆಯೂ, ಸಿದ್ರಾಮನಿಗೂ ಆ ಸಾವಿಗೂ ಸಂಬಂಧವಿಲ್ಲ ಎಂಬುದನ್ನು ಜಗತ್ತಿಗೆ ಮನದಟ್ಟು ಮಾಡುವಷ್ಟು- ಕಡೆಗೆ ಸಿದ್ರಾಮ ಕೋಟಿ ಗೆಲ್ಲುತ್ತಾನೆ. ಇಲ್ಲೊಂದು ಸ್ವಾರಸ್ಯಕರ ಸಂಗತಿ ಇದೆ. ಅದೆಂದರೆ ಆಗಾಗಲೇ ಐವತ್ತು ಲಕ್ಷ ಗೆದ್ದಿರುವ ಸಿದ್ರಾಮ ಕಡೆಯ ಒಂದೇ ಒಂದು ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟರೆ ಒಂದು ಕೋಟಿ ಗೆಲ್ಲುವ ಅವಕಾಶವಿರುತ್ತದೆ. ಆ ಪ್ರಶ್ನೆ ವಿಜ್ಞಾನಕ್ಕೆ ಸಂಬಂಧಿಸಿದ್ದಾಗಿದ್ದು, ಸತ್ತ ಹುಡುಗನ ತಂದೆಯೇ ಸಿದ್ರಾಮನಿಗೆ ನೆರವಾಗುವುದು ನಿಜಕ್ಕೂ ಬೆಚ್ಚಿ ಬೀಳಿಸುವಂಥದ್ದು. ಅಂಥದೊಂದು ಸಂದರ್ಭ ತಂದೊಡ್ಡುವ ಪುನೀತ್ ರಾಜಕುಮಾರ್ ಮತ್ತು ಸಿದ್ರಾಮನ ಮೇಲಿನ ದ್ವೇಷವನ್ನು ಬಿಟ್ಟು ಸರಿಯಾದ ಉತ್ತರ ಹೇಳಿ ಸಿದ್ರಾಮ ಕೋಟಿ ಗೆಲ್ಲಲು ಕೈ ಜೋಡಿಸುವ ವಿಜ್ಞಾನಿ (ಮೋಹನ್‌ಲಾಲ್)ಯ ದೊಡ್ಡಗುಣ ಇಲ್ಲಿ ಗಣನೆಗೆ ಸಿಕ್ಕುತ್ತವೆ.

ಆ ಮೂಲಕ ಕಥಾಹಂದರ, ಚಿತ್ರಕತೆಯ ತಂತ್ರಗಳು ಪ್ರೇಕ್ಷಕನಲ್ಲಿ ಕುತೂಹಲ, ಬೆರಗು ಮೂಡಿಸುವುದರ ಜೊತೆಗೆ ಮಾನವೀಯ ಸಂಬಂಧಗಳ, ಮಿಡಿತಗಳ ಗಟ್ಟಿತನವನ್ನು ಎತ್ತಿ ಸಾರುತ್ತವೆ. ತಮ್ಮ ನಿಜದ ಪಾತ್ರದಲ್ಲಿ ಕಾಣಿಸಿಕೊಂಡಿರುವ ಪುನೀತ್ ರಾಜಕುಮಾರ್ ಪವರ್ ಸ್ಟಾರ್ ಅನ್ನುವುದರ ಬದಲು ಆರ್ದ್ರ ಭಾವನೆಗಳನ್ನುಳ್ಳ ಅಪ್ಪಟ ಮನುಷ್ಯ ಎನ್ನುವಂತೆ ಗ್ರಹಿಕೆಗೆ ಸಿಗುತ್ತಾರೆ. ಇವೆಲ್ಲವುಗಳ ಮುಖಾಂತರ ಅಮಾಯಕ ಹುಡುಗ ಸಿದ್ರಾಮನ ಬಗ್ಗೆ ಪ್ರೀತಿ, ಅನುಕಂಪ ಹುಟ್ಟಿಕೊಳ್ಳಲು ದಾರಿಯಾಗುತ್ತವೆ.

ಬಾಲಕೈದಿಗಳಿಗೆ ಬೈಯ್ಯುವ, ಹೊಡೆಯುವ ಗುಣವನ್ನು ರೂಢಿಸಿಕೊಂಡಿರುವ ಖಡಕ್ ಜೈಲು ಅಧಿಕಾರಿ(ಅತುಲ್ ಕುಲಕರ್ಣಿ)ಗೆ ಬಾಲಕೈದಿಗಳಲ್ಲಿಯೂ ಪ್ರತಿಭಾವಂತರಿರುತ್ತಾರೆ ಎಂಬ ಸತ್ಯ ಸಿದ್ರಾಮನಿಂದಲೂ, ಅವರನ್ನು ಪ್ರೀತಿಯಿಂದ ಸಂಭಾಳಿಸಿದರೆ ಅವರ ಒರಟುತನ ಕಡಿಮೆಯಾಗಿ ಅವರ ನಾಳೆಗಳೂ ಕೋಮಲತೆಯಿಂದ ಕೂಡಿರುತ್ತವೆ ಎಂಬುದನ್ನು ಪುನೀತ್ ರಾಜಕುಮಾರ್ ಅವರ ಆದರ್ಶಪ್ರಾಯ ಮಾತಿನಿಂದಲೂ ಮನಗಾಣುವುದನ್ನು ಈ ಚಿತ್ರದಲ್ಲಿ ಕಾಣಬಹುದು. ಮಾತೆತ್ತಿದರೆ ಹೊಡೆಯುವ, ಬೈಯ್ಯುವ ಸಂಸ್ಕೃತಿಯನ್ನು ರೂಢಿಸಿಕೊಂಡ ಈ ಅಧಿಕಾರಿ ಮುಂದೆ ತಾವೇ ಮುಂದೆ ನಿಂತು ಸಿದ್ರಾಮನನ್ನು ಕರುನಾಡ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆದುಕೊಂಡು ಹೋಗುವುದು ಮನ ಕಲಕುವ ವಿಷಯ. ಸಿದ್ರಾಮ ಕೋಟಿ ಗೆಲ್ಲುವಲ್ಲಿ ತಾವು ನೀಡುವ ಪ್ರೇರಣೆ, ಉತ್ತೇಜನಗಳ ಮೂಲಕ ಅತುಲ್ ಕುಲಕರ್ಣಿ ಎಂಬ ನ್ಯಾಚುರಲ್ ಆಕ್ಟರ್ ಪ್ರೇಕ್ಷಕನ ಎದೆಯಲ್ಲಿ ಗಟ್ಟಿಯಾಗಿ ಕೂತುಬಿಡುತ್ತಾರೆ.

ಇಷ್ಟೆಲ್ಲಾ ಕಥೆಗೆ ಸಂಬಂಧಿಸಿದ ಮಾತು. 'ಮೈತ್ರಿ' ಚಿತ್ರದ ಕಥೆಯೂ, ಸಮಾಜವೂ ಬೇರೆ ಬೇರೆ ಅಲ್ಲ ಎನ್ನುವಂತೆ ನಿರ್ದೇಶಕ ಈ ಚಿತ್ರವನ್ನು ಜನರ ಮುಂದಿಟ್ಟಿದ್ದಾರೆ. ಪುನೀತ್ ಈವರೆಗೆ ಮಾಡಿದ ಅಷ್ಟೂ ಪಾತ್ರಗಳಿಗಿಂತ ಈ ಪಾತ್ರ ಬೇರೆಯದೆನಿಸುತ್ತದೆ. ಇಷ್ಟು ದಿನ ಪಾತ್ರವಾಗಿ ಅಭಿನಯಿಸುತ್ತಿದ್ದ ಪುನೀತ್ ರಾಜಕುಮಾರ್ ಈ ಚಿತ್ರದ ಮೂಲಕ ಒರಿಜಿನಲ್ ಪುನೀತ್ ರೂಪದಲ್ಲಿ ತೆರೆಯ ಮೇಲೆ ಮೂಡುತ್ತಾರೆ. ಅತುಲ್ ಕುಲಕರ್ಣಿ ಬಾಲಕೈದಿಗಳ ಜೊತೆ ಒರಟಾಗಿ ನಡೆದುಕೊಳ್ಳುವಾಗ ಕ್ಷಣಮಾತ್ರದಲ್ಲಿ ಕದ್ದುಬಿಡುವ ಒಬ್ಬ ಚಾಣಾಕ್ಷ ಕೈದಿಯನ್ನು ಉದ್ದೇಶಿಸಿ ಪುನೀತ್, "ಈತನಿಗೆ ಈವರೆಗೆ ಎಷ್ಟು ಬಾರಿ ಹೊಡೆದಿದ್ದೀರಿ?" ಎಂದಾಗ ನೂರಾರು ಬಾರಿ ಹೊಡೆದಿರುವುದಾಗಿ ಅತುಲ್ ಕುಲಕರ್ಣಿ ಹೇಳುತ್ತಾರೆ. ಆ ಮಾತಿಗೆ ಪ್ರತಿಕ್ರಿಯಿಸುತ್ತಾ ಪುನೀತ್, "ಅದರೂ ಈತ ಕದಿಯುವುದನ್ನು ಬಿಟ್ಟಿಲ್ಲವಲ್ಲ!" ಅಂದಾಗ ಸ್ವತಃ ಅತುಲ್ ಕುಲಕರ್ಣಿ ಬೆರಗಾಗುವುದರ ಜೊತೆಗೆ ಪ್ರೇಕ್ಷಕನ ಮೈಯೊಳಗೆ ಒಂದು ಬಗೆಯ ಮಿಂಚು ಸಂಚಾರವಾಗುತ್ತದೆ. ಪುನೀತ್ ನುಡಿದ ಆ ಮಾರ್ಮಿಕ ಮಾತಿನ ಆಳದಲ್ಲಿ ಅಡಗಿರಬಹುದಾದ ತತ್ವವೊಂದು ಥಿಯೇಟರಿನುದ್ದಕ್ಕೂ ಒಮ್ಮೆಲೇ ಸಂಚಲನ ಉಂಟುಮಾಡುತ್ತದೆ. ಇಂತಹ ಅನೇಕ ಮಾರ್ಮಿಕ ಮಾತುಗಳು, ಸನ್ನಿವೇಶಗಳು 'ಮೈತ್ರಿ'ಯಲ್ಲಿವೆ.



ಮಾ.ಆದಿತ್ಯ ಇಲ್ಲಿ ಸಿದ್ರಾಮನ ಪಾತ್ರ ನಿರ್ವಹಿಸಿದ್ದಾನೆ. ಪಾತ್ರವೇ ಆಗಿ ನಟಿಸಿರುವ ಈ ಹುಡುಗ ಭರವಸೆ ಹುಟ್ಟಿಸುತ್ತಾನೆ. ಚುರುಕು ಸನ್ನಿವೇಶಗಳಲ್ಲಿ ಎಷ್ಟು ಸಹಜವಾಗಿ ನಟಿಸಿದ್ದಾನೋ, ಭಾವನಾತ್ಮಕ ಸನ್ನಿವೇಶಗಳಲ್ಲೂ ಅಷ್ಟೇ ಸಹಜವಾಗಿ ನಟಿಸಿದ್ದಾನೆ. ಚಿತ್ರದಲ್ಲಿ ಪುನೀತ್ ರಾಜಕುಮಾರ್ ಅಭಿಮಾನಿಯಾದ ಈ ಹುಡುಗ ಶಬ್ದವನ್ನು ಅಂದಾಜಿಸಿ ಶಬ್ದ ತೇಲಿ ಬರುವ ದಿಕ್ಕಿಗೆ ಕರೆಕ್ಟಾಗಿ ಕಲ್ಲು ಬೀಸುವ ವಿದ್ಯೆಯಲ್ಲಿ ಪಾರಂಗತ. ಕರುನಾಡ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಈತ ಪುನೀತ್ ಕೇಳುವ ಒಂದೊಂದೇ ಪ್ರಶ್ನೆಗೆ ಚಕಚಕನೆ ಉತ್ತರ ಕೊಡುವಾಗ ಪ್ರೇಕ್ಷಕ 'ಅರೆ! ಈ ಹುಡುಗ ನಮ್ಮ ಮನೆಯವನಲ್ಲವೇ?' ಅನ್ನುವಷ್ಟು ಆಪ್ತನಾಗುತ್ತಾನೆ. 'ಮೈತ್ರಿ' ನೋಡುವಾಗ ತಕ್ಷಣಕ್ಕೆ 'ಸ್ಲಂ ಡಾಗ್ ಮಿಲೇನಿಯರ್' ನೆನಪಾದರೂ ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಇಷ್ಟೇ ಅಲ್ಲ, 'ಮೈತ್ರಿ' ಸಿನಿಮಾ ನಿರ್ದೇಶಿಸಿದ ಬಿ.ಎಂ.ಗಿರಿರಾಜ್ ಎಷ್ಟು ಪ್ರತಿಭಾವಂತರೆಂದರೆ 'ನವಿಲಾದವರು', 'ಜಟ್ಟ'ದಂತಹ ಸಿನಿಮಾಗಳನ್ನು ಮಾಡಿದವರು. ಮುಸ್ಲಿಂ ಕುಟುಂಬ ಮತ್ತು ಭಯೋತ್ಪಾದನೆ ಸುತ್ತ ಹೆಣೆದ 'ನವಿಲಾದವರು' ಬರೀ ಮೂವತ್ತೈದು ಸಾವಿರ ರೂಪಾಯಿಗಳಲ್ಲಿ ಮಾಡಿದ ಪ್ರಯೋಗಾತ್ಮಕ ಸಿನಿಮಾ. ಪ್ರದೀಪ್ ಬೋಗಾದಿ, ಅಚ್ಯುತ್ ಕುಮಾರ್ ಮುಂತಾದವರು ಆ ಚಿತ್ರದಲ್ಲಿ ನಟಿಸಿದ್ದರು. ಆಮೇಲೆ ಮಾಡಿದ್ದು 'ಜಟ್ಟ'. 'ಜಟ್ಟ' ಒಳ್ಳೆಯ ಸಿನಿಮಾ ಎಂದು ಗುರುತಿಸಿಕೊಂಡಿದ್ದಲ್ಲದೇ, ಗಿರಿರಾಜ್ ಒಳಗಿನ ನಿರ್ದೇಶಕನನ್ನು ತೆರೆಯ ಮೇಲೆ ತೆರೆದಿಟ್ಟಿದ್ದಲ್ಲದೇ ಪುನೀತ್ ರಾಜಕುಮಾರ್, ಮೋಹನ್‌ಲಾಲ್ ತರಹದವರ ಬಿಗ್ ತಾರಾಪಡೆಯ 'ಮೈತ್ರಿ'ವರೆಗೂ ದಾರಿ ಮಾಡಿಕೊಟ್ಟಿತು. ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಸಾವಿರಾರು ಬೀದಿನಾಟಕಗಳನ್ನು, ಹತ್ತಾರು ರಂಗನಾಟಕಗಳನ್ನು ಮಾಡಿರುವ, 'ಕಥೆಗೆ ಸಾವಿಲ್ಲ' ಎಂಬ ಕಾದಂಬರಿಯನ್ನೂ ಬರೆದಿರುವ ಬಿ.ಎಂ.ಗಿರಿರಾಜ್ ಎಂಬ ಭರವಸೆ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಳ್ಳಲು ಅನುವಾಯಿತು.

'ಮೈತ್ರಿ' ಚಿತ್ರದ ಒಂದು ಸೀನ್ ಬಹುಕಾಲ ಕಾಡುತ್ತದೆ. ಈ ಸೀನ್.. ಡಿ.ಆರ್.ಡಿ.ಓ. ವಿಜ್ಞಾನಿ ಮಹದೇವ್ ಗೋಡ್ಸೆ (ಮೋಹನ್‌ಲಾಲ್) ತಮ್ಮ ಹೆಂಡತಿ ಅರ್ಚನಾ ಜೊತೆಗೂಡಿ ಬಾಲಕೈದಿಗಳಿರುವ ಸೆರೆಮನೆಗೆ ಹೋಗಿ ಸಿದ್ರಾಮನನ್ನು ದತ್ತು ಪಡೆದುಕೊಂಡು, ಆತನನ್ನು ತಮ್ಮೊಡನೆ ಕರೆದುಕೊಂಡು ಹೊರಡುವುದು; ಬಾಲಕೈದಿಗಳನ್ನು ನೋಡಲೆಂದು ಅಲ್ಲಿಗೆ ಬಂದಿದ್ದ ಪುನೀತ್ ರಾಜಕುಮಾರ್ ಕಡೆಗೆ ಮೋಹನ್‌ಲಾಲ್ ಕಣ್ಣುಗಳು ಹಾಗೆ ಒಮ್ಮೆ ತೇಲಿ ಮತ್ತೆ ತಮ್ಮ ದಾರಿಯತ್ತ ಹೊರಳುತ್ತವೆ... ತಮ್ಮ ಮಗನ ಸಾವಿಗೆ ಕಾರಣನಾಗಿದ್ದನೆಂಬ ಕಾರಣದಿಂದ ಯಾವ ಹುಡುಗ ಕರುನಾಡ ಕೋಟ್ಯಾಧಿಪತಿ ಆಟದಲ್ಲಿ ಗೆಲ್ಲಬಾರದು ಅಂತ ಮೋಹನ್‌ಲಾಲ್ ಬಯಸಿದ್ದರೋ, ಆತ ಹೇಗಾದರೂ ಸೋಲುವಂತೆ ಮಾಡಿ ಎಂದು ಪುನೀತ್ ರಾಜಕುಮಾರ್ ಅವರಲ್ಲಿ ವಿನಂತಿಸಿಕೊಂಡಿದ್ದರೋ ಅದೇ ಹುಡುಗನನ್ನು ಸ್ವತಃ ಮೋಹನ್‌ಲಾಲ್ ದಂಪತಿಗಳೇ ದತ್ತು ಪಡೆದು ತಮ್ಮೊಡನೆ ಕೊಂಡೊಯ್ಯುವ ದೃಶ್ಯ... ಇಷ್ಟೇ ಮೊನಚಾದ, ಭಾವೋತ್ಕರ್ಷಕ್ಕೆ ಎಡೆಮಾಡಿಕೊಡುವ ಅನೇಕ ಸೀನ್‌ಗಳು ಈ ಚಿತ್ರದಲ್ಲಿವೆ. ಇಂತಹ ಸೀನ್‌ಗಳು ಮ್ಯಾಸ್ಟ್ರೋ ಇಳಯರಾಜಾ ಅವರ ಹಾಡುಗಳ ಸಚ್ಚತನವನ್ನು ಮರೆಸಿ ಚಿತ್ರವನ್ನು ರುಚಿಕಟ್ಟಾಗಿ ನೋಡಿಸಿಕೊಂಡು ಹೋಗಬಲ್ಲವು. 'ಮೈತ್ರಿ'ಯನ್ನು ಬರೀ ಸಿನಿಮಾವಾಗಿಸದೆ ನಮ್ಮ ಸುತ್ತಣ ಸಮಾಜಕ್ಕೆ ಹಿಡಿದ ಕನ್ನಡಿಯಾಗಿಸಬಲ್ಲವು.



■ ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 11-03-2015 RNI No. KARKAN2005/



# ಪೋಲಿ ಚಿತ್ರ ನಿರ್ದೇಶಕನ ಸ್ವಚ್ಛತಾ ಕಾರ್ಯಕ್ರಮ

ಪ್ರಧಾನಿ ಮೋದಿ ಪೊರಕೆ ಹಿಡಿದುಕೊಳ್ಳುವ ಮೂಲಕ ದೇಶದಲ್ಲಿರುವ ಸೆಲಿಬ್ರಿಟಿಗಳೂ ಪೊರಕೆ ಹಿಡಿದುಕೊಳ್ಳುವಂತೆ ಮಾಡಿದರು. ಇದನ್ನು ನೋಡಿದ ಪೌರಕಾರ್ಮಿಕರು 'ನಮ್ಮ ಕೆಲಸದ ಕಥೆ ಏನಪ್ಪ' ಎಂಬ ಚಿಂತೆಯಲ್ಲಿರುವಾಗಲೇ ಆ ಸೆಲಿಬ್ರಿಟಿಗಳೆಲ್ಲ ಇದ್ದಲ್ಲೇ ಪೊರಕೆಗಳನ್ನು ಬಿಸಾಡಿ ತಂತಮ್ಮ ಎಸಿ ಕಾರ್‌ಗಳನ್ನು ಏರಿ ಜುಮ್ ಅಂತ ಹೊರಟರು.

ಅವರೆಲ್ಲ ಹೊರಟದ್ದೇ ತಡ ಪೌರಕಾರ್ಮಿಕರು 'ಉಸ್' ಅಂತ ನಿಟ್ಟುಸಿರು ಬಿಟ್ಟು ಮತ್ತೆ ಗೊಣಗುತ್ತಾ ಪೊರಕೆ ಹಿಡಿದು ನಮ್ಮ ನಗರಗಳನ್ನು ನಿಜವಾಗಲೂ ಸ್ವಚ್ಛ ಮಾಡುವ ಕಾಯಕದಲ್ಲಿ ತೊಡಗಿದರು.

ಇದೆಲ್ಲದರ ಮಧ್ಯೆ ಈ ಹಿಂದೆ 'ಮಿಡ್‌ನೈಟ್ ಮರ್ಡರ್', 'ಲವ್ ಇನ್ ನೇಪಾಳ್' ತರಹದ ಬಿ ಮತ್ತು ಸಿ ಗ್ರೇಡ್ ಸಿನಿಮಾಗಳನ್ನು ಮಾಡಿದ್ದ ಒಬ್ಬ ಪುಣ್ಯಾತ್ಮ ಇದ್ದಕ್ಕಿದ್ದಂತೆ 'ಸ್ವಚ್ಛ ಭಾರತ' ಅಂತ ಘೋಷಿಸಿದರೆ ಯಾರಿಗಾದರೂ ಅಚ್ಚರಿಯಾಗುವುದಿಲ್ಲವೆ? ಹೌದು, ಬಿ.ಆರ್.ಕೇಶವ್ ಎಂಬ ಮಹಾನುಭಾವ ನಿರ್ದೇಶಕ ತಮ್ಮ ಕೈಯಲ್ಲಿ ಪೊರಕೆ ಹಿಡಿದು 'ಸ್ವಚ್ಛ ಭಾರತ' ಎಂಬ ಕನ್ನಡ ಚಿತ್ರವನ್ನು ಮೊನ್ನೆ ಸೋಮವಾರ ಬೆಂಗಳೂರಿನಲ್ಲಿ ಆರಂಭಿಸಿದ್ದಾರೆ.

ಇದು ಬಿ.ಆರ್.ಕೇಶವ್ ಅವರು ನಿರ್ದೇಶಿಸುತ್ತಿರುವ 50ನೇ ಚಿತ್ರವಂತೆ. ಎಲ್ಲರ ಮನಸ್ಸನ್ನು ಸ್ವಚ್ಛ ಮಾಡಲು ಹೊರಟಿರುವ ಕೇಶವ್ ಮತ್ತು ಅವರ ಚಿತ್ರಕ್ಕೆ ಒಳಿತಾಗಲಿ.

# 'ಜೊತೆ...' ನಟಿಯ ಕಿರಿಕ್ ಪುರಾಣ

ಜೀ ಕನ್ನಡ ವಾಹಿನಿಯಲ್ಲಿ ತುಂಬಾ ಜನಪ್ರಿಯವಾಗಿರುವ ಧಾರಾವಾಹಿ 'ಜೊತೆ ಜೊತೆಯಲಿ' ತಂಡದಿಂದ ನಟಿ ಆಶಿತ ಚಂದ್ರಪ್ಪ ಹೊರಬಿದ್ದಿದ್ದಾರೆ. ತನ್ನ ಮೊದಲನೆಯ ಧಾರಾವಾಹಿಯಿಂದಲೇ ಸಾಕಷ್ಟು ಜನಪ್ರಿಯತೆ ಪಡೆದ ನಟಿ ಇದ್ದಕ್ಕಿದ್ದಂತೆ ಧಾರಾವಾಹಿಯಿಂದ ಹೊರನಡೆಯಲು ಕಾರಣವೇನು ಎಂದು ತಂಡದವರನ್ನು ಕೇಳಿದಾಗ ಅವರು ಹೇಳಿದ್ದು ಇಷ್ಟು: "ಮೊದಲಿನಿಂದಲೂ ಆಕೆ ತುಂಬಾನೇ ಕಿರಿಕ್ ಮಾಡ್ತಿದ್ಲು, ಸಮಯಪ್ರಜ್ಞೆ ಅನ್ನೋದೇ ಅವಳಿಗೆ ಇಲ್ಲ, ದಿನಾ ಚಿತ್ರೀಕರಣಕ್ಕೆ ತಡವಾಗಿ ಬರುತ್ತಿದ್ಲು, ಸಂಜೆ 6ರ ನಂತರ ನಟಿಸಬಾರದು ಎಂದು ಚಾನಲ್ ಮುಖ್ಯಸ್ಥರು



ಹೇಳಿದ್ದಾರೆ ಅಂತ ಶೂಟಿಂಗ್‌ನಿಂದ ಹೊರಡುತ್ತಿದ್ಲು, ಹಲವೊಮ್ಮೆ ಚಿತ್ರೀಕರಣ ನಡೆಯುತ್ತಿದ್ದರೂ 'ಇವತ್ತು ನನಗೆ ನಟಿಸಲು ಮೂಡ್ ಇಲ್ಲ, ನಾಳೇ ಮಾಡಿಕೊಳ್ಳಿ' ಎಂದು ಗಾಂಚಲಿ ಮಾಡ್ತಿದ್ಲು, ನಿರ್ದೇಶಕರು ಮತ್ತೊಂದು ಟೇಕ್ ಬೇಕು ಅಂದ್ರೆ 'ನನಗೆ ಆಗಲ್ಲ' ಎಂದು ಧಿಮಾಕು ಮಾಡ್ತಿದ್ಲು, ಕೊನೆಗೆ ಆಕೆಯ ಕಿರಿಕ್ ಅನ್ನು ಸಹಿಸಲಾಗದೆ ತಂಡದಿಂದ ಹೊರಹಾಕಿದ್ವಿ."

ಆದರೆ ನಟಿ ಆಶಿತ ಚಂದ್ರಪ್ಪ ಅವರನ್ನು ವಿಚಾರಿಸಿದಾಗ ಅವರು ಹೀಗೆ ಉತ್ತರಿಸಿದರು: "ಅವರು ನನ್ನನ್ನು ಹೊರಗೆ ಹಾಕಲಿಲ್ಲ, ನಾನೇ ಅವರ ಕಾಟ ಸಹಿಸಲಾಗದೆ ಹೊರಬಂದೆ. ಏಕೆಂದರೆ ಧಾರಾವಾಹಿಯ ನಿರ್ಮಾಪಕರಿಗೆ ಆಗಲಿ ನಿರ್ದೇಶಕರಿಗಾಗಲಿ ವೃತ್ತಿಪರತೆ ಎಂಬುದೇ ಇಲ್ಲ. ಕಲಾವಿದೆ ಆದ ನನ್ನನ್ನು ತುಂಬ ಕೀಳಾಗಿ ಕಾಣುತ್ತಿದ್ದರು. ಎಲ್ಲರ ಮುಂದೆ ಸುಮ್‌ಸುಮ್ಮನೆ ಬೈದು ಅವಮಾನ ಮಾಡುತ್ತಿದ್ರು."

ಅಪ್ಪ ಅಮ್ಮ ಜಗಳದಿಂದ ಕೂಸು ಬಡವಾಯ್ತು ಅನ್ನೊ ಹಾಗೆ ನಟಿ ಮತ್ತು ನಿರ್ಮಾಪಕರ ಜಗಳದಿಂದ ಜನಪ್ರಿಯ ಧಾರಾವಾಹಿ ಬಡವಾಗುತ್ತಿದೆ.

# 'ಯಶ್‌ಗೆ ಲೈಫ್ ಕೊಟ್ಟಿದಾಯ್ತು ಈಗ ಚಿರು ಸರದಿ'



"ನಟ ಯಶ್‌ಗೆ ಚಿತ್ರರಂಗದಲ್ಲಿ ಲೈಫ್ ಕೊಟ್ಟಿದ್ದು ನಾನೇ" ಎಂದು ಗಾಂಧಿನಗರದ ಗಲ್ಲಿಗಲ್ಲಿಗಳಲ್ಲಿ ಹೇಳಿಕೊಂಡು ಓಡಾಡುತ್ತಿರುವ ನಿರ್ದೇಶಕನ ಹೆಸರು ಗುರು ದೇಶಪಾಂಡೆ.

ಇವರು ನಿರ್ದೇಶಿಸಿರುವ ಮತ್ತೊಂದು ರೀಮೇಕ್ ಚಿತ್ರ 'ರುದ್ರತಾಂಡವ' ಬಿಡುಗಡೆಗೆ ಸಿದ್ಧವಾಗಿದೆ. ಇತ್ತೀಚೆಗೆ ಈ ಚಿತ್ರದ ಹೊಸ ಟ್ರೈಲರ್



ಅನ್ನು ನಟ-ನಿರ್ದೇಶಕ ಅರ್ಜುನ್ ಸರ್ಜಾ ಬಿಡುಗಡೆ ಮಾಡಿದ್ದಾರೆ.

ಅರ್ಜುನ್ ಸರ್ಜಾ ಅವರು "ಇದರ ಮೂಲ ತಮಿಳು ಚಿತ್ರವಾದರೂ ಕನ್ನಡ ಪ್ರೇಕ್ಷಕರಿಗೂ ರುಚಿಸುವ ನಿಟ್ಟಿನಲ್ಲಿ ಇಡೀ ಚಿತ್ರವನ್ನು ಹೊಸ ರೀತಿಯಲ್ಲಿ ನಿರೂಪಿಸಿದ್ದಾರೆ ಎನ್ನುವ ನಂಬಿಕೆ ಇದೆ. ಅಲ್ಲದೆ ಈ ಚಿತ್ರ ಚಿರು ವೃತ್ತಿ ಬದುಕಿಗೆ ಹೊಸ ತಿರುವು ಕೊಡುತ್ತದೆಂಬ ಭರವಸೆ ಇದೆ.



ಮೊದಲ ದಿನ ಮೊದಲ ಶೋ ನೋಡುವವರಲ್ಲಿ ನಾನೂ ಒಬ್ಬನಾಗಿರುತ್ತೇನೆ" ಎಂದು ಹೇಳಿ ಚಿತ್ರತಂಡದ ಬೆನ್ನು ತಟ್ಟಿರುವುದಾಗಿ 'ಲೈಫ್ ಕೊಡೋ ನಿರ್ದೇಶಕ' ಗುರು ದೇಶಪಾಂಡೆ ಹೇಳುತ್ತಿದ್ದಾರೆ.

ಯಾರಿಗೆ ಲೈಫ್ರೋ, ಯಾರಿಗೆ ಡೆತ್ರೋ, ಬಲ್ಲವರಾರು?



ಕೋಟಿಗೊಂದು ಲವ್‌ಸ್ಟೋರಿ
ರಾಕೇಶ್ ಶುಭಾ ಪೂಂಜಾ

# ಹುಚ್ಚ ವೆಂಕಟ್‌ನ ಹೊಸ ಸಾಹ



ಇತ್ತೀಚೆಗೆ ಗಾಂಧಿನಗರದಲ್ಲಿ 'ಕಿಚ್ಚ' ಅನ್ನೊ ಹೆಸರಿಗಿಂತ ಜಾಸ್ತಿ ಸದ್ದು ಮಾಡುತ್ತಿರುವ ಹೆಸರು 'ಹುಚ್ಚ'. ನೀವು ಯೂಟ್ಯೂಬ್ ಮತ್ತು ಫೇಸ್‌ಬುಕ್ ಖಾತೆದಾರರಾಗಿದ್ದರೆ ಯಾರು ಈ ಹುಚ್ಚ ಎನ್ನುವುದು ನಿಮಗೆ ಗೊತ್ತಾಗಿರುತ್ತದೆ. ಹೌದು ನಾವು ಈಗ ಹೇಳುತ್ತಿರುವುದು ನಿಮ್ಮ ನೆಚ್ಚಿನ "ಯೂಟ್ಯೂಬ್ ಸ್ಟಾರ್" ಹುಚ್ಚ ವೆಂಕಟ್ ಬಗ್ಗೆ.

ವಿಷಯ ಏನೂ ಅಂದರೆ ಈ ಹುಚ್ಚ ವೆಂಕಟ್ ಹೊಸ ಸಾಹಸಕ್ಕೆ ಕೈಹಾಕಿದ್ದಾರೆ. ಅವರು ಎಂ.ಜಿ.ಶ್ರೀನಿವಾಸ ನಿರ್ದೇಶಿಸುತ್ತಿರು 'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾ ಇಷ್ಟಕ್ಕೂ ಈ ಚಿತ್ರದಲ್ಲಿ ಹುಚ್ಚ ವೆಂಕಟ್‌ನ ಪಾತ್ರವೇನು?

ಚಿತ್ರದ ನಾಯಕನಿಗೆ ಹೇಗೆ ಲವ್ ಪ್ರಪೋಸ್ ಮಾಡಬೇಕು ಎಂ ಗೊಂದಲ ಮೂಡುತ್ತದೆ. ಆಗ ತನ್ನದೇ ಆದ ವಿಚಿತ್ರ ಮ್ಯಾನರಿಸಂನಲ್ಲಿ ಹು ವೆಂಕಟ್ ಒಂದು ಐಡಿಯಾವನ್ನು ನೀಡುತ್ತಾರೆ. ಈಗಾಗಲೇ ಹುಚ್ಚ ವೆಂಕಟ್ ಮಾತಿನ ಶೈಲಿ ನೋಡಿರುವವರಿಗೆ ಅವರ ಈ ಕಾಮಿಡಿ ಲವ್ ಪ್ರಪೋ ಐಡಿಯಾ ಹೇಗಿರುತ್ತದೆಂಬ ಅಂದಾಜು ಇದ್ದೇ ಇರುತ್ತದೆ.

ಅಂದಹಾಗೆ, ಹುಚ್ಚ ವೆಂಕಟ್ ಕೊಡುವ ಐಡಿಯಾದಿಂದ ನಾಯಕ ನಾಯಕಿ ಸಿಗುತ್ತಾಳೋ ಇಲ್ಲವೋ ಎಂಬುದನ್ನು ಸಿನಿಮಾ ನೋಡಿಯೆ ತಿಳಿಯಬೇಕು.

# ಶರ್ಮಿಳಾ ಡೈರೆಕ್ಟರ್ ಆಗ್ತಾರಂತೆ

'ಕಣ್ ಕಣ್ ಕಣ್ಣ ಸಲಿಗೆ... ಸಲಿಗೆ ಅಲ್ಲ ಸುಲಿಗೆ' ಎಂಬ ಹಾ ನೋಡಿರುವ ಯಾರಿಗೇ ಆಗಲಿ ಆ ಹಾಡಿನಲ್ಲಿ ರೋಚಕವಾಗಿ ಕಾಣು ಶರ್ಮಿಳಾ ಮಾಂಡ್ರೆಯನ್ನು ಒಂದು ಸಲ ಲವ್ ಮಾಡಿಬಿಡಬೇಕು ಅನ್ನಿಸು ಇರದು. ಅದಕ್ಕೆ ಕಾರಣ ಆಕೆಯ ಮೋಹಕತೆ ಮತ್ತು ಮಾದಕತೆಗಳ ಒಟ ಮಿಶ್ರಣ. ಹೋಲಿಕೆಯಲ್ಲಿ ಸ್ವಲ್ಪ ಅನು ಪ್ರಭಾಕರ್ ಥರ ಕಾಣುವ ಶರ್ಮಿ ಚೆನ್ನಾಗಿ ಕಾಣುತ್ತಿದ್ದದ್ದು ಸೀರೆಯಲ್ಲಿಯೇ. ಆಕೆ ಯಾವುದೇ ಮಾಡ್ರನ್ ಡ್ರೆ ತೊಟ್ಟರೂ ಸೀರೆಯಲ್ಲಿ ಕಾಣುವಷ್ಟು ಸೆಕ್ಸಿಯಾಗಿ, ಆಪ್ತವಾಗಿ ಕಾಣಿಸುವುದಿ ಇಂತಹ ನಟಿ 'ಸಜನಿ' ಚಿತ್ರದ ಹಾಡುಗಳಲ್ಲಿ ಎಳಸುಎಳಸಾಗಿಯೂ, 'ಕೃಷ್ಣ'ದ ಮುದ್ದುಮುದ್ದಾಗಿಯೂ ಕಂಡಿದ್ದರು. ಇನ್ನು 'ಸ್ವಯಂವರ', 'ವೆಂಕಟ ಇ ಸಂಕಟ', 'ಕರಿ ಚಿರತೆ', 'ಧನ್ ಧನಾ ಧನ್'.. ಮುಂತಾದ ಚಿತ್ರಗಳ ಕಾಣಿಸಿಕೊಂಡರೂ ಒಮ್ಮೆಲೇ ನಿದ್ದೆಗೆಡಿಸುವ ನಟಿಯಾಗಿ ಹೊರಹೊಮ್ಮ ಶರ್ಮಿಳಾಗೆ ಸಾಧ್ಯವಾಗಲೇ ಇಲ್ಲ, ಇದೀಗ ಮೂರ್ನಾಲ್ಕು ವರ್ಷಗಳ ನಂತ 'ಗೋವಾ' ಮತ್ತು 'ಮುಮ್ತಾಜ್' ಚಿತ್ರಗಳ ಮೂಲಕ ರೀ ಎಂಟ್ರಿ ಕೊಡುತ್ತಿರುವ ಈಕೆಗೆ ಒಂದು ಕನಸಿದೆ. ಅದೇನೆಂದರೆ ನಿರ್ದೇಶಕಿಯಾಗುವುದು. ಹಾಗಂತ ತಕ್ಷಣಕ್ಕೆ ಆ ಕನಸನ್ನು ನನಸು ಮಾಡಿಕೊಳ್ಳಲು ಹೋಗದೆಯೇ, ಈಗ ನಟನೆಯತ್ತ ಗಮನ ಕೊಟ್ಟು ಮೂರ್ನಾಲ್ಕು ವರ್ಷಗಳ ನಂತರ ನಿರ್ದೇಶನಕ್ಕೆ ಕೈಹಾಕುವ ಯೋಜನೆ ಹೊಂದಿದ್ದಾರಂತೆ. ಇಷ್ಟಕ್ಕೂ



ಶರ್ಮಿಳಾ ಮಾಂಡ್ರೆಗೂ ಚಿತ್ರರಂಗಕ್ಕೂ ಮೊದಲಿನಿಂದಲೂ ಸಂಬಂಧವಿದೆ. ಈಕೆಯ ಕುಟುಂಬದ ಮಂದಿ ಅನೇಕ ಚಿತ್ರಗಳನ್ನು ವಿತರಿಸಿದ್ದಲ್ಲದೆ ನಿರ್ಮಾಣ ಮಾಡಿದ ಚರಿತ್ರೆಯೂ ಇದೆ. ಇಂತಹ ಶರ್ಮಿಳಾ ಮಾಂಡ್ರೆಗೆ ತಮಗಿರುವ ಬೇಡಿಕೆ ಕಡಿಮೆಯಾಗುತ್ತಿರುವುದು ಈಗಾಗಲೇ ಗೊತ್ತಾಗಿರುವುದರಿಂದಲೇ ಮುಂದೆ ನಿರ್ದೇಶನಕ್ಕೆ ಕೈಹಾಕಿ ಹೊಸಬಗೆಯ ವೃತ್ತಿಬದುಕನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಅನ್ನಬಹುದು. ನಟಿಯಾಗಿ ಅಷ್ಟೇನೂ ಸಕ್ಸಸ್ ಕಾಣದ ಶರ್ಮಿಳಾ ಆಕ್ಷನ್ ಕಟ್ ಹೇಳಿ ಗೆದ್ದರೆ ಖುಷಿ ಪಡದವರು ಯಾರಿದ್ದಾರೆ ಹೇಳಿ?